Motion to pass.

Sri S. NIJALINGAPPA.—I beg to move :

"That the Mysore Appropriation (No. 3) Bill, 1966, be passed."

Mr. SPEAKER.—The question is :

"That the Mysore Appropriation (No. 3) Bill, 1966, be passed."

The motion was adopted .

BUDGET ESTIMATES FOR 1966-67—DEMANDS FOR GRANTS.

Demand No. 10, 29, 30, 45, 46, 27, 9 and 11.

(Debate Continued)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕರೇ, ಸಾಮಾನ್ಯ ಅಡಳಿತ ದಿನೇ ದಿನೇ ನಿರ್ವೀರ್ಯವಾಗಿ ಕೃಷವಾಗುತ್ತಾ ಇದೆ. ಇದು ಮೈಸೂರಿನ ಸಾಮಾನ್ಯ ಜನತೆಯು ಅಶೋತ್ತರ ಈಡೇರಿಸುವುದಕ್ಕೆ ಸಹಾಯಕವಾಗಿಲ್ಲ ಎಂದು ಹೇಳುತ್ತೇನೆ. ವಿಧಾನ ಸೌಧದ ಸಾಮಾನ್ಯ ಅಡಳಿತ ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ಹಣಕಾಸಿನ ಸಚಿವರು ಮಾರ್ಚಿ 7ನೆಯ ತಾರೀಖು ಒಂದು ಕಡೆ ಮಾತನಾಡಿದುದನ್ನು ಸಭೆಗೆ ಹೇಳಿದರೆ ಮೈಸೂರು ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದು ಎಲ್ಲರಿಗೂ ವೇದ್ಯವಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಣಕಾಸಿನ ಸಚಿವರು ಹೀಗೆ ಹೇಳಿದ್ದಾರೆ.

> "Mysore Government Secretariat is most inefficient. In the Secretariat anything could be done by influence. For promotion, only influence was counted and not effieiency. Underserving and inefficient people were promoted..."

Sri K. PUTTASWAMY (Minister for Co-operation and Housing).—I rise to a point of order. No Hon'ble Member can be permitted to quote from a Newspaper.

Sri C. J. MUCKANNAPPA.—There is an observation by the Hon'ble Speaker that if we believe a statement to be true, then that statement can be quoted. Further, the Hon'ble Speaker has ruled that if an Hon'ble Member quotes information from any newspaper, he must take the full responsibility. That is why I am taking this responsibility. The Hon'ble Minister for Finance made this categorical statement when he addressed the Accountants Association of the Controller's Office at a function held at the Secretariat Club :

> "For promotions only influence was counted and not efficiency and undeserving and inefficient people were promoted and efficient people were kept in the same position because of want of influence. Unless the vicious influence was rooted down, the efficiency of the Government Secretariat would not improve... Many States had described Mysore Government Secretariat as inefficient."

ಮೈಸೂರು ಸಂಸ್ಥಾನದ ಹಣಕಾಸಿನ ಸಚಿವರು ಮೈಸೂರು ವಿಧಾನ ಸೌಧದಲ್ಲಿ ಮೈಸೂರು ಸರ್ಕಾರದ ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಎನ್ನತಕ್ಕಂಥಾದಕ್ಕೆ ಒಂದು

ಸರ್ಟಿಫಿಕೇಟ್ ಕೊಟ್ಟುಬಿಟ್ಟಿದ್ದಾರೆ. ಅದರಿಂದಾಗಿ ನಾನು ಮಾನ್ಯ ಮಿತ್ರರಾದಂತಹ ಸಹಕಾರ ಶಾಖೆಯ ಮಂತ್ರಿಗಳಿಗೆ ಇದನ್ನು ಸ್ವಲ್ಪ ಯೋಚಿಸಬೇಕೆಂದು ಹೇಳುತ್ತೇನೆ. ಇದು ತಮ್ಮ ಮೇಲೆ ರಿಫ್ಲೆಕ್ಟ್ ಆಗುತ್ತದೆಯೇ, ಅಥವಾ ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳ ಮೇಲೆ ರಿಫ್ಲೆಕ್ಟ್ ಆಗುತ್ತದೆಯೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತಿನ ದಿವಸ ಸಾಮಾನ್ಯ ಆಡಳಿತಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ, ಇಂದು ಒಂದು ಕಾಗದವು ವಿಧಾನ ಸೌಧದಿಂದ ತಾಲ್ಲೂಕು ಆಫೀಸುಗಳಿಗೆ ಮುಟ್ಟಬೇಕಾದರೆ ತಿಂಗಳುಗಟ್ಟಲೆ ಬೇಕಾಗುತ್ತದೆ. ಇದರಿಂದ ಜನತೆಯ ಕಲ್ಯಾಣ ಎಷ್ಟರ ಮಟ್ಟಿಗೆ ಆಗುತ್ತದೆ ಎಂಬುದನ್ನು ತರುಣರೂ, ಆದರ್ಶ ಪ್ರಾಯರೂ ಆದ ಮಾನ್ಯ ಹಣಕಾಸಿನ ಮಂತ್ರಿಗಳು ಆಲೋಚನೆ ಮಾಡಬೇಕು. ಇವತ್ತಿನ ದಿವಸ ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದವರು ಇನ್ ಎಫೀಷಿಯಂಟ್ ಆಗಿದ್ದಾರೆ, ಅವರಿಗೆ ಇಂದು ವಿಧಾನ ಸೌಧದಲ್ಲಿ ಕಾರ್ಯಗತ ಮಾಡತಕ್ಕಂತಹ ಅಧಿಕಾರಿಗಳ ಮೇಲೆ ತಮ್ಮ ಕಂಟ್ರೋಲನ್ನು ಇಡುವುದಕ್ಕೆ ಸಾಧ್ಯವಾಗಿಲ್ಲದ ಕಾರಣ ಇದೆಲ್ಲಾ ಈ ರೀತಿ ನಡೆಯುತ್ತಿದೆ ಎಂದು ನಮಗೆ ಅರ್ಥವಾಗುತ್ತದೆ. ಹಿಂದೆ ಇದ್ದಂತಹ ಶ್ರೀ ಪಿ.ವಿ. ಆರ್. ರಾವ್ ಇರುವಾಗ ನಾವು ಹೇಳಿದ್ದೆವು, ಅವರು ಬ್ರಾಹ್ಮಣರು, ಅವರು ಬ್ರಾಹ್ಮಣರಿಗೇನೆ ಪ್ರೋಮೋಶನ್ಸ್ ಕೊಡುತ್ತಾರೆ, ಮತ್ತು ಈ ಶಾಸನ ಸಭೆಯಲ್ಲಿ ಅವರನ್ನು ಇಲ್ಲಿಂದ ಓಡಿಸುವರೆಗೂ ನಾವು ಯಾರೂ ನಿದ್ರೆ ಕೂಡ ಮಾಡಲಿಲ್ಲ ಎಂದು. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರು, ಏನೆಂದರೆ ನಾವು ಇನ್ನೊಬ್ಬ ಐ. ಸಿ. ಎಸ್. ಆಫೀಸರನ್ನು ಕರೆದುಕೊಂಡು ಬರುತ್ತೇವೆ, ರಾಜ್ಯದಲ್ಲಿ ಕಲ್ಯಾಣವನ್ನು ಉಂಟು ಮಾಡುತ್ತೇವೆ, ರಾಜ್ಯವೆಲ್ಲಾ ಜಳ ಜಳವಾಗುತ್ತದೆ ಎಂದು ಎಲ್ಲಾ ಹೇಳಿದರು. ಆದರೆ ಇವತ್ತು ನೋಡಿದರೆ ನಮ್ಮ ಆಶೆಯೆಲ್ಲಾ ನಿರಾಶೆಯಾಯ್ತು. ಇವತ್ತು ನಮ್ಮ ಈ ಒಂದು ಆಡಳಿತದ ಯಂತ್ರ ತುಕ್ಕು ಹಿಡಿದುಹೋಗಿದೆ. ಎಲ್ಲಿ ನೋಡಿದರೂ ಒಂದೊಂದು ವಿಷವ್ಯೂಹ ಮಾಡಿಕೊಂಡಿದ್ದಾರೆ; ಒಂದೊಂದು ಕಡೆಯವರದ್ದು ಒಂದೊಂದು ಗುಂಪನ್ನು ಮಾಡಿಕೊಂಡಿದ್ದಾರೆ. ಹೈದರಾಬಾದ್ ಕರ್ಣಾಟಕದವರದು ಒಂದು ಗುಂಪು, ಬೊಂಬಾಯಿ ಕರ್ಣಾಟಕದವರು ಒಂದು ಗುಂಪು, ಹಳೆ ಮೈಸೂರಿನವರದ್ದು ಒಂದು ಗುಂಪು, ಎಂದು ಹಲವಾರು ಗುಂಪುಗಳನ್ನು ಮಾಡಿಕೊಂಡಿದ್ದಾರೆ. ಈ ತರಹ ಮಾಡಿಕೊಂಡು ತಮ್ಮ ತಮ್ಮ ಗುಂಪಿನ ಸ್ವಾರ್ಥ ಸಾಧನೆ ಮಾಡುತ್ತಿದ್ದಾರೇ ವಿನಾ ಬೇರೆ ಯಾವುದೂ ಇಲ್ಲ. ಇದರಿಂದಾಗಿ ಇಂದು ಈ ಒಂದು ಸಾಮಾನ್ಯ ಆಡಳಿತ ಎಂದು ನಾವು ಏನು ಕರೆಯುತ್ತಿದ್ದೇವೆ ಅದು ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಅದರಿಂದ ಫಲ ಏನು ಸಿಗಬೇಕಾಗಿತ್ತೋ ಅದು ಇಂದು ಸರಿಯಾಗಿ ಸಿಗುತ್ತಾ ಇಲ್ಲ ಎಂಬುದನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇವೆ. ಒಂದೊಂದು ತೀರ್ಮಾನ ಮಾಡುವುದಕ್ಕೆ ಒಂದು ಶಿಕ್ಷೆ ಕೊಡುವುದಕ್ಕೆ, ಅಥವಾ ಒಂದು ನೋಟ್ ಹಾಕುವುದಕ್ಕೆ, ಹೀಗೆ ಎಷ್ಟೋ ವಿಧವಾದ ಕೆಲಸಗಳಿಗೆ ಇವತ್ತಿನ ದಿವಸ ಜಿ. ಎ. ಡಿ. ಯೊಳಗೆ ಎಷ್ಟೋ ದಿನಗಳಾಗುತ್ತದೆ; ಮತ್ತು ಅವರು ಯಾರು, ಯಾವ ಗುಂಪಿಗೆ ಸೇರಿದವರು ಎಂಬುದು ನಡೆಯುತ್ತದೆಯೇ ಹೊರತು, ಒಂದು ನೀತಿ ನ್ಯಾಯವಿಲ್ಲವಾಗಿದೆ. ಇವೆಲ್ಲಾ ಕಾರಣದಿಂದ ನಾನು ಇಲ್ಲಿ ಗೌರ್ನರ್ ಆಡಳಿತ ಬರುವುದು ಒಳ್ಳೆಯದು ನಾನು ಅದನ್ನು ಸ್ವಾಗತಿಸುತ್ತೇನೆ. ಏಕೆಂದರೆ ಈ ತುಕ್ಕು ಹಿಡಿದಿರತಕ್ಕ ಮೆಶಿನರಿಯನ್ನು ಸುಸೂತ್ರವಾಗಿ ನಡೆಸುವುದಕ್ಕೆ ಸರ್ಕಾರದ ಕೈಯ್ಯಲ್ಲಿ ಸಾಧ್ಯವಿಲ್ಲವಾಗಿದೆ ಎಂದು ನಾನಾದರೂ ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ತಿಳಿಸಲಿಚ್ಛಿಸುತ್ತೇನೆ. ಇವರು, ಈ ಸರ್ಕಾರದವರು ಯಾರಾದರೂ ಒಬ್ಬ ಅಧಿಕಾರಿಗೆ ಡೆಪ್ಯುಟಿ ಕಮಿಷನರಾಗಿ ಐ.ಎ.ಎಸ್.ಗೆ ಕನ್‌ಫರ್ಮ್ ಮಾಡುತ್ತೇವೆ ಎಂದಾಗ, ಮಂತ್ರಿಮಂಡಲದಲ್ಲಿ, ಅವನಿಗೆ ಏನೇನೂ ಎನ್‌ಕ್ವಯರಿ ಮಾಡಿ, ಅವನ ಮುಖಕ್ಕೆ ಮಸಿ ಬಳಿಯಲು ಪ್ರಯತ್ನಿಸಿ, ಅವನಿಗೆ ಐ. ಎ. ಎಸ್. ಆಗದ ಹಾಗೆ ಮಾಡುವುದಕ್ಕೆ ಏನೇನು ಬೇಕು ಅದನೆಲ್ಲಾ ಮಾಡುತ್ತಿದ್ದಾರೆ ಇದರ ಅಂಕಿ ಅಂಶಗಳನ್ನು ಕೊಡಬೇಕೆಂದಿದ್ದರೆ ನನ್ನ ಹತ್ತಿರ ನೂರಾರು ಇವೆ. ಮೂಗಿಗಿಂತ ಮೂಗುತ್ತಿ ಭಾರ ಎಂದ ಹಾಗೆ ಇವತ್ತು ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಸರ್‌ಪ್ಲಸ್ ಆಗಿದ್ದಾರೆ. ಇವತ್ತಿನ ದಿವಸ ಮೈಸೂರಿನಲ್ಲಿ ಇಂತಹ ಅಧಿಕಾರಿಗಳು ಎಷ್ಟೋ ಮಂದಿ ಇದ್ದಾರೆ. ಇವರಿಗೆ ಯಾರೊಬ್ಬರಿಗೂ ಕನ್ನಡ ಬರುವುದಿಲ್ಲ. ನಮ್ಮ ಚೀಫ್ ಸೆಕ್ರಟರಿಯವರಿಗೂ ಕೂಡ ಇಲ್ಲಿಗೆ ಬರುವಾಗ ಕನ್ನಡ ಬರುತ್ತಿರಲಿಲ್ಲ. ಆದರೆ ಈಗ ಅವರು ಎಷ್ಟುಮಟ್ಟಿಗೆ ಕಲಿತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಈ ವಿಧಾನಸೌಧದಲ್ಲಿ ಬರೇ ಐ.ಎ.ಎಸ್. ಮತ್ತು ಐ.ಸಿ.ಎಸ್. ಅಧಿಕಾರಿಗಳಿಂದ ತುಂಬಿದೆಯೇ ಹೊರತು ಏನೊಂದೂ ಪ್ರಯೋಜನವಾಗುತ್ತಿಲ್ಲ. ಇದರಿಂದ ನಾನು ನಮ್ಮ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಅಧಿಕಾರಿಗಳ ಬದಲು ಆಡಳಿತವನ್ನು ಸರಿಮಾಡುವುದಕ್ಕೆ ಬೇರೇನಾದರೂ ವ್ಯವಸ್ಥೆ ಮಾಡಬೇಕು. ಇಂದು ಡೆಪ್ಯುಟಿ ಕಮಿಶನರು ಇದ್ದಾರೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿದ್ದಾರೆ ಡೆಪ್ಯುಟಿ ಕಮಿಷನರು ಆರ್ಡರು ಮಾಡುತ್ತಾರೆ. ಅಂಥವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಲು ಅಧಿಕಾರವಿಲ್ಲ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅಧಿಕಾರಿಗಳ ಮೇಲೆ ಸಿ.ಸಿ.ಎ. ರೂಲ್ಸ್ ಇಲ್ಲದೆ ಕ್ರಮ ತೆಗೆದುಕೊಂಡರೆ, ಮತ್ತು ಅವರು ಹೈಕೋರ್ಟಿಗೆ ಹೋದರೆ ನಿಮ್ಮ ಕ್ರಮ ಎಲ್ಲಿಗೆ ಹೋಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಲಾ ಡಿಪಾರ್ಟ್‌ಮೆಂಟ್ ಇದೆ, ಚೀಫ್ ಸೆಕ್ರಟರಿ ಇದ್ದಾರೆ, ಇವರೆಲ್ಲಾ ಸರಿಯಾದ ರೀತಿಯಲ್ಲಿ ಸಲಹೆ ಮಾಡದೆ ಹೋದರೆ, ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು.

ಇವತ್ತಿನ ಧಿವಸ ಈ ದೊಡ್ಡ ದೊಡ್ಡ ಸ್ಥಾನದಲ್ಲಿರತಕ್ಕ, 3 ಸಾವಿರ, 4 ಸಾವಿರ ರೂಪಾಯಿ ಸಂಬಳ ಪಡೆಯತಕ್ಕ ಅಧಿಕಾರಿಗಳು, ಸಣ್ಣಪುಟ್ಟ ಅಧಿಕಾರಿಗಳ ಮೇಲೆ ತಮ್ಮ ಅಧಿಕಾರ ದರ್ಪವನ್ನು ತೋರಿಸಿ, ಅಸಿಸ್ಟೆಂಟ್ ಕಮಿಷನರ್ ಮೊದಲಾದವರನ್ನೆಲ್ಲಾ ನುಚ್ಚು ನೂರು ಮಾಡುತ್ತಾರೆ. ಇವತ್ತು ಸೆಕ್ರಟರಿಯೇಟಿನಲ್ಲಿ ಯಾರು ಯಾರು 10 ವರ್ಷಗಳ ಹಿಂದೆ ಇಲ್ಲಿ ಇದ್ದರೋ, ಅವರು ಇಂದೂ ಕೂಡ ಎಲ್ಲಿಯೂ ಮುಂದಕ್ಕೆ ಹೋಗಲಿಲ್ಲ. ಅವರು ಮಗಳಿಗೆ ಮದುವೆ ಮಾಡಿದರು, ಮಗನಿಗೆ ಮದುವೆ ಮಾಡಿದರು, ಎಲ್ಲಾ ಮಾಡಿಕೊಂಡು ಇಲ್ಲಿಯೇ ಮನೆ ಮಾಡಿಕೊಂಡು ಇದ್ದಾರೆ. ಬೆಂಗಳೂರನ್ನು ಬಿಟ್ಟು ಎಲ್ಲಿಯೂ ಹೋಗಲಿಲ್ಲ. ಏಕೆಂದರೆ ಮಂತ್ರಿಮಂಡಲದಲ್ಲಿ ಅವರಿಗೆ ಬೇಕಾದ ಎಲ್ಲಾ ಶಿಫಾರಸುಗಳು ಸಿಗುತ್ತದೆ.

ಇನ್ನೊಂದು ದೃಷ್ಟಾಂತ ಕೊಡುತ್ತೇನೆ. ಒಬ್ಬ ಐ.ಪಿ.ಎಸ್. ಆಫೀಸರನ್ನು ಡಿಸ್‌ಮಿಸ್ ಮಾಡಬೇಕೆಂದು ಎಲ್ಲಾ ಆರ್ಡರುಗಳು ಆಗಿರುವಾಗ, ಅದು ಕೇವಲ ಒಬ್ಬ ಮಠಾಧಿಪತಿಯ ಮುಖಾಂತರ ಅವನನ್ನು ರಿಇನ್‌ಸ್ಟೇಟ್ ಮಾಡಬೇಕೆಂದು ತೀರ್ಮಾನವಾಯಿತು. ಇನ್ನೊಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಮಾಡಬೇಕೆಂದು ಹೇಳಿ ಹೈಕೋರ್ಟಿನವರು ಲೀವ್ ಕೊಡದೆ ಹೋದರೂ ಇವರು ಡೈರೆಕ್ಟ್ ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಆದೇಶ ಕೊಡುವಂತಹ ಈ ಲಾ ಡಿಪಾರ್ಟ್‌ಮೆಂಟ್ ಎಷ್ಟು ಮಟ್ಟಿಗೆ ಅಡ್ವೈಸ್ ಮಾಡುತ್ತದೆ ಎಂದು ಗೊತ್ತಾಗುತ್ತದೆ ಇವತ್ತು ಆಗತಕ್ಕಂಥದನ್ನು ನೋಡಿದರೆ, ಒಂದೊಂದು ಜಾತಿ, ಒಂದೊಂದು ಕೋಮಿನವರು ಎಂದು ದೃಷ್ಟಿಯಲ್ಲಿಟ್ಟುಕೊಂಡು ನಡೆದರೆ ಉಳಿದ ಜನಗಳ ಪಾಡೇನು, ಸ್ವಾಮಿ ! ಇವತ್ತು ರೇವಣ್ಣನಿಗೆ ಒಂದು ತರಹ ರೇವಣ್ಣಸಿದ್ದಪ್ಪನಿಗೆ ಒಂದು ತರಹ ಮಾಡಿದರೆ ಇದು ಸರಿಯಾಗುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ನಾನು ಕೂಡ ಇಲ್ಲಿ 140 ಜನರ ಒಂದು ಪಟ್ಟಿಯನ್ನು ಬೇಕಾದರೆ ಇಡಲು ತಯಾರಾಗಿದ್ದೇನೆ. ಇದರಿಂದ ಯಾರಿಗೆ ಅನುಕೂಲವಾಗಿದೆ, ಯಾರಿಗೆ ಅನಾನುಕೂಲವಾಗಿದೆ ಎಂಬುದು ಅವರಿಗೆ ಗೊತ್ತಾಗುತ್ತದೆ. ಇನ್ನೊಬ್ಬ ಡೆಪ್ಯೂಟಿ ಕಮಿಷನರ ಮೇಲೆ ಮುಖ್ಯ ಮಂತ್ರಿಯವರು ಎನ್‌ಕ್ವಾಯರಿ ಮಾಡಲಿ ಎಂದು ಹೇಳಿದ್ದಾರೆ. ಇದರಿಂದ ಎಷ್ಟು ದಕ್ಷತೆ ಇದೆ ಎಂದು ಗೊತ್ತಾಗುತ್ತದೆ. ನಿಮ್ಮ ಈ ಲಾ ಡಿಪಾರ್ಟ್‌ಮೆಂಟ್, ಈ ಜನರಲ್ ಎಡ್ಮಿನಿಸ್ಟ್ರೇಶನ್ ಯಾವ ತರಹ ಕೆಲಸ ಮಾಡುತ್ತದೆ ಎಂದು ತಿಳಿಯುತ್ತದೆ. ಈ ತರಹ ಕುಸಿದು ಬಿದ್ದಂತಹ ಆಡಳಿತವನ್ನು ಸರಿಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ನಾನಾದರೂ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ 9 ಜನ ಚೀಫ್ ಇಂಜಿನಿಯರ್ಸ್ ಇದ್ದಾರೆ. ಮೊನ್ನೆ ತಾನೆ ಒಬ್ಬರಿಗೆ ಚೀಫ್ ಇಂಜಿನಿಯರಾಗಿ ಪ್ರೊಮೋಟ್ ಮಾಡಿದ್ದಾರೆ. ಹತ್ತಾರು ಜನ ಎಕ್ಸಿಕ್ಯೂಟಿವ್ ಇಂಜಿನಿಯರನ್ನು ಸೂಪರ್‌ಸೀಡ್ ಮಾಡಿ ಒಬ್ಬರನ್ನು ಮೊನ್ನೆ ತಾನೆ ಪಿ.ಡಬ್ಲ್ಯೂ.ಡಿ. ಜಾಯಿಂಟ್ ಸೆಕ್ರಟರಿಯಾಗಿ ಮಾಡಿದ್ದಾರೆ ಏನು ಅನ್ಯಾಯ ಇದು ! ಆದ್ದರಿಂದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದಂತಹ ಮಾತುಗಳನ್ನು ಬಂಗಾರದ ಅಕ್ಷರಗಳಲ್ಲಿ ಬರೆದಿಡಬೇಕಾಗುತ್ತದೆ. ಕೆಳಗಿರತಕ್ಕಂತಹ ಆಫೀಸರುಗಳನ್ನು ಒಂದೇ ಸಮನೆ ಮೇಲಧಿಕಾರಿಗಳಾಗಿ ಮಾಡಿದರೆ ಉಳಿದವರಿಗೆ ಎಷ್ಟು ಮಟ್ಟಿಗೆ ಮನ ನೊಂದುಕೊಳ್ಳುತ್ತದೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕೆಂದು ಇಲ್ಲಿ ನಾನು ಹೇಳಬೇಕಾಗಿದೆ.

2-30 P.M.

ಸ್ವಾಮಿ, ಏನಾದರೂ ಮಾಡಲಿ, ಯಾರೇ ಇರಲಿ, ಅವರು ಕೆಲಸ ಮಾಡುವುದಕ್ಕೂ ಒಂದು ಮಿತಿ ಇರಬೇಡವೇ ? ಅಧಿಕಾರದಲ್ಲಿದ್ದಾಗ ಏನೋ ಒಂದು ಅಚಾತುರ್ಯದಿಂದ ಆದರೆ ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳದೆ ಬಿಡಬಹುದು. ಆದರೆ ದಿನವಹಿ ಈ ಕೆಲಸವ ದರೆ ಮುಖ್ಯ ಮಂತ್ರಿಗಳು ಈ ಕೆಲಸಗಳನ್ನೆಲ್ಲ ಏಕೆ ರಾಷ್ಟ್ರೀಕರಣ ಮಾಡಬಾರದು ? ಹಾಗೆ ರಾಷ್ಟ್ರೀಕರಣ ಮಾಡುವುದರಿಂದ ಯಾರದೂ ಕೂಗು ಇರುವುದಿಲ್ಲ, ಯಾವ ಕುಲ, ಯಾವ ಗೋತ್ರ, ಯಾವ ಜಾತಿ ಎಂದು ಹೇಳಬೇಕಾಗುವುದಿಲ್ಲ. ರಸ್ತೆ ಸಾರಿಗೆ, ಕೈಗಾರಿಕೆ ಇವುಗಳನ್ನು ರಾಷ್ಟ್ರೀಕರಣ ಮಾಡಿದಂತೆ ಕೆಲಸಗಳನ್ನೂ ರಾಷ್ಟ್ರೀಕರಣ ಮಾಡಿದರೆ ನಮಗೆ ಯಾರ ಮೇಲೂ ಕೋಪ ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ ನಾನು ಸರ್ಕಾರದವರಿಗೆ ಹೇಳುತ್ತೇನೆ, ಈ ಪಾಮದಾರಿಯನ್ನು ಹಿಡಿದರೆ ತೊಂದರೆ

ಬರುತ್ತದೆ. ಅದಕ್ಕೋಸ್ಕರವಾಗಿ ತಮ್ಮ ಜಾಗ ಉಳಿಯಬೇಕಾದರೆ, ತಮ್ಮ ದೇಶದ ಕೆಲಸ ಆಗ ಬೇಕಾದರೆ ನ್ಯಾಯಸಮ್ಮತವಾಗಿ ನಡೆಯಬೇಕು ಎಂದು ನಾನು ಮುಖ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ,

ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳ ಮೇಲೆ ಮಾತನಾಡಬೇಕಾದರೆ ಒಂದು ಗಂಟೆ ಕಾಲ ಬೇಕು. ಸಾಮಾನ್ಯ ಆಡಳಿತ ಬಾಬಿನ ಮೇಲೆ ಮಾತನಾಡುವುದಕ್ಕೇ ಇಷ್ಟು ಹೊತ್ತು ಆಯಿತು. ಇವತ್ತು ಸಾಮಾನ್ಯ ಆಡಳಿತದಲ್ಲಿರುವ ಅನೇಕ ಅಧಿಕಾರಿಗಳನ್ನು ರಿಟ್ರೆಂಚ್ ಮಾಡಬೇಕು ಮತ್ತು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಡೆಲ್ಲಿಗೆ ಬರೆದು ಇಂಥ ಅಧಿಕಾರಿಗಳು ನಮಗೆ ಬೇಡ ಎಂದು ಅವರನ್ನು ಕಳಿಸಬೇಕು. ಇಲ್ಲದೇ ಹೋದರೆ ಈ ದೇಶದ ಆದಾಯ ವೆಚ್ಚದ ಮೇಲೆ ಭಾರಿ ಹೊರೆಯಾಗುತ್ತದೆ. ಇದನ್ನು ಸರ್ಕಾರ ಯೋಚನೆ ಮಾಡಬೇಕು.

ನ್ಯಾಯ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಒಂದು ಮಸೂದೆಯನ್ನು ತಂದು, ಅದಕ್ಕೆ ಅಂಗೀಕಾರ ಪಡೆದು ಎಲ್ಲ ತಾಲ್ಲೂಕುಗಳಲ್ಲಿಯೂ ಮುನ್‌ಸೀಫ್ ಕೋರ್ಟ್ ಬೇಕು, ಎಲ್ಲ ಜಿಲ್ಲೆಯಲ್ಲಿಯೂ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟ್ ಬೇಕು ಎಂದು ಕಾನೂನು ಮಾಡಿದರು. ಎಲ್ಲಿ ಕೆಲಸವಿದೆಯೋ ಅಲ್ಲಿ ಕೋರ್ಟುಗಳನ್ನು ಕೊಡಿ, ಎಲ್ಲಿ ವ್ಯವಹಾರ ಹೆಚ್ಚಾಗಿದೆಯೋ ಅಲ್ಲಿ ಮುನಸೀಫ್ ಕೋರ್ಟುಗಳನ್ನು ಸ್ಥಾಪನೆ ಮಾಡಿ. ವರ್ಕ್‌ಲೋಡ್ ಹೆಚ್ಚು ಇರುವ ಕಡೆ ಡಿಸ್ಟ್ರಿಕ್ಟ್ ಕೋರ್ಟ್ ತೆರೆಯಿರಿ. ಎಲ್ಲಿ ಕೆಲಸವಿಲ್ಲ, ಎಲ್ಲಿ ಎರಡು ಮೂರು ಕೇಸುಗಳು ಮಾತ್ರ ಇರುತ್ತವೆ ಅಂಥ ಕಡೆಗಳಲ್ಲೆಲ್ಲ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್‌ಕೋರ್ಟುಗಳನ್ನು ತೆರೆಯುವುದಾದರೆ ಅದರ ಮೇಲೆ ಎಷ್ಟು ಹಣ ವೆಚ್ಚಮಾಡುವುದಕ್ಕಾಗುತ್ತದೆ ? ಇದು ಸರ್ಕಾರಕ್ಕೆ ಭಾರವಾಗುವುದಿಲ್ಲವೇ ? ಒಂದು ಸ್ಥಳದ ಸಮೀಪದಲ್ಲಿ ಲಿಟಿಗೆಂಟ್ ಪಬ್ಲಿಕ್ ಇದ್ದರೆ, ಅವರಿಗೆ ದೂರವಾಗಬಾರದು, ಅವರಿಗೆ ಹತ್ತಿರವೇ ನ್ಯಾಯ ದೊರೆಯಬೇಕು ಎನ್ನುವ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲಸ ಇಲ್ಲದೆ ಹೋದರೆ ಅಂಥ ಕಡೆಗೆ ಒಂದು ಕೋರ್ಟ್ ಮಾಡಿ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡುವುದು ಸರ್ವಥಾ ಸರಿಯಲ್ಲ. ಸರ್ಕಾರಕ್ಕೆ ಬೇರೆ ಕೆಲಸಗಳಿಗೆ ಖರ್ಚು ಮಾಡಲು ಹಣವಿಲ್ಲದೆ ಭಾರವಾಗುತ್ತದೆ. ಅದಕ್ಕೋಸ್ಕರ ಸರ್ಕಾರದವರು ಜಿಲ್ಲಾ ಕೋರ್ಟ್‌ಗಳನ್ನು ತೆರೆಯಬೇಕೆಂದು ಮನಸ್ಸು ಮಾಡಿದ್ದರೂ ಸ್ವಲ್ಪ ಕಾಲ ಹಿಡಿದಿಟ್ಟಿರುವುದು ಒಳ್ಳೆಯದು. ಇವತ್ತು ತುರ್ತು ಪರಿಸ್ಥಿತಿಯಿಂದಾಗಿ ಅನೇಕ ಕೆಲಸಗಳನ್ನು ಮಾಡುವುದಕ್ಕೆ ಹಿಂತೆಗೆಯುತ್ತಿದ್ದಾರೆ. ದೇಶದಲ್ಲಿ ಬಂದಿರುವ ಅಭಾವ ಪರಿಸ್ಥಿತಿ, ಆಹಾರದ ಕೊರತೆ ಇವೆಲ್ಲ ಕೊನೆಗೊಂಡು ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳುವವರೆಗೂ ಜಿಲ್ಲಾ ಕೋರ್ಟುಗಳನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡಬಾರದೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿದ್ದ ಎರಡನೆ ಡಿಸ್ಟ್ರಿಕ್ಟ್ ಕೋರ್ಟನ್ನು ತೆಗೆದು ಹಾಕಿದರು. ಅದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಎಲ್ಲಿ ಕೆಲಸವಿಲ್ಲವೋ ಅಲ್ಲಿರುವ ಕೋರ್ಟುಗಳನ್ನು ತೆಗೆದು ಹಾಕಬೇಕು. ಕುಣಿಗಲ್, ಪಾವಗಡ ಇಂಥ ಸ್ಥಳಗಳಲ್ಲಿ ಕೋರ್ಟುಗಳನ್ನು ಮಾಡಿ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ, ನನ್ನ ಊರಿಗೆ ಕೊಡಬೇಡಿ. ಕುಣಿಗಲ್‌ನಿಂದ ಹತ್ತಿರದ ಕೋರ್ಟಿಗೆ ಬರಬೇಕಾದರೆ 50 ಮೈಲಿ ಆಗುತ್ತದೆ, ಪಾವಗಡದಿಂದ ಮಧುಗಿರಿಗೆ ಬರಬೇಕಾದರೆ 60 ಮೈಲಿ ಆಗುತ್ತದೆ. ಎಲ್ಲಿ ಲಿಟಿಗೆಂಟ್ ಪಬ್ಲಿಕ್ ಜಾಸ್ತಿ ಇದ್ದಾರೆ ಎಲ್ಲಿ ನ್ಯಾಯ ದೊರಕುವುದಕ್ಕೆ ಕಷ್ಟವಾಗುತ್ತದೆ, ಎಲ್ಲಿ ಪ್ರಯಾಣಕ್ಕೆ ತೊಂದರೆ ಇದೆ ಅಂಥ ಕಡೆ ಕೋರ್ಟುಗಳನ್ನು ಸ್ಥಾಪನೆ ಮಾಡುವುದು ನ್ಯಾಯವೇ ಹೊರತು ಯಾರೋ ಬಂದು ಹೇಳಿದರು ಎಂದು ಕೋರ್ಟುಗಳನ್ನು ಸ್ಥಾಪನೆ ಮಾಡುವುದಕ್ಕೆ ಹೋಗಬಾರದು.

ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಮತ್ತು ಸರ್ಕಾರಿ ಪ್ಲೀಡರುಗಳನ್ನು ನೇಮಕ ಮಾಡಿರುವುದು ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ, ಆದರೆ ಸರಿಯಾಗಿ ಕೆಲಸ ಮಾಡದೆ ಇರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಯಾರಾದರೂ ಸರ್ಕಾರಕ್ಕೆ ಸಂಬಂಧಪಟ್ಟ ಕೇಸಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ ನೀನು ಎಷ್ಟು ಹಣ ಕೊಡುತ್ತೀಯಾ ಅಡ್ವೈಸ್ ಮಾಡುತ್ತೇನೆ ಇಲ್ಲದೆ ಇದ್ದರೆ ವಿರುದ್ಧವಾಗಿ ಮಾಡುತ್ತೇನೆ ಎಂದು ಹೇಳುತ್ತಾರೆ. ಹೀಗೆ ಸರ್ಕಾರಿ ಪ್ಲೀಡರುಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳು ಸರ್ಕಾರದ ಹಿತಕ್ಕೆ ವಿರೋಧವಾಗಿ ನಡೆಯುತ್ತಿದ್ದಾರೆ. ಇಂಥವರನ್ನು ಕೂಡಲೇ ತೆಗೆದುಹಾಕುವುದು ಸೂಕ್ತ ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇನ್‌ಸ್ಟೆನ್ಸಸ್ ಹೇಳು ಎಂದರೆ ನಾಲ್ಕು ಇನ್‌ಸ್ಟೆನ್ಸಸ್ ಹೇಳುತ್ತೇನೆ. ಒಂದು ಸಂದರ್ಭದಲ್ಲಿ ಹಣವನ್ನು ಕೊಡಬಹುದೇ, ಬೇಡವೇ ಎಂದು ಅಭಿಪ್ರಾಯವನ್ನು ಕೇಳಿದಾಗ ಹಣ ಕೊಟ್ಟರೆ ನಿನಗೆ ಅನುಕೂಲ ಮಾಡಿ ಕೊಡುತ್ತೇನೆ ಎಂಬುದಾಗಿ 400 ರೂಪಾಯಿ ತೆಗೆದುಕೊಂಡು ಎರಡು ಸಾವಿರ ರೂಪಾಯಿಗಳ ಸೆಕ್ಯೂರಿಟಿ ಇದ್ದಾಗ ಐದು ಸಾವಿರ ರೂಪಾಯಿ ಸಾಲ ಕೊಡಬಹುದು ಎಂದು ಅಡ್ವೈಸ್ ಮಾಡಿದರು. ಇಂಥವರನ್ನು ಸರ್ಕಾರದ ಹಿತವನ್ನು ಕಾಪಾಡುವುದಕ್ಕೆ ನೇಮಕ ಮಾಡುತ್ತಿದ್ದಾರೆ, ಇಂಥ ಪ್ಲೀಡರುಗಳನ್ನು ಇಟ್ಟುಕೊಳ್ಳದೆ ಅವರನ್ನು ವಜಾ ಮಾಡಬೇಕು. ಪೋಲೀಸ್ ಇಲಾಖೆಯಿಂದ, ಮ್ಯಾಜಿಸ್ಟ್ರೇಟರಿಂದ ರಿಪೋರ್ಟ್ ತರಿಸುತ್ತೀರಿ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅದರೆ ಯಾರೋ ತಮಗೆ ಇನ್‌ಫ್ಲುಯನ್ಸ್ ತಂದು, ಪ್ರಭಾವ ಬೀರಿ ಒತ್ತಾಯ ಹಾಕುತ್ತಾರೆ. ಚಿಲ್ಲರೆ ಕೇಸುಗಳನ್ನು ಮಾತ್ರ ನಡೆಸುತ್ತ ಲಾಯರಾಗಿರಬಹುದು. ಆದರೂ ಐದಾರು ವರ್ಷ ಬಾರ್‌ನಲ್ಲಿ ಕೆಲಸ ಮಾಡಿದ್ದಾದೆ, ಅನುಭವವಿದೆ ಎಂದು ಹೇಳುತ್ತಾರೆ. ಅಗ ಅವರನ್ನು ನೇಮಕ ಮಾಡುತ್ತಾರೆ. ಇಂಥವರಿಂದ ಸರಿಯಾಗಿ ಕೆಲಸ ನಡೆದು ಸರ್ಕಾರದ ಹಿತ ರಕ್ಷಣೆಯಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು.

ಇವತ್ತು ವಿಧಾನ ಸೌಧದಲ್ಲಿ ನಡೆಯುತಕ್ಕ ಅನ್ಯಾಯ, ಅಕೃತ್ಯಗಳನ್ನು, ಇಲ್ಲಿರುವ ಅದಕ್ಷತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಿರತಕ್ಕ ಮುಖ್ಯ ಕಾರ್ಯದರ್ಶಿಗಳಿಂದ ಈ ರಾಜ್ಯದಲ್ಲಿ ಅಗಿರತಕ್ಕ ಅನ್ಯಾಯವನ್ನು ತಪ್ಪಿಸಲು ಅವರನ್ನು ಬದಲಾವಣೆ ಮಾಡಿ ಬೇರೆ ಒಬ್ಬ ಒಳ್ಳೆಯ ಮುಖ್ಯ ಕಾರ್ಯದರ್ಶಿಗಳನ್ನು ತರುವುದಕ್ಕೆ ಮೈಸೂರು ಸರ್ಕಾರ ಮತ್ತು ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. S. PATIL.—Sir, as most of the Hon'ble Members have spoken on General Administration and General Demand, I should like to confine my attention to these irrigation projects and the Public Works Department which is dealing with the subject. So far as the amounts of these demands are concerned they are provided by Demands Nos. 29,30,45 and 46, covering an amount of Rs. 20,68,66,100. This is a fairly big amount which is expected to be spent during the coming year.

Sir, so far as the major irrigation projects are concerned, especially the two projects in the north of the State, *i.e*, Malaprabha Project and the Krishna Project, they were conceived by this Government long ago and several lakhs of rupees have been spent on these projects, but no actual work has been carried out as yet. For a project, which requires fifty or hundred crores of rupees, this Government is making a provision of 20 or 25 lakhs or even 10 lakhs for a year, and I do not know when these projects are to be completed. Should they be completed during the life time of the present generation or are they meant for the future generation, we do not know. Such big projects which are going to irrigate large tracts of land and which are going to increase our food production and agricultural production—if these are to be neglected in this way, I do not think there are any bright prospects for the future of our State. So, my submission is, when a project is investigated and completes estimates and plans are ready, then Government must spend and see that the work is done. At present, what is being done is, just the construction here and there of some roads, and some buildings, but about the actual work, there is nothing. That sort of doing work is really hampering the administration and the progress of the State. That is why, I should like to bring to the notice of the Hon'ble Minister that this is not the way in which they should carry out the big projects.

The next point is about minor irrigation. Under minor irrigation during the last 2 to 3 years, we have spent sufficient amount. But the amount is being decreased year by year. During the next year I think the amount has been decreased by more than one crore. It is not good. Several minor irrigatian projects are still in the process of being completed. I learn that the minor irrigation projects are being carried

out in a haphazard manner. Only earth work that is required for constructing dams is being done through the cheap labour available in those parts and the technical work is always neglected. We all know that the rates are rising and the contractors are now demanding increased rates. So at the cost of the treasury why should we allow these contractors to be benefitted by the delay caused by themselves. This aspect of the case must be taken into consideration by the Government and when they have entrusted the work to the contractors, they must see that they complete the work within a specified time and at the rates agreed to and not a pie more is paid to these contractors on the ground that the rates have been increased during recent times. This one of the ways which will bring in immediate effects so far as minor irrigation is concerned and there should not be any curtailment in that expenditure.

The next point that I should like to press is there is a bit of discontent in the staff prevailing in this department because of the fact known to everyone but some of them do not dare to speak. Our Government, especially our Secretariat is known for its delays, for slackness in duty, known for its laches and even if a minister passes an order it is difficult for the person concerned to get it within a month or two. That is the usual practice followed in our Secretariat. But there is one case which is very illuminating indeed. An order was passed for transfer of an officer who was more than 300 miles away, on the 2nd March. The officer got the order and took charge of his new office on the 3rd March. This is really wonderful. I do not understand how the order that was passed on the 2nd was sent to the place where he was serving 300 miles away, and how he came here and occupied the office before 3rd. This is really most wonderful and I do not know whether we should give credit to the Government for the effective or speedy order or whether we should suspect that there is something behind all this affair. I should like to request the Government not to give any scope to anybody for charging the Government that it is communal or partial. There is another case of an officer who had approached the high court for his seniority being not considered. The high court has passed an order about a year back. The high court has said that the order of the Government giving the particular person seniority above three or four persons is not legal and not proper and it must be set right. But what has the Government done ? The Government says that they want to appeal to the Supreme Court. Even though an year has passed since the order was made by the court, the Government have kept the man on the same post on the ground that they want to appeal. I do not know the limitation period in such cases for appealing to the Supreme Court. I have no idea. But this is improper. When the judicial authority has set aside the order of the Government, it is the duty to obey and not to postpone on one ground or the other. That creates a sort of dissatisfaction among our services and that will upset the whole administration. A servant unless he has got good faith unless he feels that his interests will always be safeguarded as per rules and law, he is not expected to

(SRI V. S. PATIL)

work wholeheartedly. That is why I should like to tell the Government that such cases should not occur and if they have occurred they must be rectified immediately.

Another thing that our Government have done is, they have set up one investigation department within the branch. This investigation department is working there for such a long time. They have investigated schemes and drawn up plans and including the present schemes it would cost 600 crores to implement them. If we look to the five year plans, at the most they include about 50 crores and even if 100 crores is included, it will take six five years plans for completing all the schemes. That means it will require 30 years. So where is the necessity of maintaining that particular branch of officers when they have completed investigation for the coming 30 years. Where is the necessity for maintaining a vast organisation and highly paid servants. I know one of the Investigation Assistant Engineers who is posted about 30 or 40 miles away from Bangalore, is residing in Bangalore. He never goes to the place of work. He simply goes there once or twice in a month to draw his salary. This shows that even the P. W. D. is overcrowded and there is absolutely no work. According to reliable and authoritative sources I can say that 30 per cent of the staff is in excess. There is no need for 30 per cent of excessive staff which can be curtailed. If these things are taken into consideration, I think we need not sell our securities or go on borrowing from others. In order to have a clear cut, definite and progressive policy of the Government, we must see that our servants work during the scheduled hours, *i.e.*, 12 to 5. Atleast five hours work must be there. Otherwise if the officers and our servants work for a couple of hours or one or two hours and then go for taking coffee or lunch and all these things that are happening here, then administration will be spoiled and we will be taxing unnecessarily our people. That should not be the case. That is why I should like to suggest that the excess of staff must be curtailed at any cost. There is a direction from the centre to cut down at least 10 per cent of expenditure on every department. I can say from authoritative source that even 30 per cent of expenditure can be cut down and efficiency brought about. Where is the necessity of increasing the number of persons who do not work and asking those who are ready to work to be lazy? It is not the way in which we expect the progress of the country and we must change our outlook so far as our servants are concerned.

Sir, I would like to submit one more thing so far as this Public works Department is concerned, and that is, the creation of separate Circles, simply to give a job to some person who has got a hold either on our Hon'ble Chief Minister or some other Minister or some other Congress boss, is not proper. The work must be there; otherwise it is no use spending huge mony on the staff, and you will find that most of the money that is made available in the next year's Budjet goes for the

payment and maintenance of staff. That is not the way in which the country or a State which wants to progress by doing work is expected to do. That is why I should like to submit that the curtailment of the staff is quite essential, and the illegal actions that are being maintained by the Government must be wiped out as early as possible. Thank you, Sir.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ ಸರ್ಕಾರದವರು ಬೇಡಿಕೆ 10, 29, 30, 45, 46, 27, 9, 11, ಇವುಗಳನ್ನು ಒಟ್ಟು ಸೇರಿಸಿ ನಮ್ಮ ಮುಂದಿಟ್ಟು ಹಣವನ್ನು ಕೇಳಿದ್ದಾರೆ. ಇದರಲ್ಲಿ ನ್ಯಾಯಾಂಗ, ಶಾಸಕಾಂಗ ಕಾರ್ಯಾಂಗ ಈ ಮುಖ್ಯ ಅಂಶಗಳ ಜೊತೆಗೆ ಇನ್ನು 2-3 ಇಲಾಖೆ ಗಳು ಬರುತ್ತವೆ. ಕಡಿಮೆ ಸಮಯದಲ್ಲಿ ಎಲ್ಲಾ ಇಲಾಖೆಗಳ ಬಗ್ಗೆಯೂ ವಿಮರ್ಶೆ ಮಾಡಿ ಸಲಹೆಗಳನ್ನು ಕೊಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಕೆಲವು ವಿಷಯಗಳನ್ನು ಮಾತ್ರ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾತಂತ್ರ್ಯ ಬಂದ ನಂತರ ನಮ್ಮ ಜನತಂತ್ರ ಆಡಳಿತ ವ್ಯವಸ್ಥೆ ಈ ದೇಶದಲ್ಲಿ ಎಷ್ಟರಮಟ್ಟಿಗೆ ರೂಪಗೊಂಡಿದೆ, ಅದು ಎಷ್ಟರಮಟ್ಟಿಗೆ ತನ್ನ ಜವಾ ಬ್ದಾರಿಯನ್ನು, ಕರ್ತವ್ಯಗಳನ್ನು ನಿರ್ವಹಿಸಿದೆ, ದೇಶವನ್ನು ಕಟ್ಟತಕ್ಕಂಥ ಕೆಲಸದಲ್ಲಿ ತನ್ನ ಜವಾ ಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಿಸಿದೆ ಎಂಬುದನ್ನು ನಾವು ಅವಲೋಕಿಸಿದರೆ ಸೂಕ್ತ ತಿದ್ದುಪಡಿ ಗಳನ್ನು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ್ದು ಬಹಳ ಅಗತ್ಯ ಎಂಬುದು ವ್ಯಕ್ತವಾಗುತ್ತದೆ. ಸರ್ಕಾರದವರು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ ರಾಜ್ಯಪಾಲರ ಹುದ್ದೆಯನ್ನು ರದ್ದುಪಡಿಸಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡುವುದು ಅವಶ್ಯಕ. ರಾಜ್ಯಪಾಲರ ಹುದ್ದೆಗಳನ್ನು ಸಾಮಾನ್ಯ ವಾಗಿ ನಿವೃತ್ತ ಒಬ್ಬ ಕಾಂಗ್ರೆಸ್ ರಾಜಕಾರಣಿಗೆ ಪುನರ್ ವಸತಿಗೆ ಅನುಕೂಲ ಮಾಡುವ ರೀತಿಯಲ್ಲಿ ಈ ಹುದ್ದೆ ಬಂದಿದೆ. ಕೇರಳದಲ್ಲಿ ನಮ್ಮ ರಾಜ್ಯದಿಂದ ಆರಿಸಿ ಹೋದಂತಹ ಒಬ್ಬರು ಎ.ಂ ಪಿ. ಗಳು ರಾಜ್ಯಪಾಲರಾಗಿ ಇದ್ದದ್ದನ್ನು ನಾವು ನೋಡಿದ್ದೇವೆ. ಈ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರ ಬೇಕಾದ್ದು ಬಹಳ ಅವಶ್ಯಕ. ಅದಕ್ಕೆ ರಾಜ್ಯಾಂಗವನ್ನು ಕೂಡ ತಿದ್ದುಪಡಿ ಮಾಡಬೇಕು.

ಇನ್ನು ಎರಡನೇಯದು, ನಮ್ಮ ರಾಜ್ಯದಲ್ಲಿ ಒಂದು ಮೇಲ್ಮನೆ ಇದೆ. ನಾವು ಬಹಳ ಸಲ ಹೇಳಿ ದ್ದೇವೆ. ಇದರ ಅವಶ್ಯಕತೆ ಇಲ್ಲ ಇದರಿಂದ ದೇಶಕ್ಕೆ ಹೊರೆಯಾಗುತ್ತದೆ ಎನ್ನುವ ಮಾತನ್ನು ಪುನಃ ನಾನು ಒತ್ತಾಯಮಾಡಿ ಹೇಳುತ್ತೇನೆ. ಈ ವಿಷಯದಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾದ್ದು ಬಹಳ ಅವಶ್ಯಕ ಎಂದು ಹೇಳುತ್ತೇನೆ.

ಇನ್ನು ಮಂತ್ರಿ ಮಂಡಲದ ಪುನರ್ ವ್ಯವಸ್ಥೆ ಆಗಬೇಕಾಗಿತ್ತು. ಒಬ್ಬರು ಉಪಸಚಿವರು ನಿಧನರಾದರು. ಒಬ್ಬರು ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರು. ಒಬ್ಬರ ಮೇಲೆ ಗುರು ತರವಾದ ಅಪಾದನೆಗಳನ್ನು ಮಾಡಿ ವಿರೋಧ ಪಕ್ಷದ ಅನೇಕ ಸದಸ್ಯರು ಸಹಿ ಮಾಡಿ ಕೊಟ್ಟರು. ಜೊತೆಗೆ ಅನೇಕ ಬದಲಾವಣೆಗಳು ಆದಾಗ್ಯೂ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಇಲಾಖೆ ಗಳನ್ನೂ ವಹಿಸಿಕೊಂಡಿದ್ದಾರೆ. ಸಾಮಾಜಿಕ ಅಭಿವೃದ್ಧಿ ಖಾತೆಗೆ ಮೊದಲು ಒಬ್ಬರು ಪ್ರತ್ಯೇಕವಾಗಿ ಮಂತ್ರಿಗಳು ಇದ್ದರು. ಅವರು ರಾಜೀನಾಮೆಯನ್ನು ಕೊಟ್ಟಮೇಲೆ ಅದನ್ನು ಮುಖ್ಯ ಮಂತ್ರಿಗಳೇ ವಹಿಸಿಕೊಂಡಿದ್ದಾರೆ. ನಾನು ಹೇಳುವುದೇನೆಂದರೆ, ಮುಖ್ಯ ಮಂತ್ರಿಗಳಾಗಿರತಕ್ಕವರು ಈ ಇಲಾಖೆ ಗಳ ಜವಾಬ್ದಾರಿಯನ್ನು ಆದಷ್ಟು ಕಡಿಮೆ ಮಾಡಿಕೊಂಡು ಸಮಗ್ರವಾಗಿ ಎಲ್ಲಾ ಇಲಾಖೆಗಳಲ್ಲಿಯೂ ಕೆಲಸ ಹೇಗೆ ನಡೆಯುತ್ತದೆ. ಸರಿಯಾದ ರೀತಿ ನೀತಿಗಳನ್ನು ಅನುಸರಿಸಿ ನಡೆಯುತ್ತಿದೆಂಯೇ, ಆಡಳಿತ ದಲ್ಲಿ ಎಲ್ಲಿ ಲೋಪದೋಷಗಳಿವೆ, ಎನ್ನುವುದನ್ನು ನೋಡಿಕೊಂಡು ಅದನ್ನು ಸರಿಪಡಿಸುವುದರಲ್ಲಿಯೂ, ಮತ್ತು ರಾಜ್ಯದ ಹಿತವನ್ನು ರಕ್ಷಿಸಿ ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುವುದು, ಮತ್ತು ಅವುಗಳನ್ನು ಕಾರ್ಯಗತ ಮಾಡುವ ಬಗ್ಗೆ ಇತ್ಯಾದಿಗಳಲ್ಲಿ ಅವರು ಹೆಚ್ಚು ಕಾಲವನ್ನು ಕಳೆಯಬೇಕಾದ್ದು ಅಗತ್ಯ. ಅದರ ಜೊತೆಗೆ ಕೇಂದ್ರ ಸರ್ಕಾರದೊಡನೆ ಸಂಬಂಧ ನೆರೆ ಹೊರೆಯ ರಾಜ್ಯಗಳ ಸಂಬಂಧ ಮತ್ತು ದೇಶದ ಊರ್ಜಿತಾವಸ್ಥೆಗೆ ಸಂಬಂಧ ಪಟ್ಟ ಸಮಸ್ಯೆಗಳನ್ನು ಜವಾಬ್ದಾರಿಯಿಂದ ಒಂದು ದೃಢ ಮನಸ್ಸಿನಿಂದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಿದ್ಧರಾಗಬೇಕು. ಮತ್ತು ತಮ್ಮ ಕಾಲವನ್ನು ಯಾವಾಗಲೂ ಅದಕ್ಕೆ ಮೀಸ ಲಾಗಿಡಬೇಕು. ಈಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ನೀರಾವರಿಗೆ ಸಂಬಂಧಪಟ್ಟ ಇಲಾಖೆಗಳನ್ನು ಇಟ್ಟುಕೊಂಡಿದ್ದಾರೆ. ಮತ್ತು ಸಮಾಜಿಕ ಅಭಿವೃದ್ಧಿ ಖಾತೆಗಳು ಮತ್ತು ಇತರ ಕೆಲವು ಇಲಾಖೆಗಳನ್ನು ಇಟ್ಟಿಕೊಂಡಿದ್ದಾರೆ. ಇದರಿಂದ ಕಾರ್ಯ ಕುಂಠಿತವಾಗುತ್ತಿದೆ. ವಿರೋಧ ಪಕ್ಷ ದವರು ಎರಡು ಮೂರು ಸಲ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದರು. ಗಂಭೀರವಾದ ಅಪಾದನೆಗಳನ್ನು ಮಂತ್ರಿಮಂಡಲದ ಮೇಲೆ ಮಾಡಿದ್ದರು. ಕಡಿಮೆ ಸಂಖ್ಯೆಯಲ್ಲಿರತಕ್ಕ ವಿರೋಧಪಕ್ಷದವರು ಅವಿಶ್ವಾಸ ನಿರ್ಣಯವನ್ನು ಮಂಡಿಸುತ್ತಾರೆ. ಆದ್ದರಿಂದ ಅದಕ್ಕೆ ಮಹತ್ವ ಇಲ್ಲ, ಆದರೆ ವಿರೋಧ ಪಕ್ಷದವರು ಮಾಡಿರತಕ್ಕ ಅಪಾದನೆಗಳಿಗೆ ಆಧಾರ ಇದೆಯೇ, ಇದರ ಬಗ್ಗೆ ಜನತೆಯ

(ಶ್ರೀ ಎಸ್. ಗೋಪಾಲಗೌಡ)

ಅಭಿಪ್ರಾಯ ಏನಿದೆ ಎಂಬುದನ್ನು ಯೋಚನೆ ಮಾಡದೆ ಅದನ್ನು ಕಡೆಗಾಣಿಸಿಬಿಟ್ಟರು. ಶರಾವತಿಯ ಸಂಬಂಧದಲ್ಲಿ ಬಂದಂಥ ಅಪಾದನೆಗಳು ಅನೇಕ ಇವೆ. ಅದರ ಜೊತೆಗೆ ಮತ್ತೆ 12 ಲಕ್ಷ ರೂಪಾಯಿ ಗಳನ್ನು ಕೊಡಬೇಕಾದಂತಹ ಒಂದು ಕಂಟ್ರಾಕ್ಟಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇಂಥಾದ್ದು ನಡೆಯುತ್ತಿದೆ. ಇದರಿಂದ ಪ್ರಜಾಪ್ರಭುತ್ವ ವಿಫಲವಾಗುವುದಕ್ಕೆ ಅವಕಾಶವಾಗಿದೆ. ಆಡಳಿತ ಪಕ್ಷದಲ್ಲಿರತಕ್ಕ ಜನರು ಜನಾಭಿಪ್ರಾಯ ಪತ್ರಿಕೆಗಳ ಮೂಲಕವೇ ಬರಲಿ, ಸಾರ್ವಜನಿಕರ ಮೂಲಕವೇ ಬರಲಿ ಅದನ್ನು ನಿರ್ಲಕ್ಷಿಸದೆ ಅದಕ್ಕೆ ಮಹತ್ವ ಕೊಡಬೇಕು. ಮತ್ತು ಶ್ರೀ ಸಾಮಾನ್ಯ ದಿಂದ ಒಂದು ದೂರು ಬಂದರೂ ಕೂಡ ಅದಕ್ಕೆ ಮಹತ್ವ ಕೊಟ್ಟು ಅದನ್ನು ಪರಿಪಾಲನೆ ಮಾಡಬೇಕು, ವಿಚಾರಣೆ ಮಾಡಬೇಕು. ಶ್ರೀರಾಮನ ಕಾಲದಲ್ಲಿ ಅಗಸ ಹೇಳುವ ಒಂದು ಸಣ್ಣ ಅಪಾದನೆಗಾಗಿ ಶ್ರೀರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದನು. ರಾಜನಾಗಿದ್ದಂಥ ಶ್ರೀರಾಮನು ಒಬ್ಬ ಸಾಮಾನ್ಯ ಮನುಷ್ಯನಾದ ಅಗಸರವನ ಮಾತನ್ನು ಕೇಳುವ ಅಗತ್ಯವಿರಲಿಲ್ಲ. ರಾಜರಾಗಿ ಹುಟ್ಟಿದೇ ಇರತಕ್ಕ ನಮ್ಮ ಮಂತ್ರಿಗಳು ರಾಜ್ಯದಲ್ಲಿ ಅಧಿಕಾರವನ್ನು ಪಡೆಯಬೇಕಾದರೆ 5 ವರ್ಷಕ್ಕೊಂದು ಸಾರಿ ಚುನಾ ವಣೆಗೆ ನಿಂತು ಜನಗಳಿಂದ ವೋಟಿನ ಭಿಕ್ಷೆಯನ್ನು ಬೇಡಿ ಅಧಿಕಾರಕ್ಕೆ ಬಂದು 5 ವರ್ಷ ಕಳೆದ ಮೇಲೆ ಮತ್ತೆ ತಕ್ಷಣ ಮನೆಗೆ ಹೋಗಬೇಕು. ಇಂಥಾ ವ್ಯವಸ್ಥೆಯಲ್ಲಿ ಕೂಡ ಜನಾಭಿಪ್ರಾಯವನ್ನು ನಿರ್ಲಕ್ಷ್ಯ ಮಾಡುತ್ತಾರೆ. ಜನಾಭಿಪ್ರಾಯವನ್ನು ತಿಳಿದು ನಿಮ್ಮ ಅವಧಿಯಲ್ಲಿ ಹೀಗೆಯೇ ಮುಂದುವರಿಯುತ್ತಾ ಇರುವುದು ಸೂಕ್ತವಲ್ಲ. ಅದ್ದರಿಂದ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು. ಅಥವಾ ಅಪಾದನೆ ಗಳ ಬಗ್ಗೆ ವಿಚಾರಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೊನೆಯದಾಗಿ ಹೇಳುತ್ತೇನೆ. ಈಗಾಗಲೇ ಎಲ್ಲರ ಗಮನವೂ ಚುನಾವಣೆಯ ಕಡೆ ಇದೆ. ಇಳಿಜಾರಿನಲ್ಲಿದ್ದಾರೆ. ಈ ಮಂತ್ರಿಮಂಡಲ ದವರು ರಾಜೀನಾಮೆಯನ್ನು ಕೊಟ್ಟು ಶ್ರೀಮಾನ್ ಶಿವಪ್ಪನವರಿಗೆ ಅಧಿಕಾರವನ್ನು ಕೊಡಬೇಕು ಎನ್ನುವ ಮಾತು ಸಾಧ್ಯವಿಲ್ಲ. ಅದನ್ನು ನಾವು ಬಯಸುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಅಪಾದನೆ ಮಾಡತಕ್ಕ ವರು ಒಬ್ಬನೇ ಇರಲಿ ಅಥವಾ 10 ಜನಗಳೇ ಇರಲಿ ಅವನ ಅಭಿಪ್ರಾಯದ ಪ್ರಕಾರ ಜನತಂತ್ರಕ್ಕೇ ಮರ್ಯಾದೆಯನ್ನು ಕೊಡುವಂತೆ ಮಾಡಬೇಕು. ಯಾರ ಮೇಲೆ ಅಪಾದನೆಗಳನ್ನು ಮಾಡಿರುತ್ತಾರೆಯೋ ಅವರನ್ನು ವಿಚಾರಣೆಗೆ ಗುರಿಪಡಿಸಿ ಅವರು ರಾಜೀನಾಮೆಯನ್ನು ಕೊಡುವಂತೆ ಮಾಡಬೇಕು.

3-00 P.M.

ಅಪಾದನೆಗಳ ಮೇಲೆಯೇ ಪ್ರಜಾಪ್ರಭುತ್ವದ ಅಳಿವು ಹಾಗೂ ಉಳಿವು ನಿಂತಿರುವುದು. ಜನಗಳಿಗೆ ಅವರ ಅಪಾದನೆಗಳು ಎಷ್ಟು ಮುಖ್ಯ ಎನ್ನುವುದನ್ನು ಇಲ್ಲಿ ತಿಳಿಸುವುದು ಬಹು ಮುಖ್ಯ. ಇದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕು ಮತ್ತು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಇಲ್ಲಿ ಕೇಳು ತ್ತೇನೆ.

ಆಡಳಿತದ ವಿಷಯದಲ್ಲಿ ನಾವು ಜನತಂತ್ರದಲ್ಲಿದ್ದೇವೆ. ಮುಖ್ಯವಾಗಿ ನಮ್ಮದೇ ಆಡಳಿತ ಯಂತ್ರವಾಗಿ ಸುಮಾರು 18 ವರ್ಷಗಳಾದವು. ಇದರಲ್ಲಿ ಇನ್ನೂ ಜನತಂತ್ರವನ್ನು ಮೈಗೂಡಿಸಿಲ್ಲ. ಬಿಳೀ ಬಟ್ಟೆಯನ್ನು ಹಾಕಿಕೊಂಡು ನನ್ನಂತೆ ಖಾದಿ ಹಾಕಿಕೊಂಡವನಿಗೆ ಏನೋ ಸ್ವಲ್ಪ ನಟನೆಯ ಗೌರವ ಕೊಡಬೇಕು ಎಂದು ಅಧಿಕಾರಿಗಳಿಂದ ನಮಗೆ ಅದು ದೊರೆಯುತ್ತದೆ. ಆದರೆ ಹಳ್ಳಿಯ ಕಡೆಯಿಂದ ಬರುವ ಜಡ್ಡು ಹಿಡಿದ ಬಡ ರೈತನ ಮೇಲೆ ಇರುವ ಕೊಳಕು ಬಟ್ಟೆ ಮತ್ತು ಅವನ ಹರಿದಿರುವ ಪಂಚೆಗಳನ್ನು ನೋಡಿದ ಕೂಡಲೇ ಅವನನ್ನು ಅಲ್ಲಿಂದ ಅವರ ಜವಾನರೇ ಹೊರಕ್ಕೆ ದಬ್ಬುತ್ತಾರೆ. ಇಲ್ಲಿ ವಿಧಾನ ಸಭೆಗೆ ಬರುವ ಜನರನ್ನೇ ಎಷ್ಟೋ ಸಲ ದಬ್ಬಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೋದ ಸಾರಿ ಅಸೆಂಬ್ಲಿ ಸದಸ್ಯರು ಒಬ್ಬರು ಇಲ್ಲಿಗೆ ಬರುವಾಗಲೇ ಅವರನ್ನೂ ದಬ್ಬಿಬಿಟ್ಟಿದ್ದರು.

ಶ್ರೀ ಎಸ್. ಗೋಪಾಲಗೌಡ.—ಅದೇನೆ ಇರಲಿ. ಸರ್ಕಾರ ಪ್ರಜಾಪ್ರಭುತ್ವವನ್ನು ಇನ್ನೂ ಮೈಗೂಡಿಸಿಕೊಂಡಿಲ್ಲ. ಇದಕ್ಕೆ ಇನ್ನೊಂದು ಕಾರಣವೂ ಇದೆ. ನಾವೆಲ್ಲಾ ಶಾಸನ ಸಭಾ ಸದ ಸ್ಯರು ಮತ್ತು ಮಂತ್ರಿಮಂಡಲ ಪ್ರಜಾಸತ್ತೆಗೆ ಜವಾಬುದಾರರಾಗಿರತಕ್ಕವರು ಮತ್ತು ಆಗಿಂದಾಗ್ಗೆ ಚುನಾವಣೆಯಾಗಿ ಬರತಕ್ಕವರು ನಾವುಗಳು. ಆದರೆ ಅಧಿಕಾರಿಗಳಿಗೆ ರಾಜ್ಯಾಂಗದಲ್ಲಿ ಸಂಪೂರ್ಣ ವಾಗಿ ರಕ್ಷಣೆ ಕೊಟ್ಟಿರುತ್ತಾರೆ. ಅದರಿಂದಾಗಿ ಅವರು ಅವರ ಕೆಲಸ ಯಾವಾಗಲೂ ಸೆಕ್ಯೂರು ಆಗಿರುವಂತಹುದು. ತಮ್ಮನ್ನು ಯಾರೂ ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದು ತಿಳಿದು ಹೆಚ್ಚು ದೃಢವಾಗಿರುತ್ತಾರೆ. ಏನಾದರೂ ಮಾಡಬೇಕೆಂದು ಅವರಿಗೆ ಮಾಡಿದರೆ ವರ್ಗ ಮಾಡುತ್ತಾರೆ ಇಲ್ಲವೇ ಸಸ್‌ಪೆಂಡ್ ಮಾಡುತ್ತಾರೆ. ಆಗ ಹೇಗಾದರೂ ರಿಟ್ಟುಗಳನ್ನು ತೆಗೆದುಕೊಂಡು ಹೈ ಕೋರ್ಟಿಗೆ ಹೋಗುವ ಸೌಕರ್ಯ ಇದ್ದೇ ಇರುತ್ತದೆ. ರಾಜ್ಯಾಂಗ ರಕ್ಷಣೆ ಕೊಡುತ್ತಿದೆ. ಹಿಂಬ

ಡತಿ ಮಾಡುವ ಹಾಗಿಲ್ಲ ಎಂದು ಅವರಿಗೆ ಧೈರ್ಯ. ಇಂತಹ ಭಾವನೆಗಳು ಇಂದು ಇರುವ ಅಧಿಕಾರಿಗಳಲ್ಲಿ ಹೆಚ್ಚಾಗಿದೆ. ಇದರಿಂದ ಆಡಳಿತದ ಯಂತ್ರ ನಿರ್ಲಕ್ಷ್ಯವಾಗಿದೆ. ಇದಕ್ಕೆ ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಸದಸ್ಯರ ಬಗ್ಗೆ ಅಧಿಕಾರಿಗಳ ಮನೋಭಾವ ಹೇಗಿರಬೇಕು ಎನ್ನುವುದರ ಬಗ್ಗೆ ಒಂದು ಸರ್‌ಕ್ಯುಲರನ್ನು ಕಳುಹಿಸಿ ಅವರ ಸ್ಥಾನ ಮಾನವೇನು ಎನ್ನುವುದನ್ನೆಲ್ಲಾ ವಿವರವಾಗಿ ತಿಳಿಸಿದ್ದಾರೆ. ಅದರಂತೆ ನಮ್ಮ ಅಸೆಂಬ್ಲಿ ಸದಸ್ಯರ ಬಗ್ಗೆ ಕೂಡ ತಿಳಿಸಬಹುದು ಎಂದು ನಾನು ಹೇಳುತ್ತೇನೆ. ಗ್ರಾಮ ಪಂಚಾಯತಿಯಲ್ಲಿ ಚುನಾಯಿತನಾದ ಒಬ್ಬನು ಅಧ್ಯಕ್ಷನಾಗಿರುತ್ತಾನೆ. ಅವನು ಆ ಗ್ರಾಮದ ಜನರಿಂದ ಚುನಾಯಿಸಲ್ಪಟ್ಟವನು ಮತ್ತು ಅವನಿಗೆ ಆ ಗ್ರಾಮದಲ್ಲಿ ಸಂಪೂರ್ಣ ಅಧಿಕಾರ ಇದೆ. ಅವನು ಆ ಸ್ಥಳದಲ್ಲಿರುವ ಪೋಲೀಸು ಸಬ್ ಇನ್ಸ್‌ಪೆಕ್ಟರಾಗಲೀ ಅಥವಾ ಅಲ್ಲಿನ ರೆವಿನ್ಯೂ ಇನ್ಸ್‌ಪೆಕ್ಟರವರು ಬಂದಾಗ ಅವನು ಎದ್ದು ನಿಲ್ಲಬೇಕೇ ಬೇಡವೇ ಎಂದರೆ, ಅವನು ಆ ಗ್ರಾಮದ ಉನ್ನತ ಅಧಿಕಾರಿಯಾದುದರಿಂದ ಅವನು ಎದ್ದು ನಿಲ್ಲುವುದು ಬೇಡ ಎಂದು ಇರಬಹುದು. ಗ್ರಾಮ ಪಂಚಾಯತಿಯಿಂದ ಚುನಾಯಿತನಾಗಿ ಬಂದಿರುವುದು ಅಲ್ಲಿನ ಜನಗಳ ಬೆಂಬಲದಿಂದ. ಆದುದರಿಂದ ಅವನಿಗೆ ಆ ಗ್ರಾಮದಲ್ಲಿ ಪೂರ್ಣ ಅಧಿಕಾರವಿದೆ. ಅಲ್ಲಿಗೆ ಇಂಡಿಯಾ ದೇಶದ ಪ್ರೆಸಿಡೆಂಟರವರು ಬಂದರೂ ಕೂಡ ಅವರಿಗೆ ಬೇರೆ ಒಂದು ಕುರ್ಚಿ ಹಾಕಿ ಕುಳ್ಳಿರಿಸಿ ಅವನು ತನ್ನ ಅಧ್ಯಕ್ಷ ಪದವಿಯ ಕುರ್ಚಿಯಲ್ಲಿ ಕುಳಿತುಕೊಳ್ಳಲು ಅರ್ಹನಾಗಿರುತ್ತಾನೆ. ಅವನನ್ನು ಕುಳ್ಳಿರಬಾರದು ಎಂದು ಯಾರೂ ಅವನನ್ನು ಅಲ್ಲಿ ಹೇಳುವಂತಿಲ್ಲ. ಏಕೆಂದರೆ ಆ ಗ್ರಾಮದಲ್ಲಿರುವ ಸುಮಾರು ಒಂದು ಸಾವಿರ ಜನರು ಅವನು ಅಧ್ಯಕ್ಷನಾಗಿರಬೇಕೆಂದು ಚುನಾಯಿಸಿ ಅಧ್ಯಕ್ಷಸ್ಥಾನದಲ್ಲಿ ಕುಳ್ಳಿರಿಸಿರುತ್ತಾರೆ. ಆ ಸ್ಥಾನ ಅಲ್ಲಿ ಎಲ್ಲಕ್ಕಿಂತ ಹಿರಿದಾದ ಸ್ಥಾನ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಹಾಗೆ ನಾನೂ ಒಪ್ಪುತ್ತೇನೆ. ಆ ಮನೋಭಾವವನ್ನು ಅಧಿಕಾರಿಗಳು ತಿಳಿದುಕೊಳ್ಳುವುದೇ ಪ್ರಯಾಸವಾಗಿದೆ. ಇದರಿಂದಾಗಿ ಪ್ರಜಾಪ್ರಭುತ್ವದ ವ್ಯವಸ್ಥೆ ಸುಸೂತ್ರವಾಗಿ ಸಹಕಾರದಿಂದ ನಡೆಯುವುದು ಸಾಧ್ಯವಾಗಿಲ್ಲ. ಇದರಿಂದ ಕೆಲಸ ಕಾರ್ಯಗಳು ಸರಿಯಾಗಿ ಆಗದೆ ಕುಂಠಿತವಾಗುತ್ತವೆ. ಆಡಳಿತದಲ್ಲಿ ಘರ್ಷಣೆಗಳೂ ಆಗಲು ಅವಕಾಶ ದೊರೆಯುತ್ತದೆ.

ಇನ್ನು ಇಲ್ಲಿ ಎನ್.ಜಿ.ಓ. ಗಳು ಹೆಚ್ಚು ಸಂಬಳ ಬೇಕೆಂದು ಕೇಳುತ್ತಿದ್ದಾರೆ. ತಾವು ಹೇಳುವುದು ಇಷ್ಟು ದುಡ್ಡನ್ನು ಎಲ್ಲಿಂದ ತರುವುದಕ್ಕೆ ಸಾಧ್ಯ ಎಂದು. ಅದು ನಿಜ. ಕೆಲವು ಸಲ ಒಂದು ಕಡೆ ನಾವು ಕೇಳಬೇಕಾಗುತ್ತದೆ, ಒಂದು ಕಡೆ ವಿರೋಧಿಸಬೇಕಾಗಿ ಬರುತ್ತದೆ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವುದು ನ್ಯಾಯವಾಗಿದೆ ಎಂದು ನಮಗೆ ಕಾಣುತ್ತೋ ಅದನ್ನು ಕೇಳುತ್ತೇವೆ. ಯಾವುದು ನ್ಯಾಯವಲ್ಲವೋ ಅಂತಹವುಗಳನ್ನು ವಿರೋಧಿಸುತ್ತೇವೆ. ಇವೊತ್ತು ಮೈಸೂರು ರಾಜ್ಯದ ಎನ್. ಜಿ. ಓ. ಗಳಿಗೂ ಮತ್ತು ಮಂತ್ರಿ ಮಂಡಲಕ್ಕೂ ಕೆಲವು ಕಾಲದಿಂದ ಒಂದು ತರಹ ಶೀತಲವಾದ ಯುದ್ಧ ನಡೆಯುತ್ತ ಬರುತ್ತಿದೆ. ಅದು ವರ್ಷದ ಮೇಲಾಯಿತು. ಅವರು ಮೇಲಿಂದ ಮೇಲೆ ಅವರ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಶಾಂತಿಯುತವಾಗಿ ಹೋರಾಟಗಳನ್ನು ಬೇಕಾದಷ್ಟು ಮಾಡುತ್ತಾ ಬರುತ್ತಿದ್ದಾರೆ. ಅಕ್ಕಪಕ್ಕದ ಸ್ಟೇಟುಗಳಲ್ಲಿ ಹೇಗೆ ಮಾಡಿದರೋ ಅದರಂತೆ ಅಷ್ಟೆಲ್ಲಾ ಹೋರಾಟವನ್ನು ಎಷ್ಟು ಮಾಡಬೇಕೋ ಅದನ್ನೆಲ್ಲಾ ಕ್ರಮಬದ್ಧವಾಗಿ ಮಾಡುತ್ತ ಬರುತ್ತಿದ್ದಾರೆ. ಆದರೂ ಕೆಲವು ಸಲ ಸರ್ಕಾರ ಆಗಾಗ ತುಟ್ಟಿಭತ್ಯ ಎಂದು ಸ್ವಲ್ಪ ಹೆಚ್ಚಿಸಿದರೂ ಇನ್ನೂ ಸರಕಾರ ಅವರ ಬೇಡಿಕೆಗಳೇನು ಎನ್ನುವುದರ ಕಡೆ ಇಲ್ಲಿಯತನಕ ಗಮನ ಕೊಟ್ಟಿಲ್ಲ. ಅವರು ಇದೇ ತಿಂಗಳು 18ನೇ ತಾರೀಖಿನಿಂದ ಮತ್ತೊಂದು ದೊಡ್ಡ ಹೋರಾಟವನ್ನು ಮಾಡಬೇಕೆಂದಿದ್ದಾರೆ ಮತ್ತು ಅದಕ್ಕೆ ಪ್ರಚಾರಮಾಡುವವರೂ ಆಗಿದ್ದಾರೆ. ಅವರ ಅಸಮಾಧಾನ ಹಾಗೂ ಅತೃಪ್ತಿಗಳಿಗೆ ನ್ಯಾಯವಾದ ಮನ್ನಣೆಕೊಟ್ಟು ಅವರಿಗೆ ಸಾಕಷ್ಟು ಸಂಬಳ ಕೊಡಲಿಲ್ಲ ಮತ್ತು ಆ ವಿಷಯ ಇನ್ನೂ ಹಾಗೇ ಇದೆ. ಇದರಿಂದ ಸರಕಾರದಲ್ಲಿ ಕೆಲಸಗಳು ಕುಂಠಿತವಾಗುವುದಿಲ್ಲವೇ ಎಂದು ನಾನು ಒಂದು ಸಾರಿ ಕೇಳಿದ್ದಕ್ಕೆ ಅದಕ್ಕೆ ಸರಕಾರದ ಕಡೆಯಿಂದ ಸಚಿವರು ಕುಂಠಿತವಾಗುವುದಿಲ್ಲ ಎಂದು ಹೇಳಿದರು. ಅದು ಅವರ ಅಭಿಪ್ರಾಯದ ಮಾತು. ಈ ಒಂದು ನ್ಯಾಯವಾದ ಎನ್.ಜಿ.ಓ.ಗಳ ಬೇಡಿಕೆಗಳನ್ನು ಸರಕಾರ ಮಾನ್ಯ ಮಾಡಬೇಕು. ಕೇಂದ್ರದವರು ಅವರ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಮಾಡಿದ್ದಾರೆ. ಅದರಂತೆ ನಮ್ಮ ರಾಜ್ಯ ಸರಕಾರದವರೂ ಹೆಚ್ಚಿಸಲು ದುಡ್ಡಿನ ಕೊರತೆ ಇದೆ, ಆಗುವುದಿಲ್ಲ ಎಂದರು. ಹೀಗಿರುವಾಗ ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ನೌಕರರುಗಳ ಸಂಬಳ ಸಾರಿಗೆಗಳನ್ನು ಒಂದೇ ರೀತಿಯಾಗಿ ಮಾಡುವುದು ಯೋಗ್ಯ. ಮತ್ತು ತುಟ್ಟಿ ಭತ್ಯ ಹಾಗೂ ಟಿ.ಎ. ಬಗ್ಗೆ ಕೂಡ ಕೇಂದ್ರದವರು ಒಂದೂರಿನಿಂದ ಬಹಳ ದೂರ ಇರುವ ಬಾರ್ಡರು ಪ್ರದೇಶದಲ್ಲಿ ಹೋಗುವವರಿಗೆ ಹೆಚ್ಚು ಭತ್ಯ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದಾರೆ. ಇದರ ಬಗ್ಗೆ ರಾಜ್ಯ ಸರಕಾರದವರು ಈಗಲಾದರೂ ಕೇಂದ್ರದವರ ಜೊತೆಯಲ್ಲಿ ಮಾತನಾಡಬೇಕು.

(ಶ್ರೀ ಎಸ್. ಗೋಪಾಲಗೌಡ)

ಈಗೇನೋ ಶ್ರೀ ಮೊರಾರ್ಜಿಯವರ ನೇತೃತ್ವದಲ್ಲಿ ಅವರೇ ಅಧ್ಯಕ್ಷರಾಗಿರುವ ಸುಧಾರಣಾ ಸಮಿತಿಯವರು ಕೆಲಸ ಆರಂಭಿಸಿದ್ದಾರೆ. ಇದು ಮುಂದೆ ಬರುವ ಸರಕಾರಗಳಿಗೆ ದೊರೆಯುವಂತಹವುಗಳು. ಇದರಂತೆ ಹಿಂದೆ ನಮ್ಮ ರಾಜ್ಯದಲ್ಲೂ ಹಣಕಾಸಿನ ಸಂಪತ್ತನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ಎನ್ನುವುದಕ್ಕೆ ಕೆಲವು ಸಮಿತಿಗಳನ್ನು ಮಾಡಿದ್ದರು. ಎ. ಜಿ. ರಾಮಚಂದ್ರರಾಯರವರ ಕಮಿಟಿ ಮಾಡಿದ್ದರು, ಅವರೂ ಸರಕಾರಕ್ಕೆ ಅವರ ರಿಪೋರ್ಟು ಕೊಟ್ಟಿದ್ದಾರೆ, ಅದರಂತೆ ಗೋರವಾಲಾ ಕಮಿಟಿ ಎಂದು ಮಾಡಿದರು, ಅವರೂ ರಿಪೋರ್ಟನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಗೋರವಾಲಾ ಕಮಿಟಿ ರಿಪೋರ್ಟನ್ನು ನಾನೂ ಕೂಡ ನಿನ್ನೆ ಓದುತ್ತಿದ್ದೆ. ಅದರಲ್ಲಿ ಅವರು ಕೆಲವು ಕಡೆಗಳಲ್ಲಿ ಬಂದಿರುವುದು ಅಪ್ರಕೃತವಾದರೂ ಅಲ್ಲಿ ಕೆಲವು ಕಡೆಗಳಲ್ಲಿ ಶಾಸನ ಸಭಾ ಸದಸ್ಯರುಗಳು ಮಾಜಿ ಮಂತ್ರಿಗಳು ಕೆಲವುಕಡೆಗಳಲ್ಲಿ ಸರಕಾರಕ್ಕೆ ಕೊಡಬೇಕಾದ ದುಡ್ಡು ಕೊಟ್ಟಿಲ್ಲ, ಹೀಗಿರುವುದು ಸರಿಯಲ್ಲ, ಇದನ್ನು ಸುದಾರಿಸಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ಅಲ್ಲದೆ ಈಗ ಗೆಸ್ಟ್ ಹೌಸುಗಳು ಜಾಸ್ತಿಯಾಗಿವೆ, ಮೈಸೂರಿನವರು ಯಾರಾದರೂ ಬರಲಿ ಅವರಿಗೆ ರೆಡ್ ಕಾರ್ಪೆಟ್ ಹಾಕುತ್ತಾರೆ, ಊಟ ಹಾಕುತ್ತಾರೆ, ಇದರಿಂದ ವೆಚ್ಚಗಳು ಹೆಚ್ಚಾಗುತ್ತವೆ. ಇದನ್ನು ತಗ್ಗಿಸಬೇಕು ಎಂದು ಹೇಳುತ್ತಾ ಇನ್ನೂ ಕೆಲವು ಕಡೆ ಮೂಲಭೂತವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಇವನ್ನೆಲ್ಲಾ ಮುಖ್ಯವಾಗಿ ಅಧಿಕಾರಿಗಳು ಒಡಬೇಕು ಮತ್ತು ಒಳ್ಳೆಯ ತೀರ್ಮಾನ ಕೊಡಬೇಕು. ಅದರಲ್ಲಿ ಶೇಕಡಾ ಮೂವತ್ತರಷ್ಟು ಖೋತ ಮಾಡುವುದು ಹೇಗೆ ಎನ್ನುವುದೇ ಇದರಲ್ಲಿ ಬಹು ಮುಖ್ಯ. ದಕ್ಷತೆ ಬರಬೇಕಾದರೆ ಒಂದು ಕೆಲಸದಲ್ಲಿ ಎಷ್ಟು ಜನ ಇದ್ದರೆ ಕೆಲಸ ಚೆನ್ನಾಗಿ ಆಗುತ್ತದೆಯೋ ಅದಕ್ಕಿಂತ ಜಾಸ್ತಿ ಜನ ಇದ್ದರೆ ಆ ಕೆಲಸ ಚೆನ್ನಾಗಿ ಆಗುವುದಿಲ್ಲ. ಈಗ ಇಲ್ಲಿಯೂ ಕೂಡ ಒಬ್ಬರು ಡೆಪ್ಯೂಟಿಕಮಿಷನರ್ ಇರಬೇಕೆಂದು ಇರುವ ಕಡೆಗಳಲ್ಲಿ ಮೂರು ಜನಗಳನ್ನು ಮಾಡೋಣ ಎಂದು ಮಾಡಿದರೆ ಅದರಿಂದ ದಕ್ಷತೆ ಬರುವುದಿಲ್ಲ. ಪ್ಲಾನಿಂಗು ಕಮಿಷನ್ನು ಇರುವಂತೆ ಇಲ್ಲಿ ಅಡ್ವೈಸು ಕೊಡುವುದಕ್ಕೆ ಅಧಿಕಾರಿಗಳ ಮಟ್ಟದ ಒಂದು ಕಮಿಟಿ ಇದೆ ಅದು ಸ್ಟೇಟು ಡೆವಲಪ್‌ಮೆಂಟು ಕೌನ್ಸಿಲ್ ಎನ್ನುವುದು. ಇದು ಮಂತ್ರಿಮಂಡಲಕ್ಕೆ ಸಲಹೆ ಕೊಡಬೇಕೆಂದು ನೇಮಕ ಮಾಡಿದ್ದಾರೆ. ಪ್ಲಾನಿಂಗು ಕಮಿಷನ್ನು ಎಂದು ಇರುವಾಗ ಪ್ರತ್ಯೇಕವಾದ ಇಂತಹ ಕೌನ್ಸಿಲ್ ಏತಕ್ಕಾಗಿ ಇರಬೇಕು ಎಂದು ನಾನು ಇಲ್ಲಿ ಕೇಳಲು ಇಷ್ಟಪಡುತ್ತೇನೆ. ಇವರನ್ನು ನೇಮಕ ಮಾಡಿ ಇವರಿಂದ ಸರಕಾರ ಅಡ್ವೈಸು ಪಡೆಯಬೇಕು ಎನ್ನುವುದು ಬುದ್ಧಿವಂತಿಕೆಯೇ ಎಂಬುದನ್ನು ಸರಕಾರ ವಿಚಾರ ಮಾಡಬೇಕು. ಇವರು ಕೊಡುವ ತೀರ್ಮಾನವನ್ನು ಸರಕಾರ ಒಪ್ಪುವುದು ಸರಿಯೇ ಎನ್ನುವುದನ್ನು ಗಮನದಲ್ಲಿಡಬೇಕು. ಇದು ಏನು ಕ್ರಮ ಸೂಚಿಸುತ್ತದೆ ಎಂದರೆ ಸ್ವತಃ ಹೊಣೆಯನ್ನು ಹೊತ್ತಿರತಕ್ಕ ಜನರು ಅವರ ಹೊಣೆಯ ಬಗ್ಗೆ ವಿಚಾರ ಮಾಡುವುದನ್ನು ಬೇರೆಯವರಿಗೆ ವಹಿಸಿಕೊಟ್ಟಿದ್ದಾರೆ, ಬೇರೆಯವರು ಕೊಡತಕ್ಕ ಸಲಹೆಗಳನ್ನು ಕೇಳಿ ಕೆಲಸ ಮಾಡುವಂತಹ ಒಂದು ವ್ಯವಸ್ಥೆ ಇಲ್ಲಿ ಬಂದಿದೆ. ಅವರೇ ಕೆಲಸ ಮಾಡುವಂತಹ ಒಂದು ವ್ಯವಸ್ಥೆ ಇಲ್ಲಿ ಉಳಿದಿಲ್ಲ. ತನ್ನ ತನ್ನ ರಕ್ಷಣೆ, ತನ್ನ ಬಗ್ಗೆ ಏನೂ ಮಾಡಿಕೊಳ್ಳಬೇಕು ಅದು ಮಾತ್ರ ಈಗ ಸಾಧ್ಯವಾಗುತ್ತಾ ಇದೆ. ಈ ಮೂಲ ಲೋಪದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡದೇ ಹೋದರೆ ಈ ಯೋಜನೆಗಳು ಸಫಲವಾಗುವುದಿಲ್ಲ; ದೇಶವೂ ಉದ್ಧಾರವಾಗುವುದಿಲ್ಲ.

ಸ್ವಾಮಿ, ಪಟೇಲ್ ಶ್ಯಾನುಭೋಗರು ಸುಪ್ರೀಂ ಕೋರ್ಟಿಗೆ ಹೋಗಿ ಬಂದಿದ್ದಾರೆ. ಅವರ ವಂಶ ಪಾರಂಪರ್ಯ ಹಕ್ಕನ್ನು ತೊಡೆದುಹಾಕುವುದಕ್ಕೆ ಆಜ್ಞೆ ಕೊಟ್ಟಿದ್ದಾರೆ. ಇನ್ನೂ ಅದರ ಬಗ್ಗೆ ಏನೂ ಮಾಡಿಲ್ಲ. ಅವರಿಗೆ ಪೋಟಿಗೆ ಕೊಟ್ಟು ಅವರನ್ನು ನಿವೃತ್ತಿಮಾಡುವ ಹಾಗಿಲ್ಲ, ಅವರು ಬೇರೆ ಉದ್ಯೋಗಕ್ಕೆ ಹೋಗುವ ಹಾಗೆ ಇಲ್ಲ. ಹೊಸಬರನ್ನು ತರಬೇತು ಮಾಡದಿದ್ದರೆ ಪಂಚಾಯ್ತಿ ಕೆಲಸ ಆಗುವುದಿಲ್ಲ. ನಮ್ಮಲ್ಲಿ ಪಹಣಿ ಆಗುತ್ತಿಲ್ಲ ಏನೊಂದು ಕೆಲಸವೂ ಆಗುತ್ತಿಲ್ಲ. ಟೆನೆನ್ಸಿ ರಿಜಿಸ್ಟರ್ಸ್ ಕೂಡ ಅವರು ಬರೆಯುವುದಿಲ್ಲ. ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ ಬಹಳ ಕೆಲಸ ಇದೆ, ಪಂಚಾಯ್ತಿ ಕೆಲಸಗಳು ಬೇಕಾದಷ್ಟು ಇವೆ. ಅದಕ್ಕೆ ಪಟೇಲ್ ಶ್ಯಾನುಭೋಗರ ಪಾರಂಪರ್ಯ ಹಕ್ಕನ್ನು ಕಿತ್ತು ಹಾಕಿ ಅವರಿಗೆ ಕೊಡಬೇಕಾದ ಪರಿಹಾರವನ್ನು ಕೊಟ್ಟು ಅವರ ಸ್ಥಳದಲ್ಲಿ ತರಬೇತಾದ ಜನರನ್ನು ನೇಮಿಸಿಕೊಳ್ಳುವ ಕೆಲಸವನ್ನು ಶೀಘ್ರವಾಗಿ ಸರ್ಕಾರ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನೀರಾವರಿ ಬಗ್ಗೆ ಒಂದು ಪತ್ರ ಬಂದಿದೆ. ಅದು ತುಂಗಭದ್ರಾ ಅಚ್ಚುಕಟ್ಟಿಗೆ ಸಂಬಂಧಪಟ್ಟದ್ದು. ಈ ಪತ್ರದಲ್ಲಿ ಡ್ರೈ ಕಮ್ ವೆಟ್ ವ್ಯವಸ್ಥೆ ಅಲ್ಲಿ ಆಗುವುದಿಲ್ಲ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಮತ್ತು ಅಲ್ಲಿ ವ್ಯವಸ್ಥೆಗಳು ಸರಿಯಾಗಿ ನಡೆಯುತ್ತಾ ಇಲ್ಲ, ಕಂಟ್ರಾಕ್ಟುದಾರರುಗಳು ಏನೇನೋ ಮಾಡುತ್ತಾ ಇದ್ದಾರೆ, ಪ್ರತಿಸಲವೂ ಒಂದೇ ಸ್ಥಳದಲ್ಲಿ ಕಾಲುವೆಗಳು ಒಡೆದು ಹೋಗಿ

ಪುನಃ ಅದನ್ನೇ ಕಟ್ಟುತ್ತಾರೆ ಅಂತ ಹೇಳಿ ಬರೆದಿದ್ದಾರೆ. ಇದರ ಬಗ್ಗೆ ವಿಶೇಷವಾದ ವ್ಯವಸ್ಥೆಯನ್ನು ಮಾಡಿ ತತ್‌ಕ್ಷಣ ಕೆಲವು ಲಕ್ಷ ಎಕರೆಗಳಿಗೆ ನೀರು ಕೊಡುವಂತೆ ಮಾಡುತ್ತೇವೆ ಎಂದು ಒಬ್ಬರು ಡೆಪ್ಯೂಟಿ ಕಮಿಷನರು ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಎಷ್ಟುಮಟ್ಟಿಗೆ ಮಾಡಿದ್ದಾರೋ ಗೊತ್ತಿಲ್ಲ. ಆ ಪ್ರದೇಶಗಳನ್ನು ನೋಡಿದರೆ ಅದು ಒಂದು ದೊಡ್ಡ ದುರಂತ ರೀತಿಯ ಕೆಲಸವಾಗಿ ನಡೆಯುತ್ತಾ ಇದೆ. ಅದನ್ನು ಹೇಗೆ ನಮ್ಮ ಮುಖ್ಯ ಮಂತ್ರಿಗಳು ಕ್ರಮಪಡಿಸುತ್ತಾರೆ ಎನ್ನುವುದನ್ನು ಅವರಿಗೇ ಬಿಡುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಸಮಾಜ ಕಲ್ಯಾಣದ ಬಗ್ಗೆ ಒಂದು ಮಾತು, ಜಸ್ಟಿಸ್ ಬಗ್ಗೆ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸಮಾಜ ಅಭಿವೃದ್ಧಿ ಇಲಾಖೆಯಲ್ಲಿ ಈಗ ಇದ್ದಂಥ ಅಧಿಕಾರಿಗಳನ್ನು ತೆಗೆದಿದ್ದೀರಿ; ಸುಮಾರು 20–30 ಜನರನ್ನು ಸಸ್‌ಪೆಂಡ್ ಮಾಡಿದ್ದೀರಿ. ಕೆಲವು ಅಧಿಕಾರಿಗಳಿಗೆ ಅರ್ಧ ಸಂಬಳ ಕೊಡಬೇಕು, 6 ತಿಂಗಳ ಮೇಲೆ 75 ಪರ್ಸೆಂಟ್ ಸಂಬಳ ಕೊಡಬೇಕು ಎಂದೆಲ್ಲಾ ಮಾಡಿದ್ದೀರಿ. ಅವರನ್ನು ಯಾವಾಗ ವಿಚಾರಣೆ ಮಾಡುತ್ತೀರೀ? ಎಷ್ಟು ದಿವಸದಲ್ಲಿ ಮುಗಿಸುತ್ತೀರೀ? ಇದೇ ರೀತಿ ಇನ್ನೂ ಎಷ್ಟು ದಿನ ಕೊಳೆ ಹಾಕುವುದು? ಯಾವುದೋ ಒಂದು ಹಾಸ್ಟೆಲ್‌ನಲ್ಲಿ ಹುಡುಗರಿಗೆ ಊಟಕ್ಕೆ ಕೊಡುವ ಹಣವನ್ನು ಕೊಡುತ್ತಾ ಇಲ್ಲ, ಇಂತಹ ಅನೇಕ ಲೋಪದೋಷಗಳು ಇವೆ ಅದನ್ನು ನಾನು ಈಗ ಪ್ರಸ್ತಾಪ ಮಾಡುವುದಿಲ್ಲ. ಈ ಇಲಾಖೆಯಲ್ಲಿ ಪ್ರಾಮಾಣಿಕತನದಿಂದ ಹರಿಜನರು ಗಿರಿಜನರು ಯಾರಿದ್ದಾರೆ ಅವರ ವಿಷಯದಲ್ಲಿ ವಿಶ್ವಾಸ ಇರುವವರು ಯಾರಾದರೂ ಇದ್ದರೆ ಅಂಥವರನ್ನು ಇದಕ್ಕೆ ಹಾಕಬೇಕು, ಇಲ್ಲದೇ ಹೋದರೆ ಆ ಜಾಗ ಹಾಗೆಯೇ ಬಿಟ್ಟರೂ ಪರವಾಗಿಲ್ಲ, ಯಾರೂ ಅಲ್ಲಿ ಕುಳಿತುಕೊಳ್ಳಬೇಕಾಗಿಲ್ಲ, ಅವರಿಗೆ ಆಫೀಸು ಕೊಡಬೇಕಾಗಿಲ್ಲ, ಇದು ನಮ್ಮ 18 ವರ್ಷದ ಅನುಭವ, ಬೇಕಾದರೆ ಯಾರಾದರೂ ವಾಲಂಟರಿ ಆರ್ಗನೈಸೇಷನ್ ಅವರು ಇದ್ದರೆ ಅವರಿಗೆ ಈ ಕೆಲಸವನ್ನು ಕೊಟ್ಟು ಬಿಡಿ. ಲಂಪ್‌ಸಂ ಗ್ರ್ಯಾಂಟ್ ಅವರಿಗೆ ಕೊಡಿ. ಎಷ್ಟೋ ಜನರು ಕೋಟ್ಯಾಂತರ ರೂಪಾಯಿಗಳನ್ನು ತಿನ್ನುತ್ತಾ ಇದ್ದಾರೆ. ಇದು ಏನಾದರೂ ಹಾಳಾಗಲಿ, ನಮಗೆ ಬೇಕಾಗಿಲ್ಲ. ಈ ಕೆಲಸವನ್ನು ಬಹಳ ಕೆಟ್ಟ ರೀತಿಯಲ್ಲಿ ನಡೆಸುತ್ತಾ ಇದ್ದಾರೆ. ಯಾರೋ ಒಬ್ಬ ಹರಿಜನರ ಕೋ-ಆಪರೇಟೀವ್ ಸೊಸೈಟಿಯಲ್ಲಿ ಮನೆ ಕಟ್ಟಿಸಿಕೊಡುತ್ತೇನೆ ಎಂದು ಹೇಳಿ ದುಡ್ಡು ತೆಗೆದುಕೊಂಡು ಹೋದ ಮಹನೀಯ ಹಾಗೆಯೇ ಹೊರಟೇಹೋದನಂತೆ. ಹೀಗಾಗಿರುವುದರಿಂದ ನಿಮಗೆ ಹಣವೂ ಉಳಿಯುವುದಿಲ್ಲ, ಜನಕ್ಕೂ ಕೂಡ ಅದು ಮುಟ್ಟುತ್ತಾ ಇಲ್ಲ. ಅಂದಮೇಲೆ ಈ ಅವ್ಯವಸ್ಥೆಯನ್ನು ಎಷ್ಟು ದಿವಸ ಮುಂದುವರಿಸಿಕೊಂಡು ಹೋಗುತ್ತೀರಿ? ಇದನ್ನು ನಿಲ್ಲಿಸುವುದು ಬಹಳ ಒಳ್ಳೆಯದು, ಇದರ ಬಗ್ಗೆ ಸರ್ಕಾರ ಪುನರ್ವಿಚಾರ ಮಾಡಬೇಕೆಂದು ಬಹಳ ಕಳಕಳಿಯಿಂದ ವಿನಂತಿ ಮಾಡುತ್ತೇನೆ.

ಕೊನೆಯದಾಗಿ ಲೆವಿ ಆಜ್ಞೆ. ಶ್ರೀಮಾನ್ ಜತ್ತಿಯವರು ಈ ಆಹಾರ ಇಲಾಖೆಯನ್ನು ಮತ್ತೊಬ್ಬರಿಗೆ ಬಿಟ್ಟುಕೊಡುವುದು ಒಳ್ಳೆಯದು, ಅವರು ಇಲ್ಲಿ ಇಲ್ಲ, ಇದ್ದಿದ್ದರೆ ಅವರನ್ನು ಅಂಗಲಾಚಿ ಬೇಡಿಕೊಳ್ಳುತ್ತಾ ಇದ್ದೆ. ಅವರು ಬಹಳ ಹಾರಿಕೆಯ ಉತ್ತರ ಕೊಡುತ್ತಾರೆ. ಮೂರು ತಿಂಗಳಿನಿಂದ ಸತತವಾಗಿ ಕೇಳುತ್ತಾ ಇದ್ದೇನೆ. ಈ ಡಿ. ಐ. ಆರ್. ನ್ನು ಏಕೆ ಉಪಯೋಗಿಸಿಕೊಂಡರು ಗೊತ್ತೆ? ಇಡ್ಲಿ ಮಾಡಿದರು, ದೋಸೆ ಹೊಯ್ದರು ಎಂದು ಹಿಡಿದಿದ್ದಕ್ಕೆ ಶಿಕ್ಷೆ ಮಾಡಿದರು ಎಂಬುದು ಬಹಳ ದೊಡ್ಡ ಸುದ್ದಿ. ಆಹಾ, ಎಷ್ಟು ಇಡ್ಲಿ ಹಿಡಿದರು, ಎಷ್ಟು ದೋಸೆ ಹಿಡಿದರು. ಇದು ಸುದ್ದಿಯೇ? ನಾಚಿಕೆಪಟ್ಟುಕೊಳ್ಳಬೇಕು. ಇನ್ನು ಲೆವಿ ಮಾಡಿದ್ದನ್ನು ಕೊಡದೇ ಇದ್ದುದಕ್ಕೆ ಡಿ. ಐ. ಆರ್. ಪ್ರಯೋಗ. ಶಿವಮೊಗ್ಗಾ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿ ಬೆಳೆಗೆ ಹಾನಿಯಾಗಿದೆ. ಆಗಸ್ಟ್ ತಿಂಗಳಿನಲ್ಲಿ ಲೆವಿ ಆಜ್ಞೆಯನ್ನು ಜಾರಿಗೆ ಕೊಟ್ಟರು. ನವೆಂಬರ್ ಅಕ್ಟೋಬರ್‌ನಲ್ಲಿ ಮಳೆ ಹೋಯಿತು ಅನೇಕ ಗದ್ದೆಗಳಲ್ಲಿ ಬೆಳೆ ಆಗಿಲ್ಲ. ಜಿಲ್ಲಾಧಿಕಾರಿಗಳು ಕೊಟ್ಟ ಹೇಳಿಕೆ ಪ್ರಕಾರ 91 ಸಾವಿರ ಎಕರೆಯಲ್ಲಿ ನಾಲ್ಕಾಣೆಗಿಂತ ಕಡಿಮೆ ಬೆಳೆಯಾಗಿದೆ. ಆ ಹೇಳಿಕೆಯ ಆಧಾರದಮೇಲೆ ಈ ಲೆವಿಯನ್ನು ಪುನರ್ವಿಮರ್ಶೆ ಮಾಡಿದ್ದೀರಾ ಎಂದರೆ, ಇವತ್ತು ಅವರ ಉತ್ತರ ಒಂದೇ. ಎಲ್ಲಿ ಬೆಳೆ ಆಗಿಲ್ಲವೋ ಅಲ್ಲಿ ಲೆವಿ ಎತ್ತುವ ಪ್ರಶ್ನೆಯೇ ಏಳುವುದಿಲ್ಲ, ಎಲ್ಲಿ ಬೆಳೆ ಆಗಿಲ್ಲವೋ ಅಲ್ಲಿ ವಸೂಲು ಮಾಡಬೇಡಿ ಎಂದು ನಮ್ಮ ಅಧಿಕಾರಿಗಳಿಗೆ ಆಜ್ಞೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದೇ ಪ್ರಕಾರ ಡಿ. ಐ. ಆರ್. ನ ಎಲ್ಲಾ ಅಧಿಕಾರಿಗಳನ್ನೂ ಡೆಪ್ಯೂಟಿ ಕಮಿಷನರಿಗೆ ಕೊಟ್ಟುಬಿಟ್ಟಿದ್ದೇವೆ ಎಂದು ಅನ್ನುತ್ತಾರೆ. ಅವರು ಹೇಳುತ್ತಾರೆ ಬತ್ತ ಬೆಳೆಯುತ್ತೀರಾ? ಡಿ. ಐ. ಆರ್. ಬತ್ತ ಬೆಳೆಯುತ್ತೀರಾ ಎರಡನೇ ಬೆಳೆ? ಡಿ. ಐ. ಆರ್. ಬತ್ತ ಬೆಳೆಯುತ್ತಾ ಇಲ್ಲವೇನು? ಡಿ. ಐ. ಆರ್. ಹುಷಾರಾಗಿರಿ ಎನ್ನುತ್ತಾರೆ. ಏನೇನೂ ಬೆಳೆ ಆಗಿಲ್ಲ ಊಟಕ್ಕೆ ಬೇಕಾಗುವಷ್ಟು ಮಾತ್ರ ಇಟ್ಟುಕೊಂಡಿದ್ದೇನೆ ಎಂದು ಹೇಳಿದರೆ ಡಿ. ಐ. ಆರ್. ಇದೆ ಎನ್ನುವುದು ಗೊತ್ತಿದೆಯೇನು ಎನ್ನುತ್ತಾರೆ. ಡೆಪ್ಯೂಟಿ ಕಮಿಷನರು ನನಗೆ ಹೇಳುತ್ತಾರೆ ಡಿ. ಐ. ಆರ್. ಇದೆ ಹುಷಾರ್ ಅಂತ. ನಾನು ಯಾರ

(ಶ್ರೀ ಎಸ್. ಗೋಪಾಲಗೌಡ)

ಮೇಲೂ ಖಂಡಿತವಾಗಿಯೂ ಅಪಾದನೆ ಮಾಡುತ್ತಾ ಇಲ್ಲ, ಯಾರೂ ತಪ್ಪು ತಿಳಿದುಕೊಳ್ಳಬಾರದು. ಈ ಒಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ. ಅಧಿಕಾರಿಗಳನ್ನು ನಾನು ಟೀಕೆ ಮಾಡುತ್ತಾ ಇಲ್ಲ. ಅಥವಾ ಡೆಪ್ಯೂಟಿ ಕಮಿಷನರನ್ನು ಟೀಕೆ ಮಾಡುವುದಕ್ಕೆ ನಾನು ಈ ಅವಕಾಶವನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತಾ ಇಲ್ಲ. ರೈತ ಬೆಳೆದ ಬತ್ತವನ್ನು ವಸೂಲು ಮಾಡುವುದಕ್ಕೆ, ಈ ರಾಜ್ಯದಲ್ಲಿ ಡಿ. ಐ. ಆರ್. ಬಿಟ್ಟರೆ ಬೇರೆ ಯಾವ ಅಧಿಕಾರಗಳೂ ನಿಮ್ಮ ಬತ್ತಳಿಕೆಯಲ್ಲಿ ಇಲ್ಲವೇ ? ಲೆವಿ ಆರ್ಡರಿನಿಂದ ವಸೂಲು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಶಿಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಇನ್ನೊಂದು ಪತ್ರ ಬರೆದಿದ್ದಾರೆ. ಬತ್ತ ವಸೂಲು ಮಾಡತಕ್ಕ ಅಧಿಕಾರಿ ದಾಂಧಲೆ ಹಾಕಿ ರೈತರ ಮನೆಗೆ ಅಕ್ರಮವಾಗಿ ನುಗ್ಗಿ, ಮನೆಯವರು ಇಲ್ಲದೇ ಇದ್ದಾಗ ಮನೆ ಬೀಗ ಒಡೆಸಿ ಬತ್ತದ ಕಣಜಕ್ಕೆ ಹೋಗಿ ಬಡ ರೈತರಿಂದ ಬಲಾತ್ಕಾರವಾಗಿ ಬತ್ತ ದೋಚಿಕೊಂಡು ಹೋಗಿದ್ದಾರೆ. ಇಂತಹ ಅನೇಕ ನಿದರ್ಶನಗಳು ಇವೆ ಎಂದು ಹೇಳಿ ಇತ್ಯಾದಿ ಬರೆದಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಎಂದರೆ ಸಾಗರ, ತೀರ್ಥಹಳ್ಳಿಯವರು 45 ಸಾವಿರ ಕ್ವಿಂಟಾಲ್ ಬತ್ತ ಕೊಡಬೇಕು. ಹೊಸನಗರದವರು 41 ಸಾವಿರ ಕ್ವಿಂಟಾಲ್ ಬತ್ತ ಕೊಡಬೇಕು. ಶಿವಮೊಗ್ಗಾ ಜಿಲ್ಲೆಯವರು 4 ಲಕ್ಷ ಕ್ವಿಂಟಾಲ್ ಕೊಡಬೇಕು. ಇದನ್ನು ವಸೂಲು ಮಾಡುತ್ತಾರೆಯೇ ಎಂದರೆ ಶ್ರೀಮಾನ್ ದೇವೇಂದ್ರಪ್ಪನವರಂಥವರ ಆಶ್ರಯದಲ್ಲಿ ಇದ್ದರೆ ಅವರು ಎಲ್ಲಾ ಅಧಿಕಾರಿಗಳನ್ನೂ ಕರೆಸಿ ಹೂವಿನ ಹಾರ ಹಾಕಿ ಲೆವಿ ಕೊಡುತ್ತಿದ್ದಾರೆ ಎಂದು ಹೇಳುವಂತಹ ಫೋಟೋ ತೆಗೆಸುತ್ತಾರೆ. ನಾವು ಕೊಡುವಷ್ಟು ಕೊಟ್ಟಿದ್ದೇವೆ. ಬೆಳೆ ಆಗಿರುವವರು ಕೊಡಿ ಎಂದು ಹೇಳಿದ್ದೇವೆ. ಆದರೂ ಡಿ. ಐ. ಆರ್. ತೋರಿಸಿ ಪ್ರಾಮಾಣಿಕನಾದ ಮನುಷ್ಯನ ಮನೆಗೆ ನುಗ್ಗಿ, ಅವನನ್ನು ಬಂಧಿಸಿ, ಬೆದರಿಕೆ ಹಾಕಿ ವಸೂಲು ಮಾಡುವುದು ಏನಿದೆ ಇದು ಅನ್ಯಾಯದ ರಾಜ್ಯವಾಗುತ್ತದೆ. ರೈತರಿಗೆ ನ್ಯಾಯ ಒದಗಿಸಿಕೊಡಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು. ಶಿರಾಳಕೊಪ್ಪದ ರಮಣ ರೈಸ್ ಮಿಲ್ಸ್‌ನವರ ಮೇಲೆ ಕ್ರಮ ಜರುಗಿಸದೆ ಬಿಟ್ಟುಬಿಟ್ಟಿದ್ದಾರೆ. ರಾತ್ರಿವೇಳೆ ಲಾರಿಗಳು ಓಡಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆಂದು ಕೇಳಿದೆ, ಇದನ್ನು ವಿಚಾರ ಮಾಡಬೇಕು. ನಿಜವಾಗಿಯೂ ಕೊಟ್ಟಿದ್ದರೆ ಪುನಃ ಇದನ್ನು ಪರಿಶೀಲಿಸುವುದು ಒಳ್ಳೆಯದು. ಆಹಾರದ ಕೊರತೆಯನ್ನು ನೀಗಿಸಲು ಸರಕಾರ ಪ್ರಯತ್ನಮಾಡುತ್ತಿದೆಯೆಂದು ಹೇಳುತ್ತಿದ್ದಾರೆ, ಮಾಡಿರುವುದು ಏನೇನೂ ಸಾಲದು, ಸುಮಾರು 20 ಲಕ್ಷ ಟನ್ ಆಹಾರದ ಕೊರತೆಯಿದೆ. ಬಹಳ ಹಳ್ಳಿಗಳಲ್ಲಿ ಕೂಲಿ ಕೆಲಸ ದೊರೆಯುತ್ತಿಲ್ಲ, ಮುಖ್ಯ ಮಂತ್ರಿಗಳ ಜಿಲ್ಲೆಯಾದ ಚಿತ್ರದುರ್ಗದಲ್ಲೂ ಕೂಡ ಈ ಪರಿಸ್ಥಿತಿ ಇದೆ. ಶ್ರೀ ಯಾರ್ಡಿಯವರ ವರದಿ ನೋಡಿ ಸಾಕಾದಷ್ಟು ಆಹಾರ ತರಿಸಿ ಸುಲಭ ಬೆಲೆಯಲ್ಲಿ ಪರಿತರ ಜನತೆಗೆ ದೊರೆಯುವಂತೆ ಏರ್ಪಾಡು ಮಾಡಬೇಕು. ಕೂಲಿಗಳಿಗೆ, ನಿರುದ್ಯೋಗಿಗಳಿಗೆ ಹೆಚ್ಚು ಪ್ರಮಾಣದಲ್ಲಿ ಹೆಚ್ಚು ಜನರಿಗೆ ಕೂಲಿ ದೊರೆಯುವಂತೆ ಅವಕಾಶ ಮಾಡಬೇಕು ಎಂದು ಕೇಳಿಕೊಂಡು ನಮ್ಮ ಮುಂದಿರುವ ಇಲಾಖೆಗಳ ಬೇಡಿಕೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ, ಸ್ವಾಮಿ.

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈಗ ಸಾಮಾನ್ಯ ಆಡಳಿತದ ಬಗ್ಗೆ ಮಾನ್ಯ ಸದಸ್ಯರು ಸಲಹೆ ನೀಡಿದ್ದಾರೆ. ನಾನು ನೀರಾವರಿ ಬೇಡಿಕೆಯೇನಿದೆ ಆ ಬಗ್ಗೆ ಮಾತನಾಡುತ್ತೇನೆ. ಒಟ್ಟಿನಲ್ಲಿ ನಮ್ಮ ಮೈಸೂರು ರಾಜ್ಯದ ಮರಾಮತ್ ಇಲಾಖೆಗೆ ಮೊಟ್ಟಮೊದಲು ರಾಜ್ಯದಲ್ಲಿ ಒಂದು ಶ್ರೇಷ್ಠತೆಯಿತ್ತು ಮತ್ತು ದೇಶದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಫಲಪ್ರದವಾಗಿ ಕಾರ್ಯರೂಪಕ್ಕೆ ತಂದರು, ಸರ್ ಎಂ. ವಿಶ್ವೇಶ್ವರಯ್ಯನವರು ಒಳ್ಳೆಯ ಕೆಲಸಗಳನ್ನು ಮಾಡಿದರು. ಕಾಂಗ್ರೆಸ್ ರಾಜ್ಯ ಬಂದಮೇಲೆ ಈ ಮರಾಮತ್ ಇಲಾಖೆ ಬಹಳ ಹಣವನ್ನು ದುರುಪಯೋಗ ಮಾಡುವ ಕಂಟ್ರಾಕ್ಟರುಗಳ ಒಕ್ಕೂಟದಿಂದ ಕೆಲಸ ಮಾಡುತ್ತಿದೆ. ಈ ವಿಚಾರದಲ್ಲಿ ಮಂತ್ರಿಮಂಡಲದ ಮೇಲೆ ಛಾರ್ಜ್‌ಷೀಟನ್ನು ಕೊಟ್ಟರೂ ಕೂಡ ಯಾವ ವಿಚಾರಣೆಯನ್ನೂ ಮಾಡಿಲ್ಲ. ವಿರೋಧ ಪಕ್ಷ ಹೀಗೆ ಛಾರ್ಜ್‌ಷೀಟನ್ನು ಕೊಟ್ಟಮೇಲೂ ಕೂಡ ಮರಾಮತ್ ಇಲಾಖೆಯಲ್ಲಿ ಅಧಿಕಾರ ವರ್ಗಕ್ಕೆ ಬಡ್ತಿಯನ್ನು ಯಾವ ಆಧಾರದಮೇಲೆ ಕೊಡುತ್ತಿದ್ದಾರೆ ಎಂದು ಎಲ್ಲರೂ ಮೂಲಭೂತವಾಗಿ ಹೇಳಿದ್ದಾರೆ. ನಾನೂ ಕೂಡ ಇದರ ಔಚಿತ್ಯವನ್ನು ಪ್ರಶ್ನಿಸಬೇಕಾಗಿದೆ. ಈ ಇಲಾಖೆಯಲ್ಲಿರುವ ಎಲ್ಲ ಅಧಿಕಾರಿಗಳೂ ಮತ್ತು ಸರಕಾರದವರೂ ಸೇರಿ ಕಂಟ್ರಾಕ್ಟರುಗಳಿಂದ ಹಣ ಸಂಪಾದನೆ ಮಾಡಿ 1967 ರಲ್ಲಿ ನಡೆಯುವ ಚುನಾವಣೆಗಾಗಿ ಕೋಟಿಗಟ್ಟಲೆ ಹಣ ಸಂಗ್ರಹ ಮಾಡುತ್ತಿದ್ದಾರೆ ಎಂಬ

ವದಂತಿಯಿದೆ. ಕಾಂಗ್ರೆಸ್ ರಾಜ್ಯದಲ್ಲಿ Congress head is four annas and foot is 15 rupees ಎಂದು ಹೇಳುತ್ತಾರೆ. ಇಲ್ಲಿಗೆ ಇಳಿದಿದೆ ನಮ್ಮ ರಾಜ್ಯ. ನೀರಾವರಿ ಯೋಜನೆಗಳನ್ನು ಕೈಗೊಂಡು ಎಷ್ಟು ಯೋಜನೆಗಳನ್ನು ಯಶಸ್ವಿಯಾಗಿ ಮಾಡಿದ್ದಾರೆಂಬುದನ್ನು ನೋಡಬೇಕು. ಮುಖ್ಯ ಮಂತ್ರಿಗಳು ನೇರವಾಗಿ ಉತ್ತರ ಹೇಳಬೇಕು. ತುಮಕೂರು ಜಿಲ್ಲೆಯಲ್ಲಿ ಜಯಮಂಗಲಿ ನದಿಗೆ ಅಡ್ಡಲಾಗಿ ತಿರುಕನಪಾಳ್ಯದ ಬಳಿ ಜಲಾಶಯವನ್ನು ಕಟ್ಟುವ ವಿಷಯವನ್ನು 1962 ರಿಂದ ಈ ಸಭೆಯ ಗಮನಕ್ಕೆ ತಂದೆ, ಆಂಧ್ರದಲ್ಲಿ ಜಯಮಂಗಲಿ ನದಿಗೆ ಜಲಾಶಯ ಕಟ್ಟುವುದರ ಬಗ್ಗೆ ವಿಪುಲವಾಗಿ ಪ್ರಶ್ನೆ ಮಾಡಿದಾಗ ಸರ್ಕಾರದವರು ಜವಾಬ್ದಾರಿಯುತವಾಗಿ ಒಂದು ಆಶ್ವಾಸನೆ ಕೊಟ್ಟರು, ಜಯಮಂಗಲಿಗೆ ಅಡ್ಡಲಾಗಿ ನಮ್ಮ ದೇಶದಲ್ಲೇ ಜಲಾಶಯ ಕಟ್ಟುತ್ತೇವೆ, ಅದರಿಂದ ರೈತರಿಗೆ ಅನುಕೂಲವಾಗುತ್ತದೆ ನೀರಾವರಿಗೆ ಅವಕಾಶವಾಗುತ್ತದೆ ಎಂದು ಹೇಳಿದರು. ಹಾಗೆ ಹೇಳಿದವರು ನೀರಾವರಿ ಅಭಾವವಿರುವ ತುಮಕೂರು ಜಿಲ್ಲೆಯಲ್ಲಿ ಈ ಜಲಾಶಯ ಕಟ್ಟಲು ಡಿಮ್ಯಾಂಡಿನಲ್ಲೇಕೆ ಹಣ ಒದಗಿಸಿಲ್ಲ ಎಂದು ಪ್ರಶ್ನೆ ಮಾಡಬೇಕಾಗಿದೆ. ಸರ್ಕಾರ ಕೊಟ್ಟ ಭರವಸೆ, ಆಶ್ವಾಸನೆ ಏನಾಯಿತು ? ಇದಕ್ಕೆ ಸಮಜಾಯಿಷಿ ಹೇಳಬೇಕು. ತುಮಕೂರು ಜಿಲ್ಲೆಯಲ್ಲಿ ಮೈನರ್ ಇರಿಗೇಷನ್ ಇಲಾಖೆಯವರು ನೂರಾರು ಅಂದಾಜುಗಳನ್ನು ಮಾಡಿದ್ದರು, ಮಾಡಲು ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿದರು, ಈ ದಿವಸವೂ ಮೈನರ್ ಇರಿಗೇಷನ್ ಇಲಾಖೆ ಇದೆ, ದೇಶಾದ್ಯಂತ ಕೆಲಸ ಮಾಡುತ್ತಿದೆ, ನೌಕರರಿಗೆ ಸಂಬಳ ಕೊಡಲಾಗುತ್ತಿದೆ, ಈ ಇಲಾಖೆಯಲ್ಲಿ ಉಪಯೋಗಮಾಡದಿರುವ ಕೋಟಿಗಟ್ಟಲೆ ಬೆಲೆಬಾಳುವ ಜೀಪುಗಳು ಇವೆ. ಬೇಕಾದಷ್ಟು ಹಣ ತೆರಿಗೆ ಮೂಲಕ ಪಡೆದು ಯೋಜನೆಗಳನ್ನು ಯಶಸ್ವಿಯಾಗಿ ಮಾಡದಿರುವುದಕ್ಕೆ ಕಾರಣವೇನು, ಔಚಿತ್ಯವೇನು ಎಂದು ಪ್ರಶ್ನೆ ಮಾಡಬೇಕಾಗಿದೆ. ತುಮಕೂರು ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು ಎಲ್ಲಾ ಜಿಲ್ಲೆಗಳಿಗಿಂತ ಕಡಮೆ ಇದೆ, ಪದೇ ಪದೇ ಅಲ್ಲಿ ಅಭಾವವುಂಟಾಗುತ್ತದೆ, ಸಣ್ಣ ಸಣ್ಣ ನೀರಾವರಿ ಕೆಲಸಗಳೇನು ಅಲ್ಲಿ ಕೈಕೊಳ್ಳಲು ಅವಕಾಶವಿದೆ ಅವನ್ನು ತೆಗೆದುಕೊಳ್ಳಲು ಬಡ್ಜೆಟ್ಟಿನಲ್ಲಿ ಅವಕಾಶ ಮಾಡಬೇಕೆಂದು ಹೇಳಿದ್ದೇವೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಗಳನ್ನು ಸೇರಿಸುತ್ತೇವೆಂದು ಅವರು ಭರವಸೆ ಕೊಟ್ಟಿದ್ದರು. ಈ ಭರವಸೆ ಏನು ಆಯಿತು ? 1962 ನೇ ಇಸವಿಯಲ್ಲಿ ನಾವು ಉಪಮಂತ್ರಿಗಳ ಮನೆಯಲ್ಲಿ ಟೀ ಪಾರ್ಟಿ ಸ್ವೀಕಾರ ಮಾಡಿದಾಗ್ಗೆ, ಯಾವ ಯಾವ ಹಳ್ಳಿಗಳಿಗೆ ಏನೇನು ಬೇಕು ಎಂಬುದನ್ನು ಅವರು ಕೇಳಿದಾಗ್ಗೆ ಅವರಿಗೆ ಬರೆದು ಕೊಟ್ಟಿದ್ದೇವೆ. ನಾನು ಬರೆದು ಕೊಟ್ಟ ಕಾಗದಗಳ ಒಂದು ದೊಡ್ಡ ಹೊರೆಯಾಗಿದೆ. ನಾವು ಕೇವಲ ಬರೆದು ಕೊಟ್ಟದ್ದಾಯಿತು. ಕಾಗದ ಮಸಿ ಮಾತ್ರ ಖರ್ಚಾಯಿತು. ಯಾವ ಸಣ್ಣ ನೀರಾವರಿ ಯೋಜನೆಯನ್ನೂ ನಮ್ಮ ಜಿಲ್ಲೆಯಲ್ಲಿ ಮಾಡಿಲ್ಲ. ಈ ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಹೊಸ ಕೆರೆಗಳ ಕೆಲಸತೆಗೆದುಕೊಂಡಿದ್ದೀರಿ ? ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ಎಂದು ಪ್ರಶ್ನೆ ಮಾಡುತ್ತೇನೆ.

ಇಂದು ಸಾಮಾನ್ಯ ಆಡಳಿತ ಸಾಮಾನ್ಯ ಕಾಂಗ್ರೆಸ್ಸಿನವರ ಕೈಯಲ್ಲಿ ಇರಬೇಕು ಎಂದಿದೆ. ಇಂದು ಒಬ್ಬ ಸಾಮಾನ್ಯ ಪುಢಾರಿ ಮಾತು ಕೇಳತಕ್ಕಂಥ ಅಧಿಕಾರಿಗಳನ್ನು ಇಟ್ಟಿದ್ದೀರಿ ನಮ್ಮ ರಾಜ್ಯದಲ್ಲಿ. ಯಾವ ಜಿಲ್ಲೆಯಲ್ಲಿ ಹೋಗಲಿ ಯಾವ ತಾಲ್ಲೂಕಿನಲ್ಲಿ ಹೋಗಲಿ ಅಧಿಕಾರಿಗಳು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಕೈಕೂಸಿನ ಗೊಂಬೆಯಾಗಿದ್ದಾರೆ. ಮಂಡಳಕಾಂಗ್ರೆಸ್ ಕೈಗೊಂಬೆಯಾಗಿದ್ದಾರೆ. ಡಿವಿಜನಲ್ ಕಮೀಷನ್ ಅವರ ಹುದ್ದೆ ರದ್ದು ಮಾಡಬೇಕು ಎಂದು ನಾವು ಅನೇಕ ಸಾರಿ ಹೇಳಿದ್ದೇವೆ. ಆದರೆ ಈ ಹುದ್ದೆಗಳು ಇನ್ನೂ ಮುಂದುವರಿಯುತ್ತಿವೆ. ಈ ಡಿವಿಜನಲ್ ಹುದ್ದೆ ಯಾತಕ್ಕೋಸ್ಕರ ಇರಬೇಕು ? ನಾಲ್ಕೈದು ಲಕ್ಷ ರೂಪಾಯಿ ಕೇವಲ ಸಿಬ್ಬಂದಿಯ ಮೇಲೆ ಖರ್ಚು ಮಾಡಲಾಗುತ್ತಿದೆ. ಈ ಖರ್ಚು ಉಳಿತಾಯ ಮಾಡದೇ ಇದ್ದರೆ ರೈತರ ಮೇಲೆ ಏತಕ್ಕೆ ತೆರಿಗೆ ಹಾಕಬೇಕು ? ಈ ಡಿವಿಜನಲ್ ಕಮಿಷನರ್ ಹುದ್ದೆ ಏತಕ್ಕೆ ಇಟ್ಟುಕೊಂಡಿದ್ದೀರಿ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಮೊಟ್ಟ ಮೊದಲು ಈ ಹುದ್ದೆ ರದ್ದು ಮಾಡಬೇಕು.

ಇನ್ನು ಎನ್.ಜಿ.ಓ. ವಿಚಾರ. ನಮ್ಮ ಮಾನ್ಯ ಸ್ನೇಹಿತರು ಅನೇಕರು ಈಗಾಗಲೇ ಈ ವಿಷಯ ಹೇಳಿದ್ದಾರೆ. ಎನ್.ಜಿ.ಓ. ಬೇಡಿಕೆಗಳನ್ನು ಆದರಿಸಬೇಕು. ಎನ್.ಜಿ.ಓ. ಅಸೋಸಿಯೇಷನ್ ಅವರು ತಮ್ಮ ಬೇಡಿಕೆಗಳನ್ನು ಶಾಂತ ರೀತಿಯಲ್ಲಿ ಗಂಭೀರವಾಗಿ ರಾಜ್ಯದ ಮುಂದೆ ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ಇಡುವಾಗ್ಗೆ ಎನ್.ಜಿ.ಓ.ಗಳಿಗೆ ಸಂಬಳ ಜಾಸ್ತಿ ಕೊಡುವುದಕ್ಕೆ ಸಾಧ್ಯವಿಲ್ಲ. ಅವರ ಸಂಬಳ ಹೆಚ್ಚು ಮಾಡುವುದಾದರೆ ತೆರಿಗೆ ಹಾಕುವುದಕ್ಕೆ ಒಪ್ಪಿಕೊಳ್ಳಿ ಎಂದು ಹೇಳಿದ್ದಾರೆ. ನಾನು ಒಂದು ಮಾತು ಕೇಳುತ್ತೇನೆ. ಮೂರು ಸಹಸ್ರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕಂಥ ಅಧಿಕಾರಿಗಳು ಏತಕ್ಕೆ ಬೇಕು ? ಈ ಉನ್ನತ ಅಧಿಕಾರಿಗಳಿಗೆ ಒಂದು ಸಹಸ್ರ ರೂಪಾಯಿಗಿಂತ ಹೆಚ್ಚು ಸಂಬಳ ಇರಬಾರದು. ಇಂದು ಬಡ ನೌಕರರ ಜೀವನ ಸುಗಮವಾಗಿ ಸುಖಮಯವಾಗಿ ಆಗಬೇಕಾದರೆ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ಅವರು ಜೀವನ ಮಾಡುವುದಕ್ಕೆ ಸಾಕಾಗುವಷ್ಟು

(ಶ್ರೀ ಕೆ. ಲಕ್ಕಪ್ಪ)

ಸಂಬಳ ಕೊಡಬೇಕು. ಹೆಚ್ಚು ಸಂಬಳದ ಅಧಿಕಾರಿಗಳು ಇರುವುದು ಬೇಡ. ಆದರೆ ಬಡ ನವಕರರಿಗೆ 5–10 ರೂಪಾಯಿ ಜಾಸ್ತಿ ಮಾಡಬೇಕು. ಅವರ ಬೇಡಿಕೆ ನಿರಾಕರಿಸಬೇಕು ಎಂಬ ಒಂದು ವಾದ ಇದೆ. ಇದನ್ನು ಸರಕಾರ ಶೀಘ್ರವಾಗಿ ಯೋಚನೆ ಮಾಡದೇ ಇದ್ದರೆ ರಾಜ್ಯದಲ್ಲಿ ಅನಾಯಕತ್ವ ಬೆಳೆಯುತ್ತದೆ ಹಾಗೂ ಆಡಳಿತ ಸರಿಯಾಗಿ ಸಾಗಲು ಸಾಧ್ಯವಿಲ್ಲ. ಇನ್ನು ಮುಂದೆ ಆಗಬಾರದು ಆಗುವ ಸಮಯ ಬರುತ್ತಾ ಇದೆ. ಸರಕಾರದ ಆಡಳಿತ ಯಂತ್ರ ಕೆಡದ ರೀತಿಯಲ್ಲಿ ವ್ಯವಸ್ಥೆ ಮಾಡದೇ ಹೋದರೆ ಬೇಗ ಕ್ರಾಂತಿಯಾಗುವುದು ನಿಜ. ಇಷ್ಟು ಕೋಟಿ ಕೋಟಿ ರೂಪಾಯಿ ಬೇಡಿಕೆ ಅದನ್ನು ಮೂರು ನಾಲ್ಕು ಗಂಟೆಯೊಳಗೆ ಚರ್ಚೆ ಮಾಡಿ ಒಪ್ಪಿಕೊಳ್ಳಬೇಕು ಎಂಬ ಸರಕಾರದ ನೀತಿಯನ್ನು ನಾನು ವಿರೋಧಿಸುತ್ತೇನೆ. ಇದರ ಚರ್ಚೆಗೆ ಇನ್ನೂ ಹೆಚ್ಚು ಕಾಲ ಕೊಡಬೇಕಾಗಿತ್ತು. ಕೋಟ್ಯಾಂತರ ರೂಪಾಯಿ ಬೇಡಿಕೆಗೆ ಒಪ್ಪಬೇಕಾದರೆ ಕಷ್ಟವಾಗಿದೆ. ಇದರಲ್ಲಿಯ ಲೋಪದೋಷಗಳನ್ನು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಹೇಳುವುದೇನೆಂದರೆ, ತುಮಕೂರು ಜಿಲ್ಲೆಯಲ್ಲಿ ಅಧಿಕಾರಿಗಳನ್ನು ಹಾಕಿರತಕ್ಕಂಥವರನ್ನು ಆದರಲ್ಲಿಯೂ ಮಧುಗಿರಿಯ ಸಬ್ ಸಬ್ ಡಿವಿಜನಲ್ ಆಫೀಸ್ ಅಧಿಕಾರಿಯನ್ನು ಅವರು ಮಾಡಿರತಕ್ಕಂಥ ತಪ್ಪುಗಳಿಗಾಗಿ ವಿಚಾರಣೆ ಮಾಡಬೇಕು, ಹಾಗೂ ಆ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಅಧ್ಯಕ್ಷರೆ, ಈ ಬೇಡಿಕೆಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಚೆನ್ನಾಗಿ ಮಾತನಾಡಿದ್ದಾರೆ. ವಿಚಾರ ಮಾಡಿ ಮಾತನಾಡಿದ್ದಾರೆ. ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಟೀಕೆ ಮಾಡಿದ್ದಾರೆ. ಅವರು ಉಪಯೋಗಿಸಿದ ಭಾಷೆ ಗಂಭೀರವೂ ಇದೆ ಬಾಲ ಭಾಷೆಯೂ ಇದೆ. ಕೆಲವು ಸಂದರ್ಭಗಳಲ್ಲಿ ಸಭ್ಯತೆ ಮೀರ ತಕ್ಕಂಥ ಭಾಷೆ ಬಳಸಲಾಗಿದೆ. ಆದರೆ ಆದಕ್ಕೆ ಗಮನ ಕೊಡತಕ್ಕದ್ದು ಸರಿಯಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಯಾಕಂದರೆ, ಉತ್ಪ್ರೇಕ್ಷೆಯಿಂದ ಕಾಣತಕ್ಕದ್ದರ ಕಡೆಗೆ ಗಮನ ಕೊಡಬಾರದು.

ಮೊದಲನೆಯದಾಗಿ ಸಾಮಾನ್ಯ ಆಡಳಿತ ವಿಚಾರದಲ್ಲಿ ಕೆಲವು ಟೀಕೆ ಮಾಡಿದ್ದಾರೆ. ಹೀಗೆ ಟೀಕೆ ಮಾಡುತ್ತಾ ಶ್ರೀಮಾನ್ ಲಕ್ಕಪ್ಪನವರು ಮರಾಮತ್ತು ಇಲಾಖೆ ಬಹಳ ಕೆಟ್ಟುಹೋಗಿದೆ ಎಂದು ಹೇಳುತ್ತಾರೆ. ಬಹುಶಃ ಹಿಂದೆ ಇದ್ದ ಮರಾಮತ್ತು ಇಲಾಖೆಗೂ ಇಂದಿನ ಮರಾಮತ್ತು ಇಲಾಖೆಗೂ ಹೋಲಿಸಿ ನೋಡಿದರೆ ಇವುಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಮರಾಮತ್ತು ಇಲಾಖೆಯಲ್ಲಿ ಯಾವ ಕೆಲಸವೂ ದುಡ್ಡು ಇಲ್ಲದೆ ನಡೆಯುವುದಿಲ್ಲ ಎಂಬ ಒಂದು ಮಾತು ಇತ್ತು. ಸರ್ವೇ ಸಾಮಾನ್ಯವಾದುದು ಈ ಮಾತು. ಈ ಇಲಾಖೆಯಲ್ಲಿ ಮಾಮೂಲು ಎಂದು ಇತ್ತು. ಮರಾಮತ್ತು ಇಲಾಖೆಯಲ್ಲದೆ ಇದು ಎಲ್ಲಾ ಇಲಾಖೆಗಳಲ್ಲಿ ಮಾಮೂಲು ಎಂಬುದು ಇತ್ತು. ಈಗ ಮಾಮೂಲು ಬಗ್ಗೆ ಜನ ವಿಚಾರ ಮಾಡುತ್ತಾರೆ. ಇದು ಸರಿಯಲ್ಲ ಎಂದು ತಿಳಿದುಕೊಂಡಿದ್ದಾರೆ. ಇವತ್ತು ಇದು ಬಹಳಮಟ್ಟಿಗೆ ಕಡಿಮೆಯಾಗಿದೆ. ಮರಾಮತ್ತು ಇಲಾಖೆಯಲ್ಲಿ ಎಷ್ಟೋ ಚೆನ್ನಾಗಿ ಕೆಲಸಮಾಡುತ್ತಾ ಇದ್ದಾರೆ ಮರಾಮತು ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಮನಸಾರ ಹೊಗಳಿ ಮೆಚ್ಚಬೇಕಾಗಿದೆ. ಅವರನ್ನು ದೂಷಣೆ ಮಾಡುವುದಕ್ಕೆ ಕಾರಣವಿಲ್ಲ. ಇರಬಹುದು. ಅಲ್ಲೊಬ್ಬ ಇಲ್ಲೊಬ್ಬ ಕೆಟ್ಟ ಮನುಷ್ಯ ಇರಬಹುದು. ಲಂಚಕೋರ ಅಪ್ರಾಮಾಣಿಕ ಮನುಷ್ಯ ಇರಬಹುದು. ಅಥವಾ ಸಾಕಷ್ಟು ದಕ್ಷತೆ ಇಲ್ಲದೇ ಇರತಕ್ಕ ಮನುಷ್ಯ ಒಬ್ಬನು ಇರಬಹುದು. ಸರ್ವೇ ಸಾಧಾರಣವಾಗಿ 30–40 ವರ್ಷಗಳ ನನ್ನ ಅನುಭವದಲ್ಲಿ ನಾನು ನೋಡಿದ್ದೇನೆ. ಈಗ ಈ ಇಲಾಖೆ ಏನು ಕೆಲಸ ಮಾಡುತ್ತಾ ಇದೆಯೋ ಅದು ಅತ್ಯಂತ ಪ್ರಾಮಾಣಿಕವಾಗಿ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಹಾಗೇನಾದರೂ ಪ್ರಮಾಣ ತಪ್ಪಿ ನಿಷ್ಠೆ ತಪ್ಪಿ ಒಬ್ಬ ಅಧಿಕಾರಿ ಇದ್ದರೆ ಆ ಬಗ್ಗೆ ಸಾಕಷ್ಟು ವಿಚಾರ ಸರಕಾರಕ್ಕೆ ತಿಳಿಸಿದರೆ, ಸರಕಾರಕ್ಕೆ ಮನದಟ್ಟವಾಗತಕ್ಕ ವಿಷಯ ತಿಳಿಸಿದರೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ. ಈ ಅಧಿಕಾರಿ ನನಗೆ ಬೇಕಾಗಿಲ್ಲ ನನ್ನ ಮಾತು ಕೇಳಲಿಲ್ಲ ಎಂದು ಅವನಮೇಲೆ ಇಲ್ಲದ ಸಲ್ಲದ ಆರೋಪ ಮಾಡತಕ್ಕದ್ದು ಅಂದರೆ ನನಗೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಮರಾಮತ್ತು ಇಲಾಖೆ ಮತ್ತು ಬಾಕಿ ಇಲಾಖೆಗಳ ಅಧಿಕಾರಿಗಳ ಬಗ್ಗೆ ಅನೇಕ ಸಲ ಕೆಲವರು ನನ್ನ ಹತ್ತಿರ ಬರುತ್ತಾರೆ. ಅವನನ್ನು ಟ್ರಾನ್ಸ್‌ಫರ್ ಮಾಡಿ ಇವನನ್ನು ಟ್ರಾನ್ಸ್‌ಫರ್ ಮಾಡಿ ಎಂದು ನನಗೆ ಹೇಳುತ್ತಾರೆ. ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಸೂಕ್ಷ್ಮವಾಗಿ ಅನೇಕ ಸದಸ್ಯರು ಬರುವುದರಿಂದ ನಾನು ಎಲ್ಲರಿಗೂ ಹೇಳುತ್ತೇನೆ. ಈ ಅಧಿಕಾರಿಗಳ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಬೇಡಿ ಎಂದು ಎಲ್ಲರಿಗೂ ಸೂಕ್ಷ್ಮವಾಗಿ ಹೇಳುತ್ತೇನೆ. ಇದು ಸರಿಯಲ್ಲ. ಏನಾದರು ತಪ್ಪು ನಡೆದರೆ ಅದನ್ನು ತಿಳಿಸಬೇಕು. ವಿನಾಕಾರಣವಾಗಿ ದೂರತಕ್ಕಂಥಾದ್ದು

ಸರಿಯಲ್ಲ ಎಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಒಬ್ಬ ಮನುಷ್ಯ ಒಬ್ಬ ಅಧಿಕಾರಿ ಯಾವ ಡಿಪಾರ್ಟ್‌ಮೆಂಟಿನವನೇ ಆಗಲಿ ಏನಾದರು ಅನಾನುಕೂಲ ಮಾಡಿದ್ದರೆ ಅನ್ಯಾಯ ಮಾಡಿದ್ದಾರೆ ಅಂಥ ತಪ್ಪನ್ನು ಸರ್ಕಾರದ ಗಮನಕ್ಕೆ ತಂದರೆ ಅವನಿಗೆ ಶಿಕ್ಷೆ ಮಾಡಲು ಸರ್ಕಾರ ಹಿಂದು ಮುಂದೆ ವಿಚಾರ ಮಾಡುವುದಿಲ್ಲ. ವಿಜಲೆನ್ಸ ಕಮಿಷನ್ ನಿಷ್ಪ್ರಯೋಜನವಾಗಿದೆ ಎಂದು ಒಬ್ಬರು ಹೇಳಿದರು. ಆದರೆ ಅಲ್ಲಿ ಅಧ್ಯಕ್ಷರಾಗಿ ಕೆಲಸಮಾಡುತ್ತಿರುವವರು ಶ್ರೇಷ್ಠನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಯೋಗ್ಯ ಮನುಷ್ಯರು, ಪ್ರಾಮಾಣಿಕತೆಗೆ ಹೆಸರಾದ ಮನುಷ್ಯರಾಗಿದ್ದಾರೆ. ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ ಎಂಬುದಕ್ಕೆ ಅವರು ಮಾಡುವ ಕೆಲಸವೇ ಸಾಕ್ಷಿಯಾಗಿದೆ. ಎಲ್ಲದರ ಬಗ್ಗೆ ಟೀಕೆ ಮಾಡುವುದು ಕೆಲವರ ಸಾಮಾನ್ಯ ವರ್ತನೆಯಾಗಿದೆ. ಸಾಮಾನ್ಯವಾಗಿ ಎಲ್ಲರೂ ಕೆಟ್ಟುಹೋಗಿದ್ದಾರೆ ಪ್ರಪಂಚ ಕೆಟ್ಟು ಹೋಗುತ್ತದೆ ಎಂದು ಹೇಳುತ್ತಾರೆ. ಕೆಳಗಿನಿಂದ ಹಿಡಿದು ಮೇಲಿನವರೆಗೂ ಕೆಟ್ಟು ಹೋಗಿದೆ ಎಂದು ಹೇಳುವುದು ಒಂದು ಫ್ಯಾಷನ್‌ನಾಗಿ ಹೋಗಿದೆ. ಎಲ್ಲರೂ ಅಪ್ರಾಮಾಣಿಕರು ಎಂದು ಹೇಳುವುದು ಒಂದು ಫ್ಯಾಷನ್ ಆಗಿದೆ. ಅದನ್ನು ಯೋಚನೆ ಮಾಡದೆ ಹೇಳುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ಇದನ್ನು ಹೇಳುವವರು ನಾವು ಏನೋ ಬದ್ಧಿವಂತರು, ನಾವೇ ಪ್ರಾಮಾಣಿಕರು ಎನ್ನುವ ಹಾಗೆ ಮಾತನಾಡುವ ಜನ ಇದ್ದಾರೆ. ನಾನು ಅದನ್ನು ಒಪ್ಪಲಾರೆ. ಅಪ್ರಾಮಾಣಿಕತೆ ಇಲ್ಲವೇ ಇಲ್ಲ ಎಂದು ಹೇಳುವ ಧೈರ್ಯವನ್ನೂ ನಾನು ಮಾಡಲಾರೆ. ಆದರೆ ಇವತ್ತಿನ ದಿವಸ ಇಲ್ಲಿ ಕೆಲಸ ಮಾಡತಕ್ಕಂಥ ನಮ್ಮ ಸರ್ಕಾರದ ನೌಕರರೆಲ್ಲಾ ಸಾಧಾರಣವಾಗಿ ಎಲ್ಲಾ ದರ್ಜೆಗಳಲ್ಲೂ ಹೆಚ್ಚು ಪ್ರಾಮಾಣಿಕರಾಗಿದ್ದಾರೆಂದು ನನಗನ್ನಿಸುತ್ತದೆ. ಕೆಲಸಗಳು ನಿಧಾನವಾಗುತ್ತದೆ ಎಂದು ಆಕ್ಷೇಪಣೆ ಮಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಪ್ಪಿಕೊಳ್ಳುವುದು ಸರಿಯೆಂದು ನನಗೆ ಕಾಣಿಸುತ್ತದೆ. ನನಗೆ ಬಂದಿರುವ 4-5 ವರ್ಷಗಳ ಅನುಭವದಲ್ಲಿ ಕೆಲಸಗಳು ತಡವಾಗು ವುದಕ್ಕೆ ಅನೇಕ ಕಾರಣಗಳುಂಟು ಎಂದು ಕಾಣುತ್ತದೆ. ಅದು ಹೋಗಬೇಕು. ಎಲ್ಲಿಯವರೆಗೆ ಕೆಲಸ ಚೆನ್ನಾಗಿ ಆಗುವುದಿಲ್ಲ, ಅಲ್ಲಿಯವರೆಗೆ ಸರ್ಕಾರದಲ್ಲಿ ದಕ್ಷತೆಯಿಂದ ಕೆಲಸಗಳಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಡಿಲೇ ಮಾಡುವವರಿಗೆ ಡಿ.ಐ.ಆರ್. ಉಪಯೋಗಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಬಹಳ ಸಂತೋಷ. ಡಿ. ಐ. ಆರ್. ಅವಶ್ಯಕತೆ ಕಂಡು ಕೊಂಡಿದ್ದೀರಲ್ಲಾ! ಡಿಲೇ ಇದೆ. ಅದನ್ನು ಆದಷ್ಟು ಕಡಿಮೆ ಮಾಡಬೇಕು. ಅದಕ್ಕೆ ಕಾರಣ ವಾದರೂ ಇಷ್ಟೇ. ಯಾವುದೋ ಒಂದು ಹಿಂದಿನ ಸರ್ಕಾರದಿಂದ ಆಡಳಿತ ಯಂತ್ರ (ಮಿಷನ್) ವನ್ನು ಪಡೆದಿದ್ದೇವೆ. ಹಿಂದಿನ ಆಡಳಿತ ಯಂತ್ರ ಒಳ್ಳೆಯ ವೆಲ್‌ಫೇರ್ ಸ್ಟೇಟಿನಲ್ಲಿ ಇರಲಿಲ್ಲ. ಪೋಲೀಸ್ ಸ್ಟೇಟ್ ಆಗಿತ್ತು. ಹೀಗಾಗಿ, ಜನಗಳ ಸೇವೆ ಆದಷ್ಟು ಜಾಗ್ರತೆ ಆಗಬೇಕು ಎನ್ನುವ ಮನೋಭಾವನೆ ಆ ಸರ್ಕಾರಕ್ಕಾಗಲೀ, ಆ ಸರ್ಕಾರಿ ನೌಕರರಿಗಾಗಲೀ ಇರಲಿಲ್ಲ. ಆಗ ನನ್ನದು ಒಂದು ಸಲಹೆ ಇತ್ತು. ಇದೇ ವಿಚಾರ ಯೋಚನೆ ಮಾಡುವಾಗ 1952ನೇ ಇಸವಿಯಲ್ಲಿ ನಾನು ಹೇಳಿದ್ದೆ ಈಗ ಇರತಕ್ಕಂಥ ಎಲ್ಲರನ್ನೂ ತೆಗೆದುಹಾಕಿ, ಯಾರು ದೇಶಕ್ಕಾಗಿ ದುಡಿದಿದ್ದಾರೋ, ಯಾರು ಅರ್ಹರಾಗಿದ್ದಾರೋ ಅಂಥ ಜನರನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಮನವಿ ಮಾಡಿದೆ. ಇದು ಅನೇಕರಿಗೆ ಹಿಡಿಯಲಿಲ್ಲ. ಕಷ್ಟವಾಗುತ್ತದೆ, ಬೇಡ, ಈಗಿರುವುದೇ ಸರಿಯಾಗಿದೆ ಎಂದು ಹೇಳಿದರು. ಆ ಯಂತ್ರ (ಮಿಷಿನರಿ) ಇನ್ನೂ ಸ್ವಲ್ಪಮಟ್ಟಿಗೆ ಬದಲಾವಣೆ ಯಾಗಬೇಕು. ಆ ಯಂತ್ರ ಬದಲಾವಣೆಯಾಗುತ್ತಿದೆ. ಅನೇಕ ಹಳಬರು ಹೋಗುತ್ತಿದ್ದಾರೆ. ಹೊಸ ಹೊಸ ಅಧಿಕಾರಿಗಳು ಬರುತ್ತಿದ್ದಾರೆ. ನನ್ನ ಅನುಭವದಲ್ಲಿ ಹೊಸ ದಾಗಿ ಬಂದಿರತಕ್ಕ ಎಲ್ಲರೂ ಸಾಧಾರಣವಾಗಿ ಒಂದು ಸೇವೆಯ ಮನೋವೃತ್ತಿ ಇಟ್ಟುಕೊಂಡು ಕೆಲಸಮಾಡುತ್ತಿದ್ದಾರೆ. ಹಳೆಯ ಸಂಪ್ರದಾಯಗಳು ಹೋಗುವುದಕ್ಕೆ ಸ್ವಲ್ಪತಡವಾಗುತ್ತದೆ. ಬಹಳಮಟ್ಟಿಗೆ ಆಡಳಿತ ಯಂತ್ರ ಹೆಚ್ಚು ದಕ್ಷತೆಯಿಂದ ಶೀಘ್ರವಾಗಿ ಕೆಲಸ ಮಾಡುವುದಕ್ಕೆ ಮೊದ ಲನೇ ಅಡಿ ಇಟ್ಟಿದೆಯೆಂದು ಹೇಳುತ್ತೇನೆ. ಎಲ್ಲಾ ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಇದು ನಮ್ಮೆಲ್ಲರ ಕರ್ತವ್ಯ. ಸರ್ಕಾರ ನಡೆಸತಕ್ಕಂಥವರು ಸರ್ಕಾರಿ ನೌಕರರು ಎಲ್ಲಾ ದರ್ಜೆಯವರು ಕೆಲಸ ಮಾಡುವುದು ಅವಶ್ಯಕ. ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಸಿಬ್ಬಂಧಿ ಬಹಳ ಜಾಸ್ತಿ ಇದೆ ಎಂದು. ನನಗೂ ಹಾಗೆ ಕಾಣಿಸುತ್ತದೆ. ನ್ಯಾಯವಾಗಿ ಹೇಳಬೇಕೆಂದರೆ ಗುಮಾಸ್ತ ರುಗಳು ಮತ್ತು ಕೆಲವು ಆಫೀಸರುಗಳನ್ನು, ಕೆಲವು ಕಡೆ ಕಡಿಮೆ ಮಾಡಬಹುದು ಎಂದು ತಿಳಿಸು ತ್ತೇನೆ. ಹೆಚ್ಚಿಗೆ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲವೆಂದರೂ ಸ್ವಲ್ಪವಾದರೂ ಉಳಿಯುತ್ತಾರೆ. ಸ್ವಲ್ಪ ಜನ ಇದ್ದರೆ ಕೆಲಸ ಚೆನ್ನಾಗಿ ಆಗಬಹುದು. ಜವಾಬ್ದಾರಿ ಸ್ವಲ್ಪ ಹೆಚ್ಚು ಇದ್ದರೆ ಕೆಲಸ ಚೆನ್ನಾಗಿ ಆದೀತು ಎಂದು ಕಾಣುತ್ತದೆ. ಸೆಕ್ರೆಟೇರಿಯಟ್ ರೂಮುಗಳಿಗೆ 3 ಘಂಟೆ ಹೊತ್ತಿನಲ್ಲಿ ಹೋಗಿ ನೋಡಿದರೆ ಶೇಕಡ 50 ಕುರ್ಚಿಗಳು ಖಾಲಿ ಇರುತ್ತವೆ. ಇನ್ನು ಇರತಕ್ಕಂಥ 25 ಜನ ಮಾತ ನಾಡುತ್ತಿರುತ್ತಾರೆ. ಇನ್ನು 25 ಜನರಲ್ಲಿ 10 ಜನ ರೆಕಾರ್ಡು ನೋಡುತ್ತಿರುತ್ತಾರೆ. ಈ ರೀತಿ ಇದೆ. ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟುಮಟ್ಟಿಗೆ ದೋಷವನ್ನು ಹೇಗೆ ಹೋಗಲಾಡಿ

(ಶ್ರೀ ಎಸ್. ನಿಜಲಿಂಗಪ್ಪ)

ಸಬೇಕು ಎನ್ನತಕ್ಕಂಥ ಪ್ರಶ್ನೆ ಒಂದು ಕ್ಲಿಷ್ಟವಾದ ಪ್ರಶ್ನೆಯಾಗಿದೆ. ಅವರನ್ನೆಲ್ಲಾ ಮನೆಗೆ ಕಳಿಸು ವುದಕ್ಕಾಗುವುದಿಲ್ಲ. ಇದು ಕಷ್ಟವಾಗುತ್ತದೆ. ಶ್ರೀಮಾನ್ ಪಾಟೀಲರು ಹೇಳುವ ರೀತಿಯಲ್ಲಿ ಸರಿಯಾಗಿ ಕೆಲಸ ಮಾಡದವರನ್ನು ಮನೆಗೆ ಕಳಿಸುವುದು ಸುಲಭದಲ್ಲಿ ಆಗುವುದಿಲ್ಲ. ಅವರು ಕನ್ ಟ್ರಾಕ್ಟ್ ತೆಗೆದುಕೊಂಡು ಬಂದಿರುತ್ತಾರೆ. ನನಗೆ ಗೊತ್ತಿದೆ, ಯಾರಾದರು ಒಬ್ಬ ನೌಕರನನ್ನು ಶಿಕ್ಷೆ ಮಾಡಬೇಕೆಂದರೆ ಬಹಳ ಕಷ್ಟವಿದೆ. ಶ್ರೀ ಪಾಟೀಲರು ಲಾಯರ್ ಆಗಿ ಯಾರಾದರೂ ನೌಕ ರರ ಪರವಾಗಿ ಕೆಲಸ ಮಾಡಿದರೂ ಹೆಚ್ಚಲ್ಲ. ಕಾನೂನುಗಳಿಗೆ ಸಂಭಂಧಪಟ್ಟಿರತಕ್ಕಂಥ ರೂಲ್ಸ್ ಗಳನ್ನು ಬದಲಾವಣೆ ಮಾಡಬೇಕೆಂದು ರಾಜ್ಯದ ಪ್ರತಿನಿಧಿಗಳು, ಕೇಂದ್ರದ ಪ್ರತಿನಿಧಿಗಳು ಆಲೋ ಚನೆ ಮಾಡುತ್ತಿದ್ದಾರೆ. ಆದಷ್ಟು ಜಾಗ್ರತೆ ಆಗಬಹುದು ಎಂದು ಕಾಣಿಸುತ್ತದೆ. ತಪ್ಪು ಮಾಡಿ ದಂಥ ಅಧಿಕಾರಿಯನ್ನು ಸುಲಭವಾಗಿ ಶಿಕ್ಷೆ ಮಾಡುವುದಕ್ಕಾಗುವುದಿಲ್ಲ. ತಪ್ಪು ಮಾಡಿದ್ದಾರೆ ಎಂದು ಗೊತ್ತಿದ್ದರೂ ಶಿಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಅದು ಸುಲಭವಾಗಿ ಆಗತಕ್ಕಂಥ ಮಾತಲ್ಲ. ಬಹುಶಃ ನೌಕರರೇ ಜವಾಬ್ದಾರಿಯನ್ನು, ಹೊಣೆ ಗಾರಿಕೆಯನ್ನು ತಿಳಿದು, ನಾವು ಒಂದು ಮಹಾರಾಷ್ಟ್ರದ ನೌಕರರು, ನಾವು ಸೇವೆ ಮಾಡುವುದು ನಮ್ಮ ಕರ್ತವ್ಯ ಎಂದು ತಿಳಿದು ಕೆಲಸ ಮಾಡಬೇಕು. ಹೇಗೋ ಹಾಗೆಯೇ ನೌಕರರಲ್ಲಿ ಸಾರ್ವಜನಿಕ ರಲ್ಲಿ ಸೇವಾ ಮನೋಭಾವ ಹೆಚ್ಚು ಹೆಚ್ಚು ಬೆಳೆಯಬೇಕು ಅದೇ ರೀತಿ ದೇಶದ ಎಲ್ಲಾ ಕ್ಷೇತ್ರ ಗಳಲ್ಲಿಯೂ ಬಂದರೆ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ಎಲ್ಲಾ ಕೆಟ್ಟು ಹೋಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬ ಇಂಜಿನೀಯರ್‌ಗೆ ಪ್ಯರಾಲಿಸಿಸ್ ಹೊಡೆದಿದೆ, ಇದಕ್ಕೆ ಕಾರಣ ಅವರು ಹೆಚ್ಚು ಕೆಲಸ ಮಾಡಿದ್ದು. ಹೆಚ್ಚು ಕೆಲಸ ಮಾಡಬೇಡ ಎಂದು ಹೇಳಿದರೂ ಕೇಳದೆ ಮಾಡಿ ಈಗ ಆಸ್ಪತ್ರೆಯಲ್ಲಿದ್ದಾರೆ. ಇಂಥಹ ಅನೇಕ ಜನರು ಇದ್ದಾರೆ. ಅಂಥವರನ್ನು ಮೆಚ್ಚ ತಕ್ಕಂಥದ್ದು ನಮ್ಮ ಕರ್ತವ್ಯ.

ಇದಕ್ಕೆ ಸಂಬಂಧಪಟ್ಟಂತೆ ಸೀನಿಯಾರಿಟಿ ಲಿಸ್ಟ್ ವಿಚಾರವಾಗಿ ಹೇಳುವುದಾದರೆ, ಇದು ನಮ್ಮ ತಲೆ ಬಹಳವಾಗಿ ತಿನ್ನುತ್ತಿದೆ. ಹೊಸ ರಾಜ್ಯವಾಗಿ 10 ವರ್ಷವಾಗುತ್ತಾ ಬಂತು. ಇದು ಇನ್ನೂ ಬಗೆಹರಿದಿಲ್ಲ. ಬಗೆ ಹರಿಯುವುದಕ್ಕೆ ಕಷ್ಟವಿದೆ. 5 ಕಡೆಯಿಂದ ಜನರು ಬಂದು ಸೇರಿದ್ದಾರೆ. ಈ ರೀತಿ ಸೇರಿಕೊಂಡು ಒಂದೊಂದು ಕಾನೂನು, ಒಂದೊಂದು ರೂಲ್ಸ್, ಕೇಡರಗಳು ಇದೆ. ಇವತ್ತು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಬಗೆಹರಿಸಿ ಈಗ ಶೇಕಡ 80-85 ಆಗಿದೆ. ಇದು ಬಹುಶಃ ಇನ್ನು ಮೇಲೆ ಸರಿಹೋದೀತು. ಇನ್ನೊಂದು ಇವತ್ತು ಯಾವುದೇ ಲಿಸ್ಟ್ ಬರಲಿ, ಅದಕ್ಕೆ ಒಬ್ಬ ಮನುಷ್ಯ ನನಗೆ ಅನಾನುಕೂಲವಾಯಿತು ಎಂದು ಹೈಕೋರ್ಟಿನಲ್ಲಿ ರಿಟ್ ಹಾಕುತ್ತಾನೆ. ನಾನು ಹೈಕೋರ್ಟಿನವರನ್ನು ಟೀಕೆ ಮಾಡುವುದಿಲ್ಲ. ಅಲ್ಲಿಂದ ತಡೆ ಆಜ್ಞೆ ಬರುತ್ತದೆ. ಎಷ್ಟೋ ಸಾರಿ ನೌಕರರು ರಿಟ್‌ಗಳನ್ನು ಹೈಕೋರ್ಟಿಗೆ ಹಾಕುತ್ತಾರೆ. ತಡೆ ಆಜ್ಞೆಗಳು ಬರುತ್ತಿರುತ್ತವೆ. ಈ ರೀತಿ ಆಗತಕ್ಕಂಥ ಆಜ್ಞೆಗಳನ್ನು ನೋಡಿದರೆ ನಾವು ಮಾಡಿರುವುದೇ ಸ್ವಲ್ಪ ಹೆಚ್ಚು ಎನಿಸುತ್ತದೆ. ಅದಕ್ಕೆ ಆದಷ್ಟು ಜಾಗ್ರತೆ ಮಾಡಬೇಕೆಂದು ಇದ್ದೇವೆ. ಶೇಕಡ 80 ರಷ್ಟು ಕೆಲಸವಾಗಿದೆ. ಇನ್ನು ಆರು ತಿಂಗಳಲ್ಲಿ ಮುಗಿಯುತ್ತದೆಯೆಂದು ಕಾಣುತ್ತದೆ. ಈ ಮಧ್ಯೆ ಹೈಕೋರ್ಟ್ ಮಧ್ಯೆ ಪ್ರವೇಶ ಮಾಡದಿದ್ದರೆ, ಸ್ಟೇ ಆರ್ಡರ್ ಕೊಡದಿದ್ದರೆ ಪೂರೈಸಬಹುದು. ಈಗ ಶೇಕಡ 10 ರಷ್ಟು ಉಳಿದಿದೆ. ಈ ರೀತಿ ಆಗುತ್ತಿರುವುದರಿಂದ ಇದು ಸ್ವಲ್ಪ ಕಷ್ಟವಾಗಿದೆ. ನೌಕರರಲ್ಲಿ ಅಸಮಾಧಾನಕ್ಕೆ ಕಾರಣ ವಾಗಿದೆ. ಏಕೆಂದರೆ ತಾವು ಮೇಲಿರಬೇಕಾಗಿತ್ತು, ಸ್ವಲ್ಪ ಕೆಳಗಡೆ ಹೋಗಿದ್ದೇವೆ ಎಂದು ಹೇಳು ತ್ತಾರೆ. ಇದು ಮನುಷ್ಯ ಸ್ವಭಾವ. ಅದನ್ನೇ ಆ ನೌಕರರು ದೊಡ್ಡದು ಮಾಡಿಕೊಂಡು ಕೆಲಸ ಮಾಡದಿರುವುದು ಸರಿಯಲ್ಲ. ಆ ರೀತಿ ಮಾಡುವುದಿಲ್ಲ, ಯೋಗ್ಯ ರೀತಿಯಿಂದ ಕೆಲಸ ಮಾಡುತ್ತಾರೆ ಎಂದು ನಂಬಿದ್ದೇನೆ. ಸ್ವಲ್ಪಮಟ್ಟಿನ ಅಸಮಾಧಾನ ಸ್ವಲ್ಪಮಟ್ಟಿನ ದಕ್ಷತೆ ಅಭಾವ ಇರುವುದು ಎಲ್ಲಾ ಸರಿಹೋದೀತು ಎಂದು ಒಪ್ಪಿಕೊಳ್ಳುತ್ತೇನೆ. ಇನ್ನು ಬಾಕಿಯವೆಲ್ಲಾ ಹೇಳಿದ್ದೇನೆ. ಇನ್ನು ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ತುಮಕೂರಿನಲ್ಲಿ ಏನನ್ನೂ ಮಾಡಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮ ಜಿಲ್ಲೆಯನ್ನು ನೋಡಿದರೆ ತುಮಕೂರು ಬಹಳಷ್ಟು ರೀತಿಯಲ್ಲಿ ಮುಂದುವರೆದಿದೆ. ಆದ್ದರಿಂದ ನಿಮ್ಮನ್ನು ಮರೆತಿಲ್ಲ. ಮರೆಯುವುದಕ್ಕೂ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮಗೆ ಎಲ್ಲಾ ಜಿಲ್ಲೆಗಳು ಸೇರಿದೆಯಲ್ಲವೆ.

ಶ್ರೀ ಎಸ್. ನಿಜಲಿಂಗಪ್ಪ.—ನೀವು ಬಹಳ ಬುದ್ಧಿವಂತರು, ಇರಲಿ ಅದು. ಶ್ರೀಮಾನ್ ಸುಂಠ ನ್‌ಕರ್ ಅವರು ಒಂದು ಆಕ್ಷೇಪಣೆ ಮಾಡಿದರು. ಭಾಷಾವಾರು ದೃಷ್ಟಿಯಿಂದ ಅಲ್ಪಸಂಖ್ಯಾತರನ್ನು ಬಹಳ ನಿರ್ಲಕ್ಷ್ಯದಿಂದ ಕಾಣುತ್ತಿದ್ದಾರೆ ಎಂದು. ಅದು ತಪ್ಪು. ಅವರಿಗೂ ಗೊತ್ತಿರಬೇಕು,

ಕರ್ನಾಟಕದ ಜನ ಬೇರೆ ಯಾರು ಬಂದರೂ ಸಹ, ಸಹಸ್ರಾರು ವರ್ಷಗಳಿಂದ ಎಲ್ಲರಿಗೂ ಆಶ್ರಯ ವನ್ನು ಕೊಟ್ಟಿದ್ದಾರೆ. ಅನೇಕ ಮಹಾತ್ಮರಿಗೂ, ಮಹಾ ಮಹಾ ಗುರುಗಳಿಗೂ ಆಶ್ರಯ ಕೊಟ್ಟಿದ್ದಾರೆ. ದೊಡ್ಡ ದೊಡ್ಡ ರಾಜರುಗಳಿಗೆ ಛತ್ರಪತಿ ಶಿವಾಜಿ ಮಕ್ಕಳಿಗೆ ಆಶ್ರಯ ಕೊಟ್ಟಿದ್ದಾರೆ. ನಾವು ಶಾಂತಿ ಪ್ರಿಯರು. ನಾವು ಅನ್ಯಾಯ ಮಾಡುತ್ತೇವೆ ಎಂದು ಹೇಳತಕ್ಕಂಥ ಮಾತು ಸರಿಯಲ್ಲ. ಬಾಕಿ ರಾಜ್ಯದಲ್ಲಿ ಏನು ನಡೆಯುತ್ತಿದೆ, ಏನು ಸುಧಾರಣೆ ನಡೆದಿಲ್ಲ ಎಂಬುದನ್ನು ಬೇಕಾದರೆ ಹೋಗಿ ನೋಡಿಕೊಂಡು ಬರಲಿ. ಆದರೆ ನಾವು ಏನು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ. 1956ನೇ ಇಸವಿಯಲ್ಲಿ ಒಟ್ಟು ಈ ರಾಜ್ಯದಲ್ಲಿ 783 ಮರಾಠಿ ಪ್ರೈಮರಿ ಸ್ಕೂಲುಗಳಿದ್ದವು. 1964-65ರ ಹೊತ್ತಿಗೆ, ಸುಮಾರು 8 ವರ್ಷಗಳೊಳಗೆ 858 ಸ್ಕೂಲುಗಳಾಗಿವೆ. ಉಪಾಧ್ಯಾಯರುಗಳು 2,221 ಇದ್ದದ್ದು 3,042 ಆಯಿತು. ವಿದ್ಯಾರ್ಥಿಗಳ ಸಂಖ್ಯೆ 81,289 ಇದ್ದುದು 1,16,750 ಆಯಿತು. ಬೆಳಗಾಂ ಜಿಲ್ಲೆಯಲ್ಲಿ ಪಾಠಶಾಲೆಗಳು 517 ಇದ್ದದ್ದು 533 ಆಯಿತು. ಉಪಾಧ್ಯಾಯರುಗಳು 1,482 ಇದ್ದದ್ದು 2,141 ಆಯಿತು. ವಿದ್ಯಾರ್ಥಿಗಳ ಸಂಖ್ಯೆ 56,487 ಇದ್ದದ್ದು 86,745 ಆಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪಾಠಶಾಲೆಗಳು 87 ಇದ್ದದ್ದು 172 ಆಗಿವೆ. ಉಪಾಧ್ಯಾಯರ ಸಂಖ್ಯೆ 187 ಇದ್ದದ್ದು 252 ಆಗಿದೆ. ವಿದ್ಯಾರ್ಥಿಗಳ ಸಂಖ್ಯೆ 7,097 ಇದ್ದದ್ದು 9,084 ಆಗಿದೆ. ಜನಸಂಖ್ಯೆಗಿಂತ ಜಾಸ್ತಿಯಾಗಿದೆ. ಅವರಿಗೆ ಹೆಚ್ಚು ಉತ್ತೇಜನ ಸಿಕ್ಕುತ್ತಾ ಇದೆ. ಬಿದರ್‌ನಲ್ಲಿ 138 ಇದ್ದದ್ದು 161 ಆಗಿದೆ, ಉಪಾಧ್ಯಾಯರು 279 ಇದ್ದದ್ದು 350 ಆಯಿತು. ವಿದ್ಯಾರ್ಥಿಗಳು 9,184 ಇದ್ದದ್ದು 11,326 ಆಯಿತು. ಹೀಗೆ ಯಾವುದೇ ಒಂದು ದೃಷ್ಟಿಯಿಂದ ನೋಡಿದರೂ ಅನ್ಯಾಯವಾಗಿದೆ ಎನ್ನುವ ಮಾತು ನಿಜವಲ್ಲ. ಮತ್ತೊಂದು ಮಾತನ್ನು ಹೇಳಿದರು. ಅಲ್ಲಿ ಜನರಿಗೆ ಕನ್ನಡ ತಿಳಿಯುವುದಿಲ್ಲ, ಮರಾಠಿ ಬರದೇ ಇರತಕ್ಕ ಅಧಿಕಾರಿಗಳನ್ನು ನೀವು ಕಳುಹಿಸುತ್ತಾ ಇದ್ದೀರಿ, ಬಹಳ ಅನ್ಯಾಯ ಮಾಡುತ್ತಾ ಇದ್ದೀರಿ ಎಂದು ಹೇಳಿದರು. ಇಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಕನ್ನಡ ಬರುತ್ತದೆ, ಅವರಿಗೂ ಅಷ್ಟು ಬರುತ್ತದೆ. ಕನ್ನಡ ಚೆನ್ನಾಗಿ ತಿಳಿಯುತ್ತದೆ ಮತ್ತು ಮರಾಠಿಯೂ ತಿಳಿಯುತ್ತದೆ. ಕನ್ನಡ ಯಾರಿಗೆ ಮಾತೃಭಾಷೆಯೋ ಅವರಿಗೆ ಮರಾಠಿಯೂ ತಿಳಿಯುತ್ತದೆ. ಮರಾಠಿ ಯಾರಿಗೆ ಮಾತೃಭಾಷೆಯೋ ಅವರಿಗೆ ಕನ್ನಡವೂ ತಿಳಿಯುತ್ತದೆ. ಕನ್ನಡ ತಿಳಿಯುವುದಿಲ್ಲ ಎಂದು ಹೇಳತಕ್ಕ ಮಾತು ಸರಿಯಲ್ಲ. ಆದರೆ ಕನ್ನಡ ಬಂದರೂ ಮಾತನಾಡುವುದಿಲ್ಲ. ಒತ್ತಾಯ ಮಾಡುವುದಕ್ಕೆ ಆಗುತ್ತದೆಯೇ ? ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರ ಭಾಷೆ ಮಾತನಾಡತಕ್ಕ ಜನರನ್ನು ನಿರ್ಲಕ್ಷಿಸಿದ್ದಾರೆ ಎನ್ನತಕ್ಕ ಮಾತು ಎಳ್ಳಷ್ಟೂ ನಿಜವಲ್ಲ. ಅನೇಕ ಸಲ ಬೆಳಗಾಂ ಜಿಲ್ಲೆಗೆ ಹೋಗಿದ್ದೇನೆ. ಮೊಟ್ಟಮೊದಲು 7-8 ವರ್ಷದ ಕೆಳಗೆ ಹೋದಾಗ ಬಹಳ ಹುರುಪು ಇತ್ತು, ಗಲಾಟೆ ಮಾಡುತ್ತಿದ್ದರು, ಕಲ್ಲು ತೆಗೆದುಕೊಂಡು ಹೊಡೆಯುತ್ತಿದ್ದರು. ನನ್ನ ಜೊತೆ ಇದ್ದವರಿಗೆ ಕಲ್ಲು ಏಟು ಕೂಡ ಬಿದ್ದಿತ್ತು. ಈಚೆಗೆ ಅದು ನಿಂತುಹೋಗಿದೆ.

Sri B. P. KADAM (Karwar).—It is going to be done again.

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೆ ಪುನಃ ಜನರನ್ನು ಎಬ್ಬಿಸುತ್ತಾರೆ ಎಂದು ಹೇಳುತ್ತಾರೆ. ಹಾಗೆ ಏನಾದರೂ ಜನರನ್ನು ಎಬ್ಬಿಸುವುದಾದರೆ ಸರ್ಕಾರ ನೋಡಿಕೊಳ್ಳುತ್ತಾರೆ, ಹೇಗೆ ನೋಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಗೊತ್ತಿದೆ. ಜನರು ಸಮಾಧಾನರಾಗಿದ್ದಾರೆ. ಜನರಿಗೆ ಏನು ಕೆಲಸ ಆಗಬೇಕೋ ಅದು ಸಮಾಧಾನರೀತಿಯಿಂದ ನಡೆಯುತ್ತಾ ಇದೆ, ಕೆರೆಗಳು ಆಗುತ್ತಾ ಇವೆ, ರಸ್ತೆಗಳು ಆಗುತ್ತಾ ಇವೆ, ಎಲೆಕ್ಟ್ರಿಸಿಟಿ ಕೊಡುತ್ತಾ ಇದ್ದೇವೆ. ನೀರಿನ ಸೌಕರ್ಯ ಆಗಿದೆ. ಆ ಭಾಗದವರಿಗೆ ಬಾವಿ ಕೊಡಿಸಿಕೊಟ್ಟು ಇವರಿಗೆ ಕೊಡಿಸಿಕೊಟ್ಟಿಲ್ಲ ಎಂದು ಹೇಳುವುದು ನಿಜವಲ್ಲ. ಯಾವುದೇ ದೃಷ್ಟಿಯಿಂದ, ತಾರತಮ್ಯ ಭಾವನೆಯಿಂದ ಬೇರೆ ಬೇರೆ ದೃಷ್ಟಿಯಿಂದ, ಭಿನ್ನತೆಯಿಂದ ನೋಡುತ್ತಿದ್ದೇವೆ ಎನ್ನತಕ್ಕ ಮಾತಿನಲ್ಲಿ ತಿರುಳಿಲ್ಲ. ಏತಕ್ಕೆ ಹೀಗೆ ಮಾಡುತ್ತಾರೆ ಎಂದರೆ ಅದು ರಾಜಕೀಯ. ಮಾನ್ಯ ಸದಸ್ಯರಿಗೆ ಈ ಕೂಗು ಬಿಟ್ಟರೆ ಬೇರೆ ಕೂಗು ಎಲೆಕ್ಷನ್‌ಗೆ ಇಲ್ಲ. ಆದ್ದರಿಂದ ಅದನ್ನು ಮಾಡಿಯೇ ಮಾಡುತ್ತಾರೆ. ಮರಾಠಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಎಲೆಕ್ಷನ್ ಹೋದರೆ ಹೇಳುವುದಕ್ಕೆ ಬೇಕು. ಅದಕ್ಕಾಗಿ ಉಪಯೋಗಿಸುತ್ತಿದ್ದಾರೆಯೇ ವಿನಾ ಮರಾಠಿಗೆ ಯಾವರೀತಿ ಅನ್ಯಾಯ, ಯಾವುದೇ ಸಂದರ್ಭದಲ್ಲಿ ಯಾವುದೇ ಸ್ಥಿತಿಯಲ್ಲಿ ಆಗಿಲ್ಲ ಎಂದು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದುವೇಳೆ ಅವರು ಬಿಟ್ಟು ಹೋಗುತ್ತಾರೆ ಎಂದರೆ ಹಿಂದೂಸ್ಥಾನ ಒಂದೇ ಆಗಿದೆ, ಎಲ್ಲಿಯಾದರೂ ಹೋಗಬಹುದು. ದೇಶದಲ್ಲಿ ಒಂದೊಂದು ಭಾಗ ಬೇರೆ ಬೇರೆ ಎನ್ನತಕ್ಕ ಮಾತು ಅಥವಾ ನಿಷ್ಕಾರಣವಾಗಿ ರಾಜಕೀಯಕ್ಕೋಸ್ಕರ ಅವರಿಗೆ ಅನ್ಯಾಯ ಆಗುತ್ತಾ ಇದೆ ಎಂದು ಹೇಳತಕ್ಕ ಮಾತು ಸರಿಯಲ್ಲ. ಮರಾಠಿ ಮಾತನಾಡತಕ್ಕ ಹಳ್ಳಿಗಳು ಏನು ಇವೆ ಅವು ಅಲ್ಲಿ ಹೋಗಬೇಕು ಎಂದರೆ ನ್ಯಾಯವಾದುದು. ಮೈಸೂರು ಸರ್ಕಾರ ಮೊದಲಿನಿಂದ ಹೇಳುತ್ತಾ

(ಶ್ರೀ ಎಸ್. ನಿಜಲಿಂಗಪ್ಪ)

ಇದ್ದಾರೆ. ಈಗಲೂ ಒಪ್ಪುವುದಕ್ಕೆ ಸಿದ್ಧವಾಗಿದ್ದಾರೆ. ಕೆಲವು ಕನ್ನಡ ಹಳ್ಳಿಗಳು ಅಲ್ಲಿ ಇವೆ, ಕೆಲವು ಮರಾಠಿ ಹಳ್ಳಿಗಳು ಇಲ್ಲಿ ಇವೆ. ಒಂದು ಕಡೆ ಕುಳಿತುಕೊಂಡು ಈ ವಿಚಾರದಲ್ಲಿ ಒಪ್ಪಂದಕ್ಕೆ ಬರಬಹುದು. ಅದಕ್ಕೆ ಬದಲು ಈ ರೀತಿ ಮಾತನಾಡತಕ್ಕದು ಸರಿಯಲ್ಲ. ಮಹಾರಾಷ್ಟ್ರ ಜನ ಏನು ಇದ್ದಾರೆ ಅವರಿಗೆ ಯಾವರೀತಿಯಲ್ಲೂ ಅನಾನುಕೂಲವಾಗಿಲ್ಲ. ಹೆಚ್ಚಿನ ರೀತಿಯಲ್ಲಿ ಅನುಕೂಲಗಳು ಆಗುತ್ತಾ ಇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಶೀಮಠ್ ಅವರು ತಾಲ್ಲೂಕು ಆಫೀಸುಗಳಲ್ಲಿ ಫಾರಮ್ಸ್ ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ. ಎಲ್ಲಾ ತಾಲ್ಲೂಕು ಆಫೀಸಿನಲ್ಲಿ ಫಾರಮ್ಸ್ ಇವೆ, ಆದರೆ ಈ ಸಲ ಹೊಸ ಫಾರ್ಮ್ಸ್ ಕೊಡಬೇಕಾಗುತ್ತದೆ. ಸರ್ವೇಸಾಧಾರಣವಾಗಿ ಕಾನೂನುಗಳು ಎಲ್ಲಾ ಒಂದೇ ಆಗಿವೆ. ಫಾರಮ್ಸ್ ಸಿಕ್ಕುತ್ತಾ ಇವೆ. ಈ ವಿಚಾರದಲ್ಲಿ ತೊಂದರೆ ಏನಾದರೂ ಇದ್ದರೆ ತಿಳಿಸಿದರೆ ಸರಿಪಡಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸೂರತ್‌ಕಲ್).—ರಿಜಿಸ್ಟ್ರಾರ್ ಆಫೀಸಿನಲ್ಲಿ ಶಾಯಿ ಸಿಕ್ಕುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳುವಂಥಾದ್ದು ನಂಬತಕ್ಕ ರೀತಿಯಲ್ಲಿ ಇಲ್ಲ. ಕಛೇರಿಯಲ್ಲಿ ಶಾಯಿ ಇಲ್ಲ, ಪೆನ್ಸಿಲ್ ಇಲ್ಲ, ಪೇಪರ್ ಇಲ್ಲ ಎಂದರೆ ಹೇಗೆ ನಂಬುವುದು.

Sri SANJEEVANATH AIKALA.—In Registrar's Office special kind of ink is required.

ಶ್ರೀ ಎಸ್. ನಿಜಲಿಂಗಪ್ಪ.—ಆಮೇಲೆ ತಾಲ್ಲೂಕು ಆಫೀಸಿನಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ ಎಂದು ಹೇಳಿದರು. ಸಿಬ್ಬಂದಿ ಇದೆ. ಇವೊತ್ತು ಹೇಳತಕ್ಕದ್ದು ಸಿಬ್ಬಂದಿ ಜಾಸ್ತಿ ಆಯಿತು ಎಂದು. ಕಡಿಮೆ ಇದ್ದುದನ್ನು ಜಾಸ್ತಿ ಮಾಡುವುದು ಬೇಡ. ಅನೇಕ ರೀತಿಯ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಅಧಿಕಾರಿಗಳು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಹೇಳಿದರು. ಮಾನ್ಯ ಶ್ರೀ ಗೋಪಾಲ ಗೌಡರು ಹೇಳುತ್ತಾ ಇದ್ದರು ಎಲ್ಲೋ ಹೇಗೋ ಮಾಡುತ್ತಾ ಇದ್ದಾರೆ, ಕಾಗದಗಳು ಬಂದಿವೆ ಎಂದು. ಬಹುಶಃ ಧಾನ್ಯ ವಸೂಲಿ ಮಾಡುವಾಗ ಜೋರು ಜುಲುಮೆಮಾಡಿ ಧಾನ್ಯ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಒಂದು ಪುಕಾರು ಬಹುಶಃ ಕೆಲವು ಕಡೆಗಳಲ್ಲಿ ಇದ್ದರೂ ಇರಬಹುದು. ಮತ್ತೊಂದೂ ಇದೆ, ಬೆಳೆದು ಇದ್ದುದನ್ನು ಕೊಡದೇ ಇರತಕ್ಕವರೂ ಇದ್ದಾರೆ. ಅದನ್ನು ನನ್ನ ಸ್ವಂತ ಅನುಭವದಿಂದ ನೋಡಿದೆ. ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಬೇಕಾದರೆ ಸೊಗಸಾದ ಭತ್ತದ ಬೆಳೆ ನಿಂತಿತ್ತು. ಆ ಊರಿನ ಯಜಮಾನ ತಲೆಗೆ ದೊಡ್ಡ ರುಮಾಲು ಸುತ್ತಿದ್ದರು ಅವರು ಜೊಳ್ಳುತೆನೆ ತೋರಿಸಿ ನಾನು ಕಂದಾಯ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ. ಎಷ್ಟೇ ಆದರೂ ಊರಿನ ಯಜಮಾನ, ಊರಿನ ಮುಂದೆ ಅವನಿಗೆ ಅವಮಾನ ಮಾಡಬಾರದು ಎಂದು, ಯೋಚನೆ ಮಾಡುತ್ತೇನೆ ಎಂದು ಹೇಳಿ ಬಂದೆ. ಅಂತಹವರು ಇದ್ದಾರೆ. ಇದು ಆಗಬಾರದು ಎಲ್ಲಿಯಾದರೂ ಅನ್ಯಾಯವಾಗಿ ವಸೂಲು ಆಗುತ್ತಾ ಇದ್ದರೆ ಅದನ್ನು ತಡೆಯೋಣ. ಸದಸ್ಯರು ಇಂತಹ ಕಡೆ ಅನ್ಯಾಯ ಆಗುತ್ತಾ ಇದೆ ಎಂದು ಪುಕಾರು ತಂದರೆ, ಅದನ್ನು ತಡೆಯೋಣ. ಎಲ್ಲಿ ಜನ ಬೆಳೆದಿದ್ದಾರೆ, ಅದನ್ನು ಕೊಡಿಸಿಕೊಡುವುದಕ್ಕೆ ಸಹಾಯ ಮಾಡಬೇಕು. ಹಾಗೆ ಒತ್ತಾಯ ಮಾಡಿ ಕೊಡಿಸದೇ ಹೋದರೆ ತುಮಕೂರು- ಚಿತ್ರದುರ್ಗ, ಕೋಲಾರ, ಬೆಂಗಳೂರಿನ ಕೆಲವು ಭಾಗಗಳು ಅಲ್ಲಿರುವ ಜನಗಳು ಹೇಗೆ ಬದುಕಬೇಕು ? ಆದುದರಿಂದ ಕೊಡತಕ್ಕದ್ದು ನ್ಯಾಯ; ಇದಕ್ಕೆ ಸಹಾಯ ಮಾಡಬೇಕು ಎಂದು ತಮ್ಮಲ್ಲಿ ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಇದು ಅವಶ್ಯಕ. ಎಲ್ಲಾದರೂ ಒತ್ತಾಯಮಾಡಿ ತೆಗೆದುಕೊಳ್ಳುತ್ತಾ ಇದ್ದರೆ ಅದನ್ನು ತಪ್ಪಿಸಬೇಕಾದುದು ಎಷ್ಟು ಅವಶ್ಯಕವೋ, ಎಲ್ಲಿ ಕೊಡದೇ ಇದ್ದರೆ ಅದನ್ನು ತಂದುಕೊಡತಕ್ಕದ್ದೂ ಅಷ್ಟೇ ಅವಶ್ಯಕ. ಶ್ರೀ ಸುಂತನ್‌ಕರ್‌ರವರು ಮತ್ತೊಂದು ಮಾತು ಹೇಳಿದರು. ಆಡಳಿತಕ್ಕೆ ಸಂಬಂಧಪಟ್ಟಂತೆ ಒಂದು ವರ್ಷಕ್ಕೆ 10 ಸಾವಿರಜನ ನೌಕರರನ್ನು ಜಾಸ್ತಿ ಮಾಡುತ್ತಾ ಇದ್ದೇವೆ ಎಂದು ಹೇಳಿದರು. 10 ಸಾವಿರ ಅಲ್ಲ ಇನ್ನೂ ಜಾಸ್ತಿ ಇದೆ ಏಕೆಂದರೆ ಉಪಾಧ್ಯಾಯರುಗಳನ್ನೇ ವರ್ಷಕ್ಕೆ 5 ಸಾವಿರದಂತೆ ಜಾಸ್ತಿ ತೆಗೆದುಕೊಳುತ್ತಿದ್ದೇವೆ. ಬರೀ ಒಂದು ಡಿಪಾರ್ಟ್‌ಮೆಂಟಿನಲ್ಲಿ ಇಷ್ಟು ಜಾಸ್ತಿ ನೌಕರರನ್ನು ತೆಗೆದುಕೊಳ್ಳುತ್ತಿದ್ದೇವೆ. ಇವೊತ್ತು ಬಾವಿಗಳನ್ನು ತೆಗೆಸಬೇಕು ಎಂದರೆ ಅವುಗಳನ್ನು ನೋಡಬೇಕಾಗುತ್ತದೆ. ಅವುಗಳನ್ನು ನೋಡತಕ್ಕ ಎಂಜಿನೀಯರು ಬೇಕು. ಸಂಬಂಧಪಟ್ಟ ಅಧಿಕಾರಿಗಳು ಬೇಕು, ಸಮಯ ಬಂದಾಗ ಹೆಚ್ಚು ಜನ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸರ್ಕಾರ

4-00 P.M.

ದವರಿಗೆ 50 ವರ್ಷದ ಕೆಳಗೆ ಮೂರು ಕೋಟಿ ರೂಪಾಯಿ ಆದಾಯವಿತ್ತು, ಮೂರು ಕೋಟಿ ರೂಪಾಯಿ ಖರ್ಚು ಕೂಡ ಇತ್ತು. ಇವತ್ತು ನಮಗೆ 10 ಸಾವಿರ ಜನ ನೌಕರರು ಹೆಚ್ಚಾಗಿದ್ದಾರೆ, 12 ಸಾವಿರ ಜನ ಇದ್ದಾರೆ ಎಂದರೆ ಅದು ಸರಿಯಾಗುವುದಿಲ್ಲ. ಇವತ್ತು ದೇಶದ ಕೆಲಸ ನಾನಾ ಮುಖವಾಗಿ ಬೆಳೆದಿದೆ. ಆದ್ದರಿಂದ ನೌಕರರು ಜಾಸ್ತಿಯಾದುದು ಅವಶ್ಯಕ. ಅನೇಕ ಕಡೆಗಳಲ್ಲಿ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. 5—6 ಸಾವಿರ ತೆಗೆದುಕೊಳ್ಳುತ್ತಾರೆ. ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಆಡಳಿತ ದೃಷ್ಟಿಯಿಂದ, ಜನಗಳನ್ನು ಎಲ್ಲಿ ಕಡಿಮೆ ಮಾಡಲು ಸಾಧ್ಯವೋ ಅಲ್ಲಿ ಕಡಿಮೆ ಮಾಡವುದು ಅವಶ್ಯಕ. ಹಳೆಯ ಕಾಲದಲ್ಲಿ ಎರಡೂವರೆ ಕೋಟಿ ಆದಾಯವಿತ್ತು. ದಿವಾನರಿಗೆ ಐದು ಸಾವಿರ ಸಂಬಳ ಇತ್ತು. ಅದೆಲ್ಲಾ ಸೇರಿ 10 ಸಾವಿರ ಆಗುತ್ತಿತ್ತು. ಬರೇ ಮೂರು ಜನ ಕೌನ್ಸಿಲರು, ಒಬ್ಬ ದಿವಾನರಿದ್ದರು. ಅವರಿಗೆ ಬರೇ 2 ಲಕ್ಷ ಖರ್ಚಾಗುತ್ತಿತ್ತು. ಆ ದೃಷ್ಟಿಯನ್ನು ಇಟ್ಟುಕೊಂಡು ನಾವು ಇವತ್ತು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಆದರೆ ಈ ಡಿವಿಜನಲ್ ಕಮಿಶನರ್ ಏನಿದ್ದಾರೆ, ಇದರ ವಿಷಯದಲ್ಲಿ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮತ್ತು ಈ ಸಭೆಯಲ್ಲಿ ಡಿವಿಜನಲ್ ಆಫೀಸರ್ಸ್ ಏಕೆ ಎಂದು ಆಲೋಚನೆ ಮಾಡುತ್ತಾ ಇದ್ದೆವು ಇದು ಸಕಾರಣವಾಗಿದೆ ಮತ್ತು ಸರಿಯೆಂದು ತಿಳಿದಮೇಲೆ ಇಟ್ಟುಕೊಂಡು ಬಂದಿದ್ದೇವೆ. ಶ್ರೀಮಾನ್ ಕೇಶವ ಮೂರ್ತಿಗಳು ಹೇಳಿದ ಹಾಗೆ, ತೀವ್ರವಾಗಿ ಮತ್ತು ತೀಕ್ಷಣವಾಗಿ ಈಗ ಯೋಚನೆ ಮಾಡುತ್ತಿದ್ದೇವೆ. ಬಹುಶ ಇಷ್ಟರಲ್ಲೇ ಒಂದು ತೀರ್ಮಾನಕ್ಕೆ ಬರಲಿದ್ದೇವೆ ಎಂದು ಕಾಣುತ್ತದೆ. ಅದು ಏನು ಎಂದು ಹೇಳುವುದಕ್ಕಾಗುವುದಿಲ್ಲ. ಮತ್ತು ಸಬ್ ಡಿವಿಜನಗಳನ್ನು ತೆಗೆಯಬೇಕೆಯೆಂಬುದನ್ನು ದೀರ್ಘವಾಗಿ ಆಲೋಚನೆ ಮಾಡತಕ್ಕ ವಿಷಯ.

ಇನ್ನು ನೀರಾವರಿ ವಿಚಾರದಲ್ಲಿ, ಯೋಜನೆಯ ವಿಚಾರದಲ್ಲಿ ಅನೇಕ ಜನ ಸದಸ್ಯರುಗಳು ಸಾಕಷ್ಟು ವಿಚಾರಪೂರ್ಣವಾಗಿ ಮಾತನಾಡಿದ್ದಾರೆ. ಇದು ಒಪ್ಪತಕ್ಕ ಮಾತು. ಮೈಸೂರು ರಾಜ್ಯಕ್ಕೆ ಬಡತನ ಇಲ್ಲದೆ ಇಲ; ಇದೆ. ನಾವು ಈ ವಿಚಾರದಲ್ಲಿ ಒಂದು ದೊಡ್ಡ ತಪ್ಪು ಮಾಡಿದ್ದೇವೆ. ಈಗಲೂ ಮಾಡುತ್ತಿದ್ದೇವೆ. ನಮ್ಮ ರಾಜ್ಯ ಬಹಳ ಸುಭಿಕ್ಷವಾದ, ಮತ್ತು ಏನೂ ಕೊರತೆ ಇಲ್ಲದಿರುವ ರಾಜ್ಯ ಎಂಬ ತಪ್ಪು ಅಭಿಪ್ರಾಯವನ್ನು 50—60 ವರ್ಷಗಳಿಂದಲೂ ಬೇರೆಯವರಲ್ಲಿ ಉಂಟುಮಾಡಿದ್ದೇವೆ. ನಮ್ಮ ರಾಜ್ಯಕ್ಕೆ ಬಂದವರಿಗೆಲ್ಲಾ ಸಾಕಷ್ಟು ಒಳ್ಳೆಯ ರೀತಿಯಿಂದ ನೋಡಿಕೊಂಡು ಅತಿಥಿ ಸತ್ಕಾರ ಮಾಡಿ, ಮೈಸೂರು ರಾಜ್ಯ ಬಹಳ ಸುಖವಾದ ರಾಜ್ಯ ಎನ್ನುವ ಅಭಿಪ್ರಾಯ ಹುಟ್ಟಿಸಿದ್ದೇವೆ. ಶ್ರೀ ಜವಾಹರ್‌ಲಾಲ್ ನೆಹರೂರವರೂ ಕೂಡ ಒಂದು ಸಾರಿ ನನ್ನೊಡನೆ ಈ ರೀತಿ ಹೇಳಿದ್ದಾರೆ "I say, can there be poverty in Mysore—I don't believe" ಅಗ ನಾನು ಹೇಳಿದೆ ಸ್ವಾಮಿ, ತಾವು ವಿಮಾನದಲ್ಲ ಬರುತ್ತೀರಿ, ಬೆಂಗಳೂರಿನ ಹವಾಮಾನ ಚೆನ್ನಾಗಿದೆ ಎಂದು ಹೇಳುತ್ತೀರಿ. ಸುತ್ತಮುತ್ತಲಿನ ಗದ್ದೆಗಳನ್ನು ನೋಡುತ್ತೀರಿ, ಪೈರುಪಚ್ಚೆಗಳು ಚೆನ್ನಾಗಿ ಕಾಣುತ್ತದೆ. ಆದರೆ ನೀವು ಹಳ್ಳಿಗಳಿಗೆ ಹೋಗಿ ನೋಡಿದರೆ ಬಡತನ ಎಷ್ಟುಮಟ್ಟಿಗೆ ಇದೆ ಎಂದು ಗೊತ್ತಾಗುತ್ತದೆ; ಮತ್ತು ಈ ತಪ್ಪು ಅಭಿಪ್ರಾಯ ಹೋಗುತ್ತದೆ. 'We are the poorest people' ಎಂದು ಹೇಳಿದೆ. ಅದೇ ವಿಚಾರವನ್ನು ಈಗಿನ ಪ್ರಧಾನ ಮಂತ್ರಿಯವರಿಗೂ ಹೇಳಿದೆ, ನಿಮ್ಮ ತಂದೆಯವರು ಮಾಡಿದ್ದು ತಪ್ಪು, ನೀವು ಅದನ್ನು ಮಾಡಬೇಡಿ ಎಂದು. ಅವರು ಹೇಳಿದರು, ಇಲ್ಲ, ಇಲ್ಲ, ನಿಮ್ಮಲ್ಲಿ ಬಡತನ ಇದೆ ಎಂದು. ನಾವು ಎಂದಿನವರೆಗೆ ವ್ಯವಸಾಯವನ್ನು ಮುಖ್ಯವಾಗಿಟ್ಟುಕೊಂಡಿರುತ್ತೇವೆಯೋ, ಅಂದಿನವರೆಗೆ ನಾವು ನಮ್ಮ ನೀರಾವರಿಯನ್ನು ಹೆಚ್ಚಾಗಿ ಮಾಡಿಕೊಳ್ಳಬೇಕು. ಈಗಿನಮಟ್ಟಿಗೆ ಹೇಳುವುದಾದರೆ, ಅತ್ಯಂತ ಕೆಳದರ್ಜೆಗಳಲ್ಲಿರತಕ್ಕಂತಹ ರಾಜ್ಯಗಳಲ್ಲಿ ಮೈಸೂರು ಒಂದು. ಈಗ ಇಲ್ಲಿ ಇರತಕ್ಕಂತಹ ನೀರಿನಲ್ಲಿ 18 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ, ವ್ಯವಸಾಯದ ಅಂಶವು ಶೇಕಡಾ 6 ಇದ್ದದನ್ನು ಶೇಕಡಾ 8—8ವರೆಗೆ ತಂದಿದ್ದಾರೆ. ಮೈಸೂರು ದೇಶದಲ್ಲಿ ಎಲ್ಲಾ ನದಿಗಳ ಎಲ್ಲಾ ನೀರನ್ನೂ ಉಪಯೋಗಿಸಿಕೊಂಡರೂ ಕೂಡ ಶೇಕಡಾ 24ಕ್ಕಿಂತ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಈಗ ಮದ್ರಾಸಿನಲ್ಲಿ ಶೇಕಡಾ 40 ರಷ್ಟು ಇದೆ; ಆಂಧ್ರದಲ್ಲಿ ಶೇಕಡಾ 27 ಇದೆ. ನಮ್ಮ ಮೈಸೂರಲ್ಲಿ 8ರವರೆಗೆ ಬಂದಿದೆ. ಆದ್ದರಿಂದ ನೀರಾವರಿ ಏನಿದೆಯೋ ಅವಕ್ಕೆಲ್ಲಾ ಪ್ರಾಮುಖ್ಯತೆ ಕೊಡುವುದು ಅವಶ್ಯಕ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 8 ಕೋಟಿ ಖರ್ಚುಮಾಡಬೇಕಾಗಿದ್ದುದನ್ನು ಸುಮಾರು 14 ಕೋಟಿಯವರೆಗೆ ಖರ್ಚು ಮಾಡಬೇಕೆಂದು ಮಾಡಿದ್ದೇವೆ. ಬೇರೆ ಸಣ್ಣ ನೀರಾವರಿಯೋಜನೆಗಳಿಗೆ 5ನೇ ಪಂಚವಾರ್ಷಿಕ ಯೋಜನೆಯ ಕೊನೆಯೊಳಗೆ ಏನೇನು ಖರ್ಚು ಮಾಡಬೇಕೋ ಅಷ್ಟು ಖರ್ಚು ಮಾಡಲು ಸಾಧ್ಯವಾಗಬಹುದು. ಆದರೆ ಅದರಿಂದ ಹೆಚ್ಚಿನ ಅನುಕೂಲವಾಗುವುದಿಲ್ಲ. ಮಧ್ಯಮ ವರ್ಗದ ಮತ್ತು ಅದಕ್ಕಿಂತಲೂ ಹೆಚ್ಚು ದೊಡ್ಡ ನೀರಾವರಿಗಳು ಏನಿವೆ, ಅದನ್ನು ಮಾಡತಕ್ಕದು ಅತ್ಯಾವಶ್ಯಕ. ಆದರೆ ಜನರು ಸ್ವಲ್ಪ

(ಶ್ರೀ ಎಸ್. ನಿಜಲಿಂಗಪ್ಪ)

ಭಾರ ಹೊರುವುದಕ್ಕೆ ಸಿದ್ಧರಾಗಿರಬೇಕು. ಅವರು ಬೇಡ ಎಂದು ಹೇಳಿದರೆ ಬೇಡ. ಯಾರಿಗೆ ಹೆಚ್ಚಿಗೆ ಸಂಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆಯೋ ಅವರು ಹೆಚ್ಚಿಗೆ ಕೊಡಬೇಕು. ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಅವರು ಕೊಡಬೇಕು. ನಾವು ಹಾಕುವಂತಹ ಭಾರ ಎಲ್ಲರ ಮೇಲೆ ಬೀಳುವುದು ಅವಶ್ಯಕ. ನಮಗೆ ಸರ್ಕಾರದಿಂದ ಸಹಾಯವಾಗಬೇಕು, ಆದರೆ ನಾವೇನು ಕೊಡಲಾರೆವು ಎಂದು ಹೇಳಿದರೆ ಅದು ಸರಿಯಾಗುವುದಿಲ್ಲ. ಸರ್ಕಾರಕ್ಕೆ ಸುಮ್ಮನೆ ತೆರಿಗೆ ಹಾಕಬೇಕೆನ್ನುವ ಉದ್ದೇಶವೇನಿಲ್ಲ. ಸದ್ಯ ತೆರಿಗೆ ಹಾಕದೆ ಹೆಚ್ಚು ಅನುಕೂಲ ಮಾಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ? ಸುಮಾರು 10—12 ವರ್ಷಗಳ ಹಿಂದೆ ಕಂಟ್ರಿಬೂಶನ್ ಬಿಲ್ ತಾವು ಒಪ್ಪಿದ್ದೀರಿ. ಬರೇ 5 ನಿಮಿಷಗಳಲ್ಲಿ ಒಪ್ಪಿಗೆದೊರೆಯಿತು. ಏಕೆ ಒಪ್ಪಿದ್ದಾರೆ? ಅದು ಕಮ್ಮಿ ಇತ್ತು. 500 ರೂಪಾಯಿ ಬೇಸಿಕ್ ಇದ್ದುದನ್ನು 250-200ಕ್ಕೆ ಹಾಕಬೇಕಾಯಿತು. ಅದನ್ನು ಬಹುಶಃ ನಾವು ಆಲೋಚನೆ ಮಾಡಿ, ಎಷ್ಟೇ ನಮಗೆ ಕಷ್ಟವಾದರೂ, ಎಷ್ಟೇ ಖರ್ಚಾದರೂ ಈ ಬೇಸಿಕ್ ಜಾಸ್ತಿ ಹಾಕಬಾರದು ಇಂದು ನಾವು ಕಡಿಮೆಮಾಡಿದ್ದು. ಬಾಕಿ ರಾಜ್ಯಗಳಿಗೂ ನಮಗೂ ತುಂಬಾ ವ್ಯತ್ಯಾಸವಿದೆ. ಮದ್ರಾಸಿನಲ್ಲಿ ಕೆಲವು ಭಾಗಗಳಲ್ಲಿ ಒಂದು ಎಕರೆಗೆ 300—400 ಖರ್ಚಾಗುತ್ತದೆ. ಉತ್ತರ ಹಿಂದೂಸ್ಥಾನದಲ್ಲಿ 300—325ಕ್ಕಿಂತ ಜಾಸ್ತಿ ಹೋಗುವುದಿಲ್ಲ. ನಮ್ಮಲ್ಲಿ 1,200—2,000 ರೂಪಾಯಿಯಾಗುತ್ತದೆ. ಒಂದು ಯೋಜನೆ ಕಟ್ಟಿ ಅದರ ನೀರನ್ನು ಕೊಡಬೇಕೆಂದರೆ, ಅದು ಹಾರಂಗಿ, ಹೇಮಾವತಿ, ಘಟಪ್ರಭಾ, ಮಲಪ್ರಭಾ, ಅಪರ್ ಕೃಷ್ಣ, ಯಾವುದೇ ಆಗಲಿ, ಅದಕ್ಕೆ ಎಕರೆಗೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಏಕೆಂದರೆ, ಇರತಕ್ಕ ಭೂಮಿ ಅಂಥದ್ದು. ಕೆಲವು ಕಡೆ ಕೊರೆದುಕೊಂಡು ಹೋಗಬೇಕಾಗುತ್ತದೆ; ಒಂದು ಮೈಲ್ ಹೋಗುವ ಕಡೆ 5—6 ಮೈಲ್ ಕಾಲುವೆ ತೆಗೆದುಕೊಳ್ಳಬೇಕಾಗುತ್ತದೆ. ಹೀಗಿದ್ದರೆ ನಮಗೆ ಆಗತಕ್ಕ ಖರ್ಚು ಒಂದು ಎಕರೆಗೆ ಒಂದು ಸಾವಿರದಿಂದ ಹಿಡಿದು ಎರಡು ಸಾವಿರದವರೆಗೆ ಹೋಗುತ್ತದೆ. ಹೀಗೆ ಇದೆ ಎಂದು ಹೇಳಿ, ಅದನ್ನು ಬಿಡುವುದಕ್ಕಾಗುವುದಿಲ್ಲ. ಅವನ್ನು ಮಾಡುವುದಕ್ಕೋಸ್ಕರ ಹಣ ಬೇಕು. ಒಬ್ಬ ಭಕ್ತ ಅಮ್ಮನವರ ಗುಡಿಗೆ ಹೋಗಿ 'ಹೂವಿಲ್ಲ, ಕಾಯಿಲ್ಲ ಬಂದೆ ನಿನ್ನ ಗುಡಿಗೆ ಎಂದು ಹೇಳಿದಾಗ ಆ ತಾಯಿ ಹೇಳಿದಳು ನಾನು ಏನು ಮಾಡಲಿ, ವರವೂ ಇಲ್ಲ, ಶಾಪವೂ ಇಲ್ಲ, ಹೋಗು ನಿನ್ನ ಮನೆಗೆ ಎಂದು. ಹೀಗಾಗಬಾರದು ನಾವೂ ಸ್ವಲ್ಪವಾದರೂ ಕೊಡಬೇಕು. ಸರ್ಕಾರವೂ ಆಲೋಚನೆ ಮಾಡಿ ಎಷ್ಟೇ ಖರ್ಚಾಗಲಿ ನಮ್ಮ ರೈತರ ಮೇಲೆ ಜಾಸ್ತಿ ಹೊರಿಸಬಾರದು ಎನ್ನುವ ದೃಷ್ಟಿಯಿಂದ 750 ರೂಪಾಯಿ, ಸಾವಿರ ರೂಪಾಯಿ ಹಾಕಬೇಕೆಂದು ಇದ್ದ ಕಾಂಟ್ರಿಬ್ಯೂಷನ್ 300 ರೂಪಾಯಿಗಿಂತ ಯಾವುದೇ ಸಂದರ್ಭದಲ್ಲಿ ಆಗಬಾರದು ಎಂದು ತೀರ್ಮಾನ ಮಾಡಿದೆವು. ಅದನ್ನು ಮಾನ್ಯ ಸದಸ್ಯರೆಲ್ಲರೂ ಬಹಳ ಶೀಘ್ರವಾಗಿ ಒಪ್ಪಿಕೊಂಡರು; ಏಕೆಂದರೆ ರೈತನಿಗೆ ಹೊರೆ ಕಡಮೆ ಆಯಿತು ಎಂದು. ಹಾಗೆ ಒಪ್ಪಿಕೊಂಡದ್ದು ಸರಿ. ಆದರೆ ಅದರಿಂದಲೂ ಕೆಲವು ಹಣ ಬರುತ್ತದೆ. ವಾಟರ್ ರೇಟ್ ಹಾಕದ್ದೇವೆ. ಅದನ್ನು ಕೂಡ ಬಹಳ ಕಡಮೆ ಹಾಕಿದ್ದೇವೆ. ನಾವು ವಾಗ್ದಾನ ಮಾಡಿದ್ದೇವೆ, ಭರವಸೆಯನ್ನು ಕೊಟ್ಟಿದ್ದೇವೆ ಪ್ಲಾನಿಂಗ್ ಕಮಿಷನ್ನಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ನಾವು 1966-67ನೆ ಸಾಲಿನಲ್ಲಿ ಹದಿಮೂರೂವರೆ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ, ನೀವೂ ಹೆಚ್ಚು ಕೊಡಬೇಕು ಎಂದು ಕೇಳಿದ್ದರ ಮೇಲೆ 46-47 ಕೋಟಿ ರೂಪಾಯಿಗಳಿಗೆ ನಿಂತಿದ್ದುದು ಇವತ್ತು 51 ಕೋಟಿ ರೂಪಾಯಿಗೆ ನಿಂತಿದೆ. ನಾವೂ ಸ್ವಲ್ಪಮಟ್ಟಿಗೆ ಕೊಡಬೇಕು. ಹೆಚ್ಚು ತೆರಿಗೆ ಹಾಕಬೇಕೆಂಬ ಉದ್ದೇಶ ನಮಗಿಲ್ಲ. ಇದನ್ನೆಲ್ಲ ಆಲೋಚನೆ ಮಾಡಿ ಹೋದ ಸಲ ಕಂದಾಯವನ್ನು ಒಂದಕ್ಕೆ ಎರಡರಷ್ಟು ಹಾಕಬೇಕೆಂದು ಎಲ್ಲರೂ ಒಪ್ಪಿದೆವು, ಜನಗಳೂ ಒಪ್ಪಿದರು. ಇಲ್ಲಿ ಎದುರು ಪಕ್ಷದ ಮಾನ್ಯ ಸದಸ್ಯರೆಲ್ಲ ಬಯ್ಯರೂ ಕೂಡ ಹೊರಗೆ ಹಾಕಬಹುದೋ ಏನೋ ಎಂದು ಹೇಳಿದರು. ಆದರೂ ಕೂಡ ನಾವು ಆಲೋಚನೆ ಮಾಡಿ ನಾಲ್ಕನೇ ಒಂದು ಭಾಗ ಇದ್ದುದನ್ನು ಆರನೆ ಒಂದು ಭಾಗ ಮಾಡಿದೆವು. ಅದರಿಂದ ಸುಮಾರು 60-70 ಲಕ್ಷ ರೂಪಾಯಿ ಬರುತ್ತದೆ. ಆದರೆ ನಾವು ನಿರೀಕ್ಷೆ ಮಾಡಿದ್ದು ನಾಲ್ಕು ಕೋಟಿ ರೂಪಾಯಿ. ಅದು ಒಂದು ಕೋಟಿ ರೂಪಾಯಿಗಿಂತ ಕಡಮೆಯಾಯಿತು. ಒಂದು ರೂಪಾಯಿ ಇದ್ದದ್ದು 14 ಆಣೆ ಆಗುತ್ತದೆ, 12 ಆಣೆ ಇದ್ದದ್ದು 10 ಆಣೆ ಆಗುತ್ತದೆ, ಮತ್ತು ಕೆಲವು ಕಡೆ ಒಂದು ರೂಪಾಯಿ ಇದ್ದದ್ದು ಒಂದೂಕಾಲ ರೂಪಾಯಿ, ಒಂದೂವರೆ ರೂಪಾಯಿ ಹೀಗೆ ಆಗುತ್ತದೆ.

ಈಗ ನಾವು ಅನೇಕ ಕಡೆಗಳಲ್ಲಿ ಜನಗಳಿಗೆ ಕಂದಾಯವನ್ನು ಜಾಸ್ತಿ ಹಾಕಿದ್ದೇವೆ ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಡು, ಅದಷ್ಟು ಕಡಮೆ ರೈತನಮೇಲೆ ಹೊರೆ ಬೀಳಬೇಕು ಎನ್ನುವ ಉದ್ದೇಶದಿಂದ ಒಂದಕ್ಕೆ ಎರಡು ಮಾಡಬೇಕೆಂದಿದ್ದವರು ದೀರ್ಘವಾಗಿ ಆಲೋಚನೆ ಮಾಡಿ ಮೂರನೆ ಒಂದು ಭಾಗ ಸರ್ಚಾರ್ಜ್ ಹಾಕಬೇಕೆಂದು ಮಾಡಿದೆವು. ಅಷ್ಟೂ ಕೊಡವೆ ಹೋದರೆ ಹೇಗೆ?

ತಕ್ಕಡಿ ಏಳಬೇಕು ತಾನೇ? ಇಲ್ಲದೆ ಹೋದರೆ ಕೆಲಸವಾಗುವುದಿಲ್ಲ. ಬಹುಶಃ ವಿರೋಧ ಪಕ್ಷದ ಸದಸ್ಯರು ಅರ್ಧ ಭಾಗ ಮಾಡಿರಿ ಎಂದು ಒಂದು ತಿದ್ದುಪಡಿಯನ್ನು ತಂದಿದ್ದರು.

ಶ್ರೀ ಕೆ. ಲಕ್ಕಪ್ಪ.—ಸರ್ವೆ ಸೆಟಲ್‌ಮೆಂಟ್ ಆಗುವುದಕ್ಕೆ ಪೂರ್ವದಲ್ಲಿದ್ದ ಕಂದಾಯದ ಮೇಲೆ ಅರ್ಧ ಹಾಕಬಹುದು ಎಂದು ತಂದಿದ್ದರು.

ಶ್ರೀ ಜಿ. ವಿ. ಗೌಡ (ಪಾಳ್ಯ).—ಐದು ಎಕರೆಗೆ ಕಡಮೆ ಇದ್ದರೆ ಅಂಥವರಿಗೆ ವಿನಾಯಿತಿ ಕೊಡಬೇಕೆಂದು ಕೂಡ ತಿದ್ದುಪಡಿ ಇತ್ತು.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನೆಲ್ಲ ಗಮನಕ್ಕೆ ತೆಗೆದುಕೊಂಡು ನಾವೂ ಕುಳಿತುಕೊಂಡು ಆಲೋಚನೆ ಮಾಡಿದೆವು. ಸಾಕಷ್ಟು ಆಲೋಚನೆ ಮಾಡಿ ಮೂರನೆ ಒಂದು ಭಾಗ ಕೊಡತಕ್ಕದ್ದು ನ್ಯಾಯ ಎಂದು ಹಾಗೆ ಮಾಡಿದೆವು. ಯೋಜನೆಗಳು ಆಗಬೇಕಾದರೆ ಅದಕ್ಕೆ ತಗಲುವ ವೆಚ್ಚದಲ್ಲಿ ನಾವು ಕೆಲವು ಭಾಗವನ್ನಾದರೂ ಹೊರುವುದಕ್ಕೆ ಸಿದ್ಧರಾಗಬೇಕು. ಹಾಗಾಗದೆ ಹೋದರೆ ಸಾಕಾಗುವುದಿಲ್ಲ. ಇವತ್ತು ನಮಗೆ ಐದು ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇದು ನಮಗೆ ಸಾಕಾಗುವುದಿಲ್ಲ. ನಾಲ್ಕು ಕೋಟಿ ರೂಪಾಯಿ ತುಂಗಭದ್ರ ಯೋಜನೆಗೆ ಕೊಟ್ಟರೆ ಬೇರೆ ಕಡೆಗಳಿಗೆ ಒಂದು ಲಕ್ಷ, ಐದು ಲಕ್ಷ ಹೀಗೆ ಕೊಟ್ಟರೆ ಏನೂ ಆಗುವುದಿಲ್ಲ. 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಕೊಟ್ಟ ಹಾಗೆ, ಆಗುತ್ತದೆ ಈ ವರ್ಷ ಎಂಟು ಹತ್ತು ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಬಾಬುಗಳಿಂದ ತೆಗೆದುಹಾಕಿ ಅದನ್ನು ಮಾಡಬೇಕೆಂದಿದ್ದೇವೆ. ಅಲ್ಲದೆ ನಾಲ್ಕನೆಯ ಯೋಜನೆಯಲ್ಲಿ 80 ಕೋಟಿ ರೂಪಾಯಿ ನೀರಾವರಿಗೋಸ್ಕರ ಇದೆ. ಅದನ್ನು ಕೂಡ ಕನಿಷ್ಠ ಪಕ್ಷ 100 ಕೋಟಿ ರೂಪಾಯಿ ಆದರೂ ಮಾಡಬೇಕು, ಬೇರೆ ಇಲಾಖೆಗಳಿಗೆ ಕೊಡುವ ಹಣವನ್ನು ಕಡಮೆ ಮಾಡಿ ನೀರಾವರಿಗೆ ಹಣವನ್ನು ಹೆಚ್ಚು ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈ ವರ್ಷ ಐದು ಕೋಟಿ ರೂಪಾಯಿ ಇರುವುದನ್ನು ಹತ್ತು ಕೋಟಿ ರೂಪಾಯಿ ಅಥವಾ ಕನಿಷ್ಠ ಪಕ್ಷ 8 ಕೋಟಿ ರೂಪಾಯಿಗೆ ಹೆಚ್ಚಿಸಿ ದೊಡ್ಡ ದೊಡ್ಡ ಯೋಜನೆಗಳಾದ ಹಾರಂಗಿ, ಹೇಮಾವತಿ, ಘಟಪ್ರಭ, ಮಲಪ್ರಭ ಮತ್ತು ಕಬಿನಿ, ಯಗಚಿ ಈ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಾದೀತು ಎಂದು ಆಲೋಚನೆ ಮಾಡಿದ್ದೇವೆ. ಅದಕ್ಕೆ ನಿಮ್ಮಗಳ ಸಹಕಾರ ಬೇಕು. ಕಂದಾಯವನ್ನು ಜಾಸ್ತಿ ಹಾಕಿದ ತಕ್ಷಣ, ಮುಂದೆ ಚುನಾವಣೆಗಳು ಹತ್ತಿರ ಬರುತ್ತಿವೆ, ನಮಗೆ ಓಟು ಬೇಕು ಎಂದು ಬಯ್ಯುವುದಾದರೆ ಬಯ್ಯಿರಿ, ನಾನು ಬೇಡ ಎನ್ನುವುದಿಲ್ಲ. ಅದು ರಾಜಕೀಯ. ಆದರೂ ನಿಮ್ಮ ಮನಸ್ಸಿನಲ್ಲಿ ಒಂದು ವಿಷಯ ಇರಲಿ. ನಮಗೆ ಅನುಕೂಲವಾಗಬೇಕಾದರೆ ಕಷ್ಟಗಳನ್ನು ಹೊರುವುದಕ್ಕೆ ಸಿದ್ಧರಾಗಬೇಕು ಎನ್ನುವ ಮನೋಭಾವನೆ ಬರಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಲಕ್ಷಾಂತರ ರೂಪಾಯಿ ಹಣ ದುರುಪಯೋಗ ಆಗಿರುವುದನ್ನು ಸರಿಯಾಗಿ ಏಕೆ ವಿಚಾರಿಸಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಸದಾಶಿವನಿಗೆ ತದೇಕ ಧ್ಯಾನ ಎನ್ನುವಂತೆ ಯಾವತ್ತಿಗೂ ಒಂದೇ ಒಂದು ವಿಚಾರವನ್ನು ಹೇಳುವುದು. ಅದನ್ನು ಹೇಳದೆ ಇದ್ದರೆ ಸಮಾಧಾನವಾಗುವುದಿಲ್ಲ. ಅದನ್ನು ಹೇಳಿ, ಬೇಡ ಎನ್ನುವುದಿಲ್ಲ.

ಅರಸೀಕೆರೆ ತಾಲ್ಲೂಕಿನಲ್ಲಿ ಒಡೆದು ಹೋಗಿರುವ ನಾಯಕನ ಕೆರೆ ವಿಚಾರದಲ್ಲಿ ಒಂದು ಖೋತಾ ಸೂಚನೆಯನ್ನು ತಂದಿದ್ದಾರೆ. ತಿರುಕನಹಳ್ಳಿ ಕೆರೆ ವಿಚಾರದಲ್ಲಿಯೂ ಕೇಳಿದ್ದಾರೆ. ಇದು 'ಫೀಸಿಬಲ್' ಹೌದೇ ಅಲ್ಲವೇ ಎಂದು ನೋಡಬೇಕಾಗಿದೆ. ಎಸ್ಟಿಮೇಟ್ ಆಗುತ್ತಿದೆ. ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರದ ಬಗ್ಗೆ ಒಂದು ಆಕ್ಷೇಪಣೆ ಬಂದಿದೆ. ಏನೆಂದರೆ, ಹಾಸನ ಜಿಲ್ಲೆಯಲ್ಲಿ ಎಲ್ಲ ಕೆರೆಗಳೂ ಒಡೆದು ಹೋಗಿವೆ, ಯಾವುದನ್ನೂ ಸರಿ ಮಾಡಿಲ್ಲ ಎಂದು ಹೇಳಿದ್ದಾರೆ. ಅನೇಕ ಕೆರೆಗಳು ಒಡೆದು ಹೋಗಿದ್ದು ಸರಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಮೇಲೆ ರಿಪೋರ್ಟ್ ತರಿಸಿದೆ. ನಾಲ್ಕು ಕೆರೆಗಳು ಆಗಿವೆ. ಅರಸೀಕೆರೆ ತಾಲ್ಲೂಕು ಹಳ್ಳಿಕೆರೆ ದೊಡ್ಡಕೆರೆ 1,53,000 ರೂಪಾಯಿ ಖರ್ಚಿನಲ್ಲಿ ಅದನ್ನು ತುಂಬುತ್ತಿದ್ದಾರೆ. ಅದೇ ರೀತಿಯಲ್ಲಿ ಕೆಂಬಲಮುತ್ತಿನಕೆರೆ, ಗೋವಿಂದನಕೆರೆ ಈ ಕೆರೆಗಳ ಕೆಲಸಗಳೂ ನಡೆಯುತ್ತಿವೆ. ಒಡೆದು ಹೋಗಿರುವ ಕೆರೆಗಳನ್ನು ಸರಿಪಡಿಸಲು ಬ್ರೀಚ್ ಆಗಿರುವ ಜಾಗವನ್ನು ಮುಚ್ಚುತ್ತಿದ್ದೇವೆ, ಎಲ್ಲ ಕೆರೆಗಳನ್ನೂ ಸರಿ ಮಾಡುತ್ತಿದ್ದೇವೆ. ಆ ಪ್ರದೇಶದಲ್ಲಿ all the breached tanks are taken up for execution and they are nearing completion. In most cases, minor repairs have also been attended to. ಸೋಮನಹಳ್ಳಿ, ಅರಸೀಕೆರೆ ತಾಲ್ಲೂಕು, ಈ ಕೆರೆಗೆ 47 ಸಾವಿರ ರೂಪಾಯಿಗಳ ಅಂದಾಜಾಗಿದೆ, ಅದು ಸರ್ಕಾರದ ಆಲೋಚನೆಯಲ್ಲಿದೆ.

(ಶ್ರೀ ಎಸ್. ನಿಜಲಿಂಗಪ್ಪ)

ಗಂಡಸಿ ಕ್ಷೇತ್ರದ ಬಗ್ಗೆ ಖೋತಾ ಸೂಚನೆಯನ್ನು ಕಳಿಸಿದ್ದಾರೆ. ಪ್ರವಾಹದ ಹಾವಳಿಯನ್ನು ತಪ್ಪಿಸತಕ್ಕ ಕೆಲಸವನ್ನು ಮಾಡಬೇಕೆಂದು ಖೋತಾ ಸೂಚನೆಯನ್ನು ಕಳಿಸಿದ್ದಾರೆ. ಆ ಪ್ರದೇಶದಲ್ಲಿ ಬೀಳತಕ್ಕ ಮಳೆ 20 ಅಂಗುಲ. 20 ಅಂಗುಲ ಮಳೆ ಬೀಳುವ ಕಡೆ ನೆರೆ ಹಾವಳಿ ಎಲ್ಲಿ ಬಂದೀತು, ಕೊಚ್ಚಿಕೊಂಡು ಹೇಗೆ ಹೋದೀತು ?

ಶ್ರೀ ಎಸ್. ಶಿವಪ್ಪ.—ಆರು ಕೆರೆಗಳು ಒಡೆದಿವೆ, ಸ್ವಾಮಿ.

Sri S. NIJALINGAPPA.—This is flood control, I think. There can be no flood control in an area where the average rainfall is 20 inches. ಇನ್ನು ಮೈನರ್ ಇರ್ರಿಗೇಷನ್ ಬಗ್ಗೆ ಮಾನ್ಯ ಸದಸ್ಯರು ಖೋತಾ ನಿರ್ಣಯವನ್ನು ಕಳುಹಿಸಿದ್ದಾರೆ. ಈಗಾಗಲೇ ಹಾಸನ ಜಿಲ್ಲೆಯೊಳಗೆ 67 ಲಕ್ಷ ರೂಪಾಯಿಗಳಷ್ಟು ನೀರಾವರಿ ಕಾಮಗಾರಿಗಳು ನಡೆಯುತ್ತಿವೆ. ಆದರೆ ಮಾನ್ಯ ಸದಸ್ಯರೊಬ್ಬರು ಸುಮಾರು 20 ವರ್ಷಗಳಿಂದಲೂ ಕೆಲವು ಕೆಲಸಗಳು ಅಲ್ಲಿ ನಡೆಯುತ್ತಲೇ ಇವೆಯೆಂದು ಹೇಳಿದರು. ಅವರಲ್ಲಿ ನಾನು ಒಂದು ಮಾತನ್ನು ಕೇಳುತ್ತೇನೆ. ದಯವಿಟ್ಟು ಆ ಮಾನ್ಯ ಸದಸ್ಯರು ಹಾಸದಲ್ಲಿ ಸುಮಾರು 15-20 ವರ್ಷಗಳಿಂದ ಯಾವ್ಯಾವ ಕೆಲಸಗಳು ಇನ್ನೂ ನಡೆಯುತ್ತಿವೆ ಎಂಬ ಬಗ್ಗೆ ಒಂದು ಪಟ್ಟಿಯನ್ನು ನನಗೆ ಕೊಟ್ಟರೆ ಆ ವಿಚಾರಗಳ ಬಗ್ಗೆ ನಾಳೆಯೋ, ನಾಡಿದ್ದೋ ಅಥವಾ ಆಚೆನಾಡಿದ್ದೋ ಸಂಬಂಧಪಟ್ಟ ಖೋತಾ ನಿರ್ಣಯಗಳ ಚರ್ಚೆ ಚರ್ಚೆ ಬಂದಾಗ ಉತ್ತರಗಳನ್ನು ಕೊಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಅಲ್ಲಿ ಯಾವುದಾದರೂ ಒಂದು ಹೊಸ ಕೆಲಸವನ್ನು ಮಾಡಿರುವುದನ್ನು ತೋರಿಸಿದರೆ ಸಾಕು. I will withdraw my statement.

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿ ಮುಖ್ಯವಾಗಿ ಆಗಬೇಕಾದುದು ನೀರಾವರಿ ಕೆಲಸ. ರೈತರಿಗೆ ಯಥೇಚ್ಛವಾಗಿ ನೀರು ಕೊಡಬೇಕು. ಅರ್ಧ ಕೆರೆ ಕೆಲಸವಾಗಿ ಇನ್ನರ್ಧವನ್ನು ಹಾಗೆಯೇ ಬಿಡುವುದು ತಿರುಪತಿ ಕ್ಷೌರಮಾಡಿದ ಹಾಗಾಗುತ್ತದೆ. ಅದಕ್ಕೋಸ್ಕರ ಅಲ್ಲಿನ ಅಪೂರ್ತಿಕೆಲಸಗಳು ತ್ವರಿತವಾಗಿ ಪೂರ್ತಿ ಆಗಬೇಕಾದುದು ಮುಖ್ಯ.

ಶ್ರೀ ಎಸ್. ಶಿವಪ್ಪ.—ಕೆಲವು ಕಡೆಗಳಲ್ಲಿ ಹಳೆಯ ಕೆಲಸಗಳಿದ್ದರೂ ಹೊಸ ಕೆಲಸಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಚನ್ನರಾಯಪಟ್ಟಣದ ಅನಾದಿ ಕೆರೆಗೆ 1 ಲಕ್ಷ 15 ಸಾವಿರ ರೂಪಾಯಿಗಳ ಅಂದಾಜು ಆಗಿದೆ. ಆ ಬಗ್ಗೆ ಕೆಲವರು ಮಾತ್ರ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಬಾಕಿಯವರು ಕಳುಹಿಸಲಿಲ್ಲ.

Sri G. V. GOWDA.—If the Chief Minister were to reply to every cut motion we too would have sent.

Sri S. NIJALINGAPPA.—I have no objection to reply next time if I am here.

Sri S. SIVAPPA.—The plan itself is a spill-over scheme programme.

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರಕ್ಕೆ ಹಣಕಾಸಿನ ವಿಚಾರದಲ್ಲಿ ಏನು ತೊಂದರೆ ಇದೆಯೆಂಬುದನ್ನು ಹೇಳಿದ್ದೇನೆ. ಮೊನ್ನೆದಿವಸ ಹಣಕಾಸಿನ ಮಂತ್ರಿಗಳು ಅದನ್ನು ಬಿಚ್ಚಿ ಹೇಳಿದ್ದಾರೆ. ಇನ್ನೂ ನಮಗೆ ಎಷ್ಟು ಸಾಲವಿದೆಯೆಂಬುದನ್ನು ವಿವರವಾಗಿ ಹೇಳಿದ್ದಾರೆ. ಯಾರದೋ ತಪ್ಪಿಗಾಗಿ ಎಷ್ಟೋ ಓವರ್‌ಡ್ರಾಫ್ಟ್‌ಗಳು ನಮ್ಮ ತಲೆಯಮೇಲೆ ಬಿದ್ದಿವೆ.

Sri C. J. MUCKANNAPPA.—It will come true one day.

ಶ್ರೀ ಎಸ್. ನಿಜಲಿಂಗಪ್ಪ.—ಈಗ ಪ್ರತಿಯೊಂದು ಊರಿನಲ್ಲಿಯೂ ಕೆರೆ ಆಗಬೇಕು ಎಂದು ಹೇಳುವಾಗ 8 ಆಣೆ ಕಂದಾಯ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಯಾವ ನ್ಯಾಯ ? ಹೊಸ ಕಾಮಗಾರಿಗೆ 200 ರೂಪಾಯಿಗಳ ಮುಂಗಡ ಹಣ ಕೊಡಲಿ. ನಾವು ಬಡ್ಡಿ ಕೊಡುತ್ತೇವೆ. ಅದುದರಿಂದ ಯಾರಿಗೆ ಅನುಕೂಲವಾಗುತ್ತದೆಂದರೆ ರೈತರಿಗೆ. ನಮಗೆ 1,200 ರೂಪಾಯಿಗಳಾಗುತ್ತದೆ. ಆಗ ಎಷ್ಟಾದರೂ ಕೇಳಲಿ, ಕೊಡೋಣ. ಕೆಲವು ಕಡೆಗಳಲ್ಲಿ ಆ ರೀತಿ ರೈತರು ಮುಂದೆ ಬಂದಿದ್ದರಿಂದ ಕೆಲವು ಕೆರೆಗಳ ಕಾಮಗಾರಿಗಳನ್ನು ಸುಮಾರು 15 ದಿವಸಗಳಲ್ಲಿ ಮಾಡಿ ಮುಗಿಸಿದ್ದಾರೆ. ಆ ರೀತಿಯಾಗಿ ಎರಡು ಕಡೆಗಳಲ್ಲಿ ರೈತರು ಕೊಟ್ಟಿದ್ದಾರೆ, ಅನುಕೂಲಗಳನ್ನು ಪಡೆಯುತ್ತಿದ್ದಾರೆ. ಹೀಗೆ ಸರ್ಕಾರಕ್ಕೆ ಸಹಾಯಮಾಡುವುದು ಎಲ್ಲರ ಕರ್ತವ್ಯ.

ಶ್ರೀ ಎಸ್. ಶಿವಪ್ಪ.—ಹಾಗಾದರೆ ಬರೀ ಶ್ರೀಮಂತರೇ ಬಂದು ಇವರಲ್ಲಿ ವ್ಯಾಪಾರ ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೊಂದು ಆಕ್ಷೇಪಣೆ. ಹಳೇ ಮೈಸೂರಿಗೆ ಏನೂ ಮಾಡಲಿಲ್ಲವೆಂಬ ವಾದ. ಅದನ್ನು ಏಕೆ ಸದಸ್ಯರು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಹಾಸನ ಜಿಲ್ಲೆಯೊಂದರಲ್ಲಿಯೇ ಸುಮಾರು 79 ಲಕ್ಷ ರೂಪಾಯಿಗಳ ಕಾಮಗಾರಿಗಳು ಈಗಾಗಲೇ ನಡೆಯುತ್ತಿವೆ. ಅಂದಮೇಲೆ ಏನೂ ಅಲ್ಲಿ ನಡೆಯಿಲ್ಲವೆಂದು ಹೇಳುವುದು ಸರಿಯೇ ? ಇವರಿಗೆ ಕಣ್ಣು ಇದ್ದರೂ ಕುರುಡರಾಗಿರುತ್ತಾರೆ.

ಶ್ರೀ ಎಸ್. ಶಿವಪ್ಪ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿದ್ದ ಸ್ಪಿಲ್ಓವರ್ ಕಾಮಗಾರಿಗಳನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಏಕೆ ಸೇರಿಸಿದಿರಿ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ಇರುವ ವಿಚಾರಗಳನ್ನು ಹೇಳುತ್ತಿದ್ದೇನೆ. ಆದರೆ ನಮ್ಮ ಊರಿಗೆ ಅನುಕೂಲವಾಗಿಲ್ಲ, ನಮ್ಮ ಜಿಲ್ಲೆಗೆ ಅನುಕೂಲವಾಗಿಲ್ಲ, ನನ್ನ ತಾಲ್ಲೂಕಿಗೆ ಏನೂ ಆಗಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳುವುದು ಸರಿಯಾಗಿಲ್ಲ. ಇವತ್ತು ನಮ್ಮದು ಒಂದು ರಾಜ್ಯ, ಒಂದು ದೇಶ ಆಗಿರುವಾಗ ಎಲ್ಲಾದರೂ ಅನುಕೂಲವಾಗಲಿ ಎಂಬ ಭಾವನೆ ಬರಬೇಕು. ಎಲ್ಲಿ ರೈತರಿಗೆ ಕಷ್ಟವಿದೆಯೋ ಅಲ್ಲಿ ಅನುಕೂಲಮಾಡುವುದು ಅವಶ್ಯಕ. ಆದರೆ ಸರ್ಕಾರ ತಾರತಮ್ಯ ದೃಷ್ಟಿ ಮಾಡುತ್ತಿದ್ದಾರೆಂದು ಹೇಳುವುದೇ ಆಗಲೀ ಅಥವಾ ನಮ್ಮ ಕಡೆ ಏನೂ ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳುವುದೇ ಆಗಲೀ ಅದು ಖಂಡಿತ ಸರಿಯಲ್ಲ ಮತ್ತು ಸಾಧುವಾದುದಲ್ಲ. (ಸದಸ್ಯರುಗಳು ಮಧ್ಯೆ ಮಾತನಾಡಲು ಆರಂಭಿಸಿದರು) ನಾನು ಹೇಳುವುದನ್ನು ಕೇಳುವುದಕ್ಕೆ ಇಷ್ಟವಿಲ್ಲವೆಂದು ಹೇಳಿದರೆ ನಾನು ಭಾಷಣವನ್ನು ನಿಲ್ಲಿಸಬೇಕಾದೀತು, ಇನ್ನು ಕೆಲವರು ಕರ್ಣಾಟಕ ಬೇಡ, ಎರಡು ಆಗಬೇಕು ಎಂಬುದಾಗಿ ಇದೇ ಸಮಯದಲ್ಲಿ ಹೇಳಿದರು. ಅದು ಅರ್ಥವಿಲ್ಲದ ಮಾತು. 1947ನೇ ಇಸವಿಯಲ್ಲಿ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ ಸೇರಿ ನಾವು ಹೊಸದಾಗಿ ಸ್ವಾತಂತ್ರವಾದ ಮೇಲೆ ಕಾನ್‌ಸ್ಟಿಟ್ಯೂಷನ್ ಮಾಡುತ್ತೇವೆಂದು ಒಂದು ನಿರ್ಣಯವನ್ನು ಮಾಡಿದ್ದೆವು. ಆಗ ಒಬ್ಬ ಬಹಳ ವಯಸ್ಸಾದ ಲಾಯರ್ ಹೇಳಿದರು 1857ನೇ ಇಸವಿಯಲ್ಲಿ ಕ್ವೀನ್ ವಿಕ್ಟೋರಿಯಾ ಡಿಕ್ಲರೇಷನ್ ಆಯಿತು, ಅದರ ಗತಿಯೇನು ಎಂದು ಜನಗಳಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತಾ ಸ್ವಾತಂತ್ರ್ಯ ಬಂದಿರುವುದನ್ನೇ ಮರೆತರು. 1947ನೇ ಇಸವಿಯಲ್ಲಿಯೇ ಕೆಲವರು ಎರಡು ಕರ್ನಾಟಕ ಬೇಕು ಎಂದು ಅಪೇಕ್ಷೆಮಾಡಿದ್ದರು. ಆದ್ದರಿಂದ 1947ನೇ ಇಸವಿಯ ಮಾತನ್ನು ಈಗ ಆಡುವುದು ಸರಿಯಲ್ಲ, ಅದು ತಪ್ಪಾಗುತ್ತದೆ ಅದನ್ನು ಕೂಡಲೆ ಬಿಡುವುದು ಒಳ್ಳೆಯದು. ಇನ್ನು ಕೆಲವರು ಖೋತಾ ನಿರ್ಣಯಗಳನ್ನು ಬೇರೆ ಬೇರೆ ಕೆಲಸಗಳಿಗಾಗಿ ಕಳುಹಿಸಿದಾರೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಕೆಲಸಗಳೇನೊ ಆಗುತ್ತಿವೆ. ಹಳೆಯ ಕೆಲಸಗಳು ಮುಗಿದಮೇಲೆ ಹೊಸ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. Minor irrigation in general and Tumkur district in particular ಆದರೆ ಎಲ್ಲಿ ಹಳೆಯ ಕೆಲಸಗಳು ಮುಗಿದಿವೆಯೋ ಅಂತಹ ಕಡೆಗಳಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. Spill over amount of 46.48 lakhs for incomplete minor irrigation works. For the entire State it is 12.4 crores. In view of the existing scarcity and emergency the Finance Minister and P.W.D. Minister went round and sanctioned 75 fresh works estimated at 4 crores. The position of Tumkur District has been reviewed and spill over of Tumkur District as an 1-4-65 for 826 minor Irrigation works is 94 lakhs. 73 additional works costing about 19 lakhs have been included in the list approved. The anticipated spill over for this district is 84. The works costing 94 lakhs are taken over.

ಶ್ರೀ ಕೆ. ಲಕ್ಕಪ್ಪ.—ತಿರುಕನಪಾಳ್ಯದಲ್ಲಿ ಏಕೆ ಮೈನರ್ ಇರ್ರಿಗೇಷನ್ ವರ್ಕ್ಸ್‌ನ್ನು ತೆಗೆದುಕೊಳ್ಳಲಿಲ್ಲ ? ಆ ವಿಚಾರದಲ್ಲಿ ನಾನು ಕಾಂಪ್ರೊಮೈಜ್ ಆಗುವುದಿಲ್ಲ. ಈ ಸಭೆಯಲ್ಲಿ ಆ ವಿಚಾರವಾಗಿ ಭರವಸೆ ಕೊಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಯಾರ ಜೊತೆಗೂ ರಾಜಿಗೆ ನಿಂತಿಲ್ಲ. ಮಾನ್ಯ ಸದಸ್ಯರೂ ಆ ರೀತಿ ಬರುವುದಿಲ್ಲ. ಅದು ಬೇಡ ಮೈನರ್ ಇರ್ರಿಗೇಷನ್ ವಿಷಯವಾಗಿ ಈಗಾಗಲೇ ಸಾಕಷ್ಟು ಹೇಳಿದ್ದೇನೆ.

(ಶ್ರೀ ಎಸ್. ನಿಜಲಿಂಗಪ್ಪ)

ಇನ್ನು ಅಪ್ಪರ್ ಕೃಷ್ಣಾ ವ್ಯಾಲಿ ಪ್ರಾಜೆಕ್ಟ್ ವಿಷಯ. ಈ ವಿಚಾರದಲ್ಲಿ ಕೆಲವು ಸ್ನೇಹಿತರು ಆಕ್ಷೇಪಣೆಯನ್ನು ಎತ್ತಿದ್ದಾರೆ. ನಾವು ಹೆಚ್ಚಿಗೆ ಅವರನ್ನು ಕೇಳುತ್ತಾ ಇಲ್ಲ. 600 ಟಿ.ಎಂ.ಸಿ. ಕೇಳುತ್ತಾ ಇದ್ದೇವೆ. ನಾವು ಅದನ್ನು ಸ್ಪಷ್ಟವಾಗಿ ಕೇಳುತ್ತಿದ್ದೇವೆ. ನಮಗೆ ಬರತಕ್ಕದ್ದು 900 ಅಥವಾ ಸಾವಿರ ಟಿ.ಎಂ.ಸಿ. ಆದರೆ ಅದರಲ್ಲಿ 800 ಚಿಲ್ಲರೆಯಾದರೂ ನಮಗೆ ಬರಬೇಕು ಎಂಬುದಾಗಿ ಹೇಳಿದ್ದೇವೆ. ಗುಲ್ಹಾಟಿ ಕಮಿಷನ್ ವರದಿಯ ಪ್ರಕಾರ ಕೇವಲ 400ರಿಂದ 600ರವರಿಗೆ ಹಂಚಿದ್ದಾರೆ. ಇನ್ನೂ ಜಾಸ್ತಿ ಬರಬೇಕೆಂದು ಹೇಳಿದ್ದೇವೆ. ಕನಿಷ್ಠ ಪಕ್ಷ ಇನ್ನೂ 200 ಜಾಸ್ತಿ ಬರಬೇಕು. ಆದರೆ ಸಾವಿರ ಟಿ.ಎಂ.ಸಿ.ಯಷ್ಟು ಬರುವುದಿಲ್ಲ. ಇದು ಬಹಳ ದೊಡ್ಡ ಯೋಜನೆ ಇದೆ. ಕೇಂದ್ರದವರೇ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ. ನಮ್ಮ ಕಷ್ಟ, ಬಡತನ ಸ್ಥಿತಿಯಿಂದ ಕೇಂದ್ರ ಸರ್ಕಾರದವರೇ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಕೇಂದ್ರ ಸರ್ಕಾರದವರೇ ಬಂದು ನೋಡಿ ಕೆಲವು ಪವರ್ ಪ್ರಾಜೆಕ್ಟುಗಳನ್ನು ಅವರೇ ತೆಗೆದುಕೊಂಡು ಅನೇಕ ಯೋಜನೆಗಳನ್ನು ಈಗಾಗಲೇ ಮಾಡಿದ್ದಾರೆ. ಅತ್ಯಂತ ಬಡತನ ಇರತಕ್ಕ ಮೈಸೂರಿಗೆ ಒಬ್ಬೊಬ್ಬನಿಗೆ ಪರ್ ಕ್ಯಾಪಿಟ ವಾರ್ಷಿಕ ವರಮಾನ 300 ರೂಪಾಯಿಗಳ ಹತ್ತಿರ ಹತ್ತಿರ ಬರುತ್ತದೆ. ಬೇರೆ ಕಡೆಗಳಲ್ಲಿ ಸುಮಾರು 325 ಅಥವಾ 350 ರೂಪಾಯಿಗಳಿರುತ್ತವೆ. ಅಂದರೆ ನಾವು ಅವರ ಕೆಳಗಡೆ ಎರಡನೆಯವರು ಆಗುತ್ತೇವೆ. ಇದಕ್ಕೆ ಕಾರಣವೇನು ಎಂಬುದನ್ನು ಕೇಂದ್ರ ಸರ್ಕಾರದವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. 125 ಕೋಟಿ ರೂಪಾಯಿಗಳ ಅಂದಾಜು ಆಗತಕ್ಕ ಅಪ್ಪರ್ ಕೃಷ್ಣಾ ಯೋಜನೆಯನ್ನು ಅವರೇ ತೆಗೆದುಕೊಳ್ಳುವುದಕ್ಕೆ ನಾವು ಒತ್ತಾಯ ಪಡಿಸುತ್ತಿದ್ದೇವೆ. ಅದಕ್ಕೆ ಅವರು ಒಪ್ಪುತ್ತಾರೆಂದು ನನ್ನ ಅಭಿಪ್ರಾಯ. ಬಾಕಿ ಮಿಡಿಯಂ ಪ್ರಾಜೆಕ್ಟ್‌ಗಳನ್ನು ನಾವೇ ಮಾಡುತ್ತಿದ್ದೇವೆ. ಅದಕ್ಕೆ ಕೂಡ ಹಣದ ಅಭಾವ ಇದೆ. ಆದರೂ ಅದನ್ನು ಜಾಗ್ರತೆಯಾಗಿ ಮಾಡುವುದು ಅವಶ್ಯಕ.

4-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾವೇರಿ ವಿಷಯ ಏನಾಯಿತು !

ಶ್ರೀ ಎಸ್. ನಿಜಲಿಂಗಪ್ಪ.—ಯಾವುದನ್ನೂ ಬಿಡುವುದಿಲ್ಲ. ಎಲ್ಲಾವನ್ನೂ ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ನಾವು ತೆರಿಗೆಗಳನ್ನು ಕೊಡುತ್ತೇವೆ. ಸರ್ಕಾರ ಎಲ್ಲರಿಗೂ ಸೇರಿದ್ದು.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಸರಿಯಾದ ರೀತಿಯಲ್ಲಿ ನಡೆದುಕೊಂಡರೆ ಸರಿ. ಹೀಗೆ ಮಾತನಾಡಿದರೆ ಯಾರೂ ಒಪ್ಪುವುದಿಲ್ಲ. ಸಭ್ಯತೆಯಿಂದ, ಮರ್ಯಾದೆಯಿಂದ ನಡೆದುಕೊಂಡು ಸರ್ಕಾರದಿಂದ ಏನು ಸಹಾಯ ಬೇಕೋ ಅದನ್ನು ಪಡೆದುಕೊಳ್ಳಲಿ.

ಶ್ರೀ ಕೆ. ಲಕ್ಕಪ್ಪ.—ನೀವು ಆಂಧ್ರಕ್ಕೆ ನೀರನ್ನು ಏತಕ್ಕೆ ಕೊಟ್ಟಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಎಲ್ಲಿಯೋ ಯಾರೋ ಹೇಳಿದ್ದನ್ನು ಕೇಳಿ ಈ ರೀತಿ ಮಾತನಾಡುವುದು ಸರಿಯಲ್ಲ.

ಇನ್ನೂ 1974 ನೇ ಇಸವಿಯ ಒಳಗಾಗಿ ಕಾವೇರಿ ನದಿಯ ನೀರನ್ನು ನಾವು ಉಪಯೋಗ ಮಾಡಿಕೊಳ್ಳತಕ್ಕದ್ದು ಅವಶ್ಯಕ ಎಂದು ನಾನು ಹೇಳುತ್ತೇನೆ. ಅದರಲ್ಲಿ 120 ಟಿ. ಎಂ. ಸಿ. ಎಫ್. ಟಿ. ನೀರಿನ ಅರ್ಹತೆ ನಮಗೆ ಇದೆ. ಅದನ್ನು ನಾವು ಉಪಯೋಗಿಸಿಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. ಆ ಬಗ್ಗೆ ಸಾಕಷ್ಟು ಅಂಶಗಳನ್ನು ಶ್ರೀಮಾನ್ ದೇವೇಗೌಡರು ಕೊಟ್ಟಿದ್ದಾರೆ. ಅಮೇಲೆ ಹಾರಂಗಿ, ಹೇಮಾವತಿ, ಕಪಿನಿ ಈ ಯೋಜನೆಗಳನ್ನು ಪೂರ್ತಿ ಮಾಡುವ ಅವಶ್ಯಕತೆ ಇದೆ. ಅದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಯಗಚಿ ನದಿಯ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆ. ನಾನ್ ಷೆಡ್ಯೂಲ್ ರಿವರ್‌ನಿಂದ ಕಟ್ಟಬೇಕಾದ ಅಣೆಕಟ್ಟುಗಳನ್ನು ಕಟ್ಟಬೇಕಾಗುತ್ತದೆ. ದುಡ್ಡು ಒದಗಿದರೆ ಅಷ್ಟೆಲ್ಲ ಆದೀತು ಎಂದು ಕಾಣುತ್ತದೆ. ಹಾಗೆಯೇ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಒಂದು ಸಂತೋಷದ ವಿಚಾರವೇನೆಂದರೆ, ಈಗ ಎರಡು ವರ್ಷಗಳ ಹಿಂದೆ ಪ್ರಾರಂಭ ಮಾಡಿದಂತಹ ತುಂಗಭದ್ರಾ ಯೋಜನೆಯ ಕೆಳಗಡೆ ಸುಮಾರು ನಾಲ್ಕುವರೆ ಲಕ್ಷ ಎಕರೆ ಜಮೀನು ಸಾಗಿಗೆ ಬಂದಿದೆ. ಅದು ಸಂತೋಷ. ಅದರಲ್ಲಿ ರೈತರು ಬೆಳೆಯನ್ನು ಬೆಳೆಯಲು ಎಲ್ಲೆಲ್ಲಿ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಡಲು ಅಧಿಕಾರಿಗಳು ಆ ಕೆಲಸಗಳನ್ನು ಮಾಡತಕ್ಕದ್ದು ಅವಶ್ಯಕ ಎಂದು ನಾನು ಹೇಳುತ್ತೇನೆ.

ಶ್ರೀ ಜಿ. ವಿ. ಗೌಡ.—ಈಗ ತಾವು ಹೇಳಿದಿರಿ, ನಾನ್ ಷೆಡ್ಯೂಲ್ಡ್ ಶಿವರ್‌ಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆಂದು. ಈಗ ನಮ್ಮಲ್ಲಿ ಕುಂಡ್ಲಾ ಮುಂತಾದ ಕೆಲವು ಯೋಜನೆಗಳಿವೆ. ಅದರ ಬಗ್ಗೆ ಏನು ಮಾಡುತ್ತೀರಿ ?

Sri S. NIJALINGAPPA.—I cannot deal with all that to-day.

ಇನ್ನು ಷೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಯಾರು ಯಾರನ್ನು ಸೇರಿಸಬೇಕು ಎನ್ನುವ ವಿಚಾರವನ್ನು ಶ್ರೀಮಾನ್ ಮುನಿಚಿನ್ನಪ್ಪನವರು ಮಾತನಾಡಿದ್ದಾರೆ. ಮತ್ತೊಬ್ಬ ಸದಸ್ಯರು ಹರಿಜನರಿಗೇ ಪ್ರತ್ಯೇಕ ವಾಗಿ ಒಂದು ಇಲಾಖೆ ಇರಬೇಕು ಎಂದು ಹೇಳಿದರು. ಈಗ ಹರಿಜನ–ಗಿರಿಜನ ಬೇರೆ ಎಂಬ ಭಾವನೆ ಸಮಾಜದಲ್ಲಿ ಹೋಗಬೇಕು ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದಕ್ಕೋಸ್ಕರ ಎಲ್ಲಾ ಹರಿಜನರ ವಿದ್ಯಾರ್ಥಿ ನಿಲಯಗಳನ್ನು ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನಾಗಿ ಪರಿವರ್ತನೆ ಮಾಡಿದ್ದೇವೆ. ಆದ್ದರಿಂದ ಹರಿಜನರು ಎನ್ನುವ ಒಂದು ಪ್ರತ್ಯೇಕವಾದ ಮನೋಭಾವ ವನ್ನು ಬಿಡತಕ್ಕದ್ದು ಅವಶ್ಯಕ. ಹರಿಜನರ ಓಣಿ, ಹರಿಜನರ ಕೇರಿ ಹರಿಜನರ ಬಾವಿ ಎನ್ನತಕ್ಕ ಹೆಸರುಗಳು ಹೋಗಬೇಕು. ಹರಿಜನರು ಎನ್ನತಕ್ಕ ಪ್ರತ್ಯೇಕತಾಮನೋಭಾವ ಸಮಾಜದಲ್ಲಿ ಹೋಗಬೇಕಾಗಿರುವುದರಿಂದ ಹರಿಜನರ ಕ್ಷೇಮಕ್ಕಾಗಿ ಪ್ರತ್ಯೇಕ ಇಲಾಖೆ ರಚನೆ ಯಾಗಬೇಕೆಂಬ ಸಲಹೆಯನ್ನು ಒಪ್ಪುವುದಕ್ಕಾಗುವುದಿಲ್ಲ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇರಬೇಕು. ನಮ್ಮ ದೇಶದಲ್ಲಿ ಹರಿಜನ ಗಿರಿಜನರಷ್ಟೇ ಬಡವರು ಅನೇಕರು ಇದ್ದಾರೆ. ಹಳ್ಳಿಗಳಲ್ಲಿ ಶೇಕಡಾ 60 ಜನ ಬಡವರು ಇದ್ದಾರೆ. ಅವರುಗಳನ್ನೆಲ್ಲಾ ಒಂದೇ ಮಟ್ಟದಲ್ಲಿ ಮಾನ್ಯ ಮಾಡಬೇಕು ಎನ್ನತಕ್ಕ ಅವರ ಕೂಗು ಸರ್ಕಾರಕ್ಕೆ ಮುಟ್ಟಿದೆ. ಸಾಮಾಜಿಕ ದೃಷ್ಟಿಯಿಂದ ಕೀಳಾಗಿ ಕಾಣತಕ್ಕದು ಹೋಗಬೇಕು. ಹರಿಜನರು ಎನ್ನುವ ಒಂದು ಮನೋಭಾವನೆ ಹೋಗ ಬೇಕು. ಅವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ಮಾಡಬೇಕಾಗುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಏನೇನು ಸಹಾಯ ಮಾಡಬೇಕೆಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರಿಗೆ ಏನು ಹಕ್ಕು ಬಾಧ್ಯತೆಗಳು ಬೇಕೋ ಅದನ್ನು ಕೊಡತಕ್ಕದ್ದು ಅವಶ್ಯಕ. ಅವರಿಗೆ ಹಾಸ್ಟಲಿಗೆ ಸಹಾಯ ಮಾಡುತ್ತಿದ್ದೇವೆ. ಅದನ್ನು ಮಾಡತಕ್ಕದ್ದು ಅವಶ್ಯಕ. ಮೊದಲು ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ 18 ರೂಪಾಯಿಗಳನ್ನು ಕೊಡುತ್ತಿತ್ತು. ಈಗ ಅದನ್ನು 20 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೇವೆ, ಹರಿಜನರ ವಿಚಾರದಲ್ಲಿ ಅವರನ್ನು ಅತ್ಯಂತ ಸಹಾನುಭೂತಿಯಿಂದ ಸರ್ಕಾರ ನೋಡಿಕೊಳ್ಳುವುದಕ್ಕೆ ಸಿದ್ಧವಾಗಿದೆ. ಶೇಕಡ 15 ಮತ್ತು ಶೇಕಡಾ 3ರ ಪ್ರಕಾರ ಹರಿಜನರಿಗೆ ಸಿಕ್ಕಬೇಕಾದಂತಹ ಸೌಲಭ್ಯಗಳು ಸಿಕ್ಕಲಿಲ್ಲ ಎಂದು ಪ್ರಶ್ನೆಗಳ ಮೂಲಕ ಬರುತ್ತಿದೆ. ಅಂಥಾ ಕೇಸುಗಳು ಯಾವುದಾದರೂ ಇದ್ದರೆ ಅದನ್ನು ತರಿಸಿ ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ.

ಇನ್ನು ಮತ್ತೊಂದು ವಿಚಾರ ಏನೆಂದರೆ, ಕೆಲವು ಮಾನ್ಯ ಸದಸ್ಯರು ಜಡ್ಜಿಗಳಲ್ಲಿ ಲಂಚಕೋರ ತನ ಇದೆ ಎಂದು ಹೇಳಿದರು. ಇದು ಅತ್ಯಂತ ಸತ್ಯಕ್ಕೆ ದೂರವಾದ ಮಾತು, ಹೊಣೆಗೇಡಿತನದ ಮಾತು. ಯಾರೂ ಸರಿಯಾಗಿ ಯೋಚನೆ ಮಾಡದೆ, ಹೇಳುತ್ತಾ ಇರತಕ್ಕ ಮಾತು. ಮೈಸೂರು ದೇಶದಲ್ಲಿರತಕ್ಕ ಜುಡಿಷಿಯರಿ ಬೇರೆ ಯಾವ ದೇಶದಲ್ಲಿರುವುದಕ್ಕಿಂತಲೂ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲ. ಇಲ್ಲಿರತಕ್ಕ ಜಡ್ಜಿಗಳೆಲ್ಲರೂ ಪ್ರಾಮಾಣಿಕರಾಗಿದ್ದಾರೆ. ಇಂಥಾದ್ದರಲ್ಲಿ ಯಾರೋ ಒಬ್ಬರು ಲಂಚ ತೆಗೆದುಕೊಳ್ಳುತ್ತಾರೆ ಎಂದು ಹೇಳಿ ಎಲ್ಲರೂ ನಮ್ಮಲ್ಲಿ ಲಂಚವನ್ನು ತೆಗೆದುಕೊಳ್ಳು ತ್ತಾರೆ ಎಂದು ಹೇಳುವುದು ಸರಿಯಲ್ಲ. ಅದು ಅವರ ಹೊಣೆಗಾರಿಕೆಯ ಮಾತಲ್ಲ. ಶ್ರೀಮಾನ್ ಗಾಂಜಿ ವೀರಪ್ಪನವರು ಹೈಕೋರ್ಟ್ ಜಡ್ಜಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳಿದರು. ಅದನ್ನು ಮಾಡುವುದಕ್ಕಾಗುವುದಿಲ್ಲ. ಈಗ ಇರತಕ್ಕದ್ದೇ ಜಾಸ್ತಿ ಆಯಿತು. ನಾವು ನಮ್ಮ ದೇಶ ದಲ್ಲಿ ಒತ್ತಾಯ ಮಾಡಿ 14 ಜನ ಜಡ್ಜಿಗಳನ್ನು ಮಾಡಿದ್ದೇವೆ. ಇನ್ನು ಜಾಸ್ತಿ ಮಾಡುವುದಕ್ಕಾಗುವು ದಿಲ್ಲ. ಅದರ ಅವಶ್ಯಕತೆ ಇದ್ದರೆ, ಕೋರ್ಟಿನಲ್ಲಿ ಕೇಸುಗಳು ಜಾಸ್ತಿಯಾಗಿ ಅವು ಜಾಗ್ರತೆಯಾಗಿ ತೀರ್ಮಾನ ಆಗುತ್ತಿಲ್ಲ ಎಂದು ಕಂಡು ಬಂದರೆ ಆಗಬಹುದು. ಆಮೇಲೆ ಶ್ರೀಮಾನ್ ಸಿದ್ದಯ್ಯ ಕಾಶಿ ಮಠ್ ಅವರು ಯಾವುದೋ ಒಂದು ಕೋರ್ಟ್ ಬೇಕು ಎಂದು ಕೇಳಿದ್ದಾರೆ. ಹೈಕೋರ್ಟಿನಿಂದ ಆ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಳ್ಳುತ್ತೇವೆ. ಅದು ಅನುಕೂಲ ಇರುವಂತೆ ಕಾಣುತ್ತದೆ, ಹೈಕೋರ್ಟಿನಿಂದ ಅದರ ಬಗ್ಗೆ ಅಂಕಿ ಅಂಶಗಳು ಬಂದ ಮೇಲೆ ಅದನ್ನು ಮಾಡುವುದಕ್ಕೆ ಸಾಧ್ಯವಾಗ ಬಹುದು. ನಾನು ಎಲ್ಲಾ ವಿಚಾರಗಳನ್ನು ಪೂರೈಸಿದ್ದೇನೆ. ಇವೊತ್ತಿನ ಬೇಡಿಕೆಗಳು ಸಭೆಯ ಮುಂದೆ ಇವೆ. ಅವುಗಳಿಗೆ ಈ ಮಾನ್ಯಸಭೆಯವರು ಒಪ್ಪಿಗೆಯನ್ನು ಕೊಡಬೇಕು.

Mr. SPEAKER.—I will put the Demands to the vote of the House. The question is :

"That the respective sums not exceeding the amounts mentioned in the Demands Nos. 10, 29, 30, 45, 46, 27, 9 and 11 moved, be granted to Government to defray the changes which will come in course of payment during the financial year ending with 31st day of March, 1967."

The motion was adopted.

As directed by the Chair, the motion for Demands for Grants adopted by the House are reproduced below ;—

DEMAND No. 9.—STATE LEGISLATURE AND ELECTIONS.

18. Parliament, State/Union Territory Legislature.

"That a sum not exceeding Rs. 64,04,500 be granted to the Government to defray the charges which will come in course of payment during the financial year for the period ending 31st day of March 1967, in respect of 'Parliament State/Union Territory Legislature'."

DEMAND No. 10.—GENERAL ADMINISTRATION.

19. General Administration.

"That a sum not exceeding Rs. 3,60,72,000 be granted to the Government to defray the charges which will come in course of payment during the financial year for the period ending 31st day of March 1967, in respect of 'General Administration'."

DEMAND No. 11.—ADMINISTRATION OF JUSTICE.

21. Administration of Justice.

"That a sum not exceeding Rs. 1,15,56,000 be granted to the Government to defray the charges which will come in course of payment during the financial year for the period ending 31st day of March 1967, in respect of 'Administration of Justice'."

DEMAND No. 27.—MISCELLANEOUS, SOCIAL AND DEVELOPMENTAL ORGANISATIONS.

39. Miscellaneous, Social and Developmental Organisations.

"That a sum not exceeding Rs. 2,95,83,000 be granted to the Government to defry the charges which will come in course of

payment during the financial year for the period ending 31st day of March 1967, in respect of 'Miscellaneous, Social and Developmental Organisations'."

DEMAND No. 29.—IRRIGATION—COMMERCIAL.

43. Irrigation, Navigation, Embankment and Drainage Works (Commercial).

"That a sum not exceeding Rs. 7,49,50,000 be granted to the Government to defray the charges which will come in course of payment during the financial year for the period ending 31st day of March 1967, in respect of 'I.N.E. and D. Works (Commercial)'."

DEMAND No. 30.—IRRIGATION—NON-COMMERCIAL.

44. Irrigatian, Navigation, Embankment and Drainage Works (Non-Commercial).

"That a sum not exceeding Rs. 3,23,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'I.N.E. and D. Works (Non-Commercial)'."

DEMAND No. 45.—CAPITAL OUTLAY ON IRRIGATION.

99. Capital Outlay on Irrigation, Navigation, Embankment and Drainage Works (Commercial).

"That a sum not exceeding Rs. 7,49,60,700 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Irrigation, Navigation, Embankment and Drainage Works (Commercial)'."

DEMAND No. 46.—CAPITAL OUTLAY ON IRRIGATION—NON-COMMERCIAL.

100. Capital Outlay on I.N.E. and D. Works (Non-Commercial).

"That a sum not exceeding Rs. 2,45,72,400 be granted to the Government to defray the charges which will come in course of payment during the financial year for the period ending 31st day of March 1967 in respect of 'Capital Outlay on I.N-E. and D. Works (Non-Commercial)'."

Demand Nos. 17, 37 and 49.—Education, Stationery and Printing and Capital Outlay on other Works.

MR. SPEAKER.—The Education Demand is allotted eight hours, and the Whips have divided eight hours. From where are they going to get eight hours? Is it from the ocean or the sky, I do not know. There are four hours to-morrow and 1½ hours to-day.

The Hon'ble Minister for Education will kindly move the Demands.

SRI S. R. KANTHI (Minister for Education).—Sir, on the recommendation of the Governor of Mysore, I beg to move :

"That a sum not exceeding Rs. 29,75,40,400 be granted to the Government to defray the charges which will come in course of payment during the financial year for the period ending 31st day of March 1967, in respect of 'Education'."

"That a sum not exceeding Rs. 93,51,000 be granted to the Government to defray the charges which will come in course of payment during the financial year for the period ending 31st day of March 1967 in respect of 'Stationery and Printing'."

"That a sum not exceeding Rs. 12,00,000 be granted to the Government to defray the charges which will come in course of payment during the financial year for the period ending 31st day of March 1967 in respect of 'Capital Outlay on Other Works'."

MR. SPEAKER.—Motion moved :

"That on the recommendation of the Governor of Mysore a sum not exceeding Rs. 29,75,40,400 be granted to the Government to defray the charges which will come in course of payment during the financial year for the period ending 31st day of March 1967 in respect of 'Education'."

"That on the recommendation of the Governor of Mysore a sum not exceeding Rs. 93,51,000 be granted to the Government to defray the charges which will come in course of payment during the financial year for the period ending 31st day of March 1967 in respect of 'Stationery and Printing'."

"That on the recommendation of the Governor of Mysore a sum not exceeding Rs. 12,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Other Works'."

All the above Demand Nos. 17, 37 and 49 are befor the House.

† ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರು ಈ ಸಭೆಯ ಮುಂದೆ ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಇಟ್ಟಿರತಕ್ಕ ಬೇಡಿಕೆಗಳೆಲ್ಲವನ್ನೂ ನೋಡಿದರೆ ಬಹುಶಃ ನಮ್ಮ ಬಡ್ಜೆಟ್ಟಿನಲ್ಲಿ ಎಲ್ಲಕ್ಕಿಂತ ಹೆಚ್ಚಾಗಿರುವ ಮೊತ್ತವನ್ನು

ಹೊಂದಿರತಕ್ಕ ಬೇಡಿಕೆಗಳು ಎಂದರೆ ವಿದ್ಯಾ ಖಾತೆಗೆ ಸಂಬಂಧಪಟ್ಟವು. ಸುಮಾರು ಮೂವತ್ತು ಕೋಟಿಯಷ್ಟು ಹೆಚ್ಚು ಮೊತ್ತದ ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡಿಸಿರತಕ್ಕ ಗೌರವ ನಮ್ಮ ವಿದ್ಯಾ ಖಾತಾ ಸಚಿವರಿಗೆ ಸಲ್ಲತಕ್ಕದ್ದಾಗಿದೆ. ನಾನಾದರೂ ಕೂಡ ವಿದ್ಯಾಭ್ಯಾಸದ ಇಲಾಖೆಯ ಮೇಲೆ ಮಾತನಾಡುವ ಕಾಲದಲ್ಲಿ ಯಾವ ಇಲಾಖೆಗಾಗಿ ನಮ್ಮ ಬಡ್ಜೆಟ್ಟಿನಲ್ಲಿ ಹೆಚ್ಚಿನ ಹಣ ಖರ್ಚು ಮಾಡುತ್ತ ಇದ್ದೇವೋ ಆ ಹಣ ಎಷ್ಟುಮಟ್ಟಿಗೆ ಖರ್ಚಾಗುತ್ತಿದೆ ಮತ್ತು ಆ ಇಲಾಖೆಯಿಂದ ಎಷ್ಟುಮಟ್ಟಿನ ಪೂರ್ಣ ಫಲ ಆ ಹಣದಮೂಲಕ ನಮ್ಮ ದೇಶಕ್ಕೆ ದೊರೆಯುತ್ತಿದೆ ಎನ್ನುವುದರ ಬಗ್ಗೆ ನಾಲ್ಕಾರು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಯಾವ ಒಂದು ವಾತಾವರಣ ನಿರ್ಮಾಣವಾಗಿ ಜನರಲ್ಲಿ ಹಾಗೂ ದೇಶದಲ್ಲಿ ಉದ್ಭವವಾಗಬೇಕೋ ಅಷ್ಟುಮಟ್ಟಿನ ನಿರ್ವಿಕಾರ ಮನೋಭಾವನೆಯಿಂದ ಇಲ್ಲಿನ ಕೆಲಸಗಳು ಆಗಬೇಕು. ಈ ದೇಶದಲ್ಲಿ ಇರುವ ವಿದ್ಯಾಶಾಖೆಯ ವ್ಯವಸ್ಥೆಗಳಿಂದ ಜನತೆಗೆ ಎಷ್ಟು ಮಟ್ಟಿನ ಪ್ರಯೋಜನಗಳು ಸಿಗಬೇಕೋ ಅವು ಸಿಗದೆ ಎಲ್ಲ ಒಂದು ಗೊಂದಲಮಯವಾದ ರೀತಿಯಲ್ಲಿ ಈ ವಿದ್ಯಾ ಇಲಾಖೆಯಲ್ಲಿ ಅಲ್ಲೋಲಕಲ್ಲೋಲವಾಗುವಂತಹ ಪರಿಸ್ಥಿತಿಗಳೇ ಉದ್ಭವವಾಗಿವೆ. ದೇಶದಲ್ಲಿ ವಿದ್ಯಾಭ್ಯಾಸ ಪಡೆಯಲು ಯಾವ ಒಂದು ವ್ಯಕ್ತಿ ಸುಗಮವಾಗಿ ಓದಬೇಕೆಂದು ಬರುತ್ತಾನೋ ಅಂತಹವನಿಗೆ ಸರಿಯಾದ ಮಟ್ಟದಲ್ಲಿ ಪ್ರೋತ್ಸಾಹಗಳು ಸಿಗುತ್ತಿಲ್ಲ ಎನ್ನತಕ್ಕದ್ದನ್ನು ನಾನು ಈ ಸಭೆಯ ಮುಂದೆ ಹೇಳಲಿಚ್ಛಿಸುತ್ತೇನೆ. ವಿದ್ಯಾಭ್ಯಾಸ ನಿರಾತಂಕವಾಗಿ ಬೆಳೆಯುವಂತೆ ಮಾಡಬೇಕಾದರೆ ಪ್ರೈಮರಿ ಎಜುಕೇಷನ್ನು, ಸೆಕೆಂಡರಿ ಎಜುಕೇಷನ್ನು ದಾಟಿ ವಿಶ್ವವಿದ್ಯಾನಿಲಯಕ್ಕೆ ಬರುವವರಿಗೆ ವಿದ್ಯಾಭ್ಯಾಸದಲ್ಲಿ ಒಂದು ರೀತಿಯಾದ ನೀತಿ ಇರಬೇಕಾಗಿದೆ. ಇವೊತ್ತು ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಕ್ರಮದಲ್ಲಿ ಒಂದೊಂದು ಸರಕಾರ ಬಂದಾಗ ಒಂದೊಂದು ನೀತಿ. ಒಬ್ಬೊಬ್ಬರು ವಿದ್ಯಾ ಖಾತೆಯ ಸಚಿವರಾಗಿ ಬಂದಾಗಲೂ ಒಂದೊಂದು ತರಹದ ನೀತಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಬರುವುದರಿಂದಾಗಿ ವಿದ್ಯಾಭ್ಯಾಸದ ಸ್ವರೂಪವೇ ಬದಲಾಗಿ ಅದು ಕುಂಠಿತವಾಗಿ ನಡೆಯುತ್ತಿದೆ. ಯಾರಾದರೂ ಒಬ್ಬ ಪ್ರೈಮರಿ ಸ್ಕೂಲಿಗೆ ಸೇರಿದಾಗ ಅವನು ವಿಶ್ವವಿದ್ಯಾನಿಲಯದ ಪದವೀಧರನಾಗುವವರೆಗೆ ಏನು ಗುರಿ ಮಾಡಿಕೊಂಡಿರುತ್ತಾನೋ ಆ ಗುರಿಯನ್ನು ಮುಟ್ಟುವ ವ್ಯವಸ್ಥೆ ಡಿಗ್ರಿ ಪಡೆಯಲು ಈಗ ಆಗುತ್ತಿರುವ ಬದಲಾವಣೆಗಳಿಂದಾಗಿ ಅವನಿಗೆ ಒಳ್ಳೆಯ ವಿದ್ಯಾಭ್ಯಾಸ ಪಡೆಯಲು ಆಗುತ್ತಿಲ್ಲ. ವಿದ್ಯಾಭ್ಯಾಸಕ್ಕಾಗಿ ಮೊದಲು ಒಂದು ಸಸಿ ಇಟ್ಟು ಅದು ಮರವಾಗುವುದರೊಳಗಾಗಿ ಗಿಡದ ಬೇರನ್ನು ಮಧ್ಯೆ ಮಧ್ಯೆ ಕಿತ್ತು ಪುನಃ ನೆಡುವ ಸಸಿಯಂತೆ ಮಾಡಿದರೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕು. ಇದರಿಂದಾಗಿ ವಿದ್ಯಾಭ್ಯಾಸದ ನೀತಿಗಳು ಬಹಳ ತೊಂದರೆಗೆ ಒಳಪಟ್ಟು ಇಲ್ಲದ ಗೊಂದಲದ ಪರಿಸ್ಥಿತಿಗಳು ಇಲ್ಲಿ ಉಂಟಾಗಿವೆ.

ಮೊದಲನೆಯದಾಗಿ ಬಡ್ಜೆಟ್ಟಿನಲ್ಲಿ ವಿಶ್ವವಿದ್ಯಾನಿಲಯಗಳಿಗಾಗಿ ಹಣವನ್ನು ಕೊಟ್ಟಿರತಕ್ಕದ್ದನ್ನು ಸೂಚನೆ ಮಾಡಿದ್ದಾರೆ. ವಿಶ್ವವಿದ್ಯಾನಿಲಯಗಳ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಾನು ಸಭೆಯ ಮುಂದೆ ತರಬಯಸುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ. ಇವುಗಳಲ್ಲಿ ಮೂರು ವಿಶ್ವವಿದ್ಯಾನಿಲಯಗಳು ನಮ್ಮ ಸರಕಾರದ ಹತೋಟಿಗೊಳಪಟ್ಟಿದೆ. ಇನ್ನೊಂದು ಅಗ್ರಿಕಲ್ಚರಲ್ ಯುನಿವರ್ಸಿಟಿ.

[MR. DEPUTY SPEAKER in the Chair]

ನಮ್ಮಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಬೆಂಗಳೂರು ಯೂನಿವರ್ಸಿಟಿ ಹಾಗೂ ಧಾರವಾಡದಲ್ಲಿರುವ ಕರ್ಣಾಟಕ ವಿಶ್ವವಿದ್ಯಾನಿಲಯ ಇವುಗಳಮೇಲೆ ಸರ್ಕಾರಕ್ಕೆ ಹತೋಟಿಇದೆ. ವಿಶ್ವವಿದ್ಯಾನಿಲಯಗಳು ಸಾಕಷ್ಟು ಪ್ರತಿಭಾಯುತವಾಗಿ ಬೆಳೆಯಬೇಕಾಗಿದ್ದರೆ ಅವುಗಳು ಸ್ವಯಮಾಳಿಡತಪೂರ್ಣವಾಗಿ ನಡೆಯಬೇಕಾಗಿದೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ಕಾರ್ಯಕ್ರಮದಲ್ಲಿ ತಾವು ಏನೇ ಬದಲಾವಣೆ ಮಾಡಲಿ ಅದಕ್ಕೆ ಸ್ವಯಮಾಡಳಿತವನ್ನು ಅಲ್ಲಿ ಜಾರಿಗೆ ತರಬೇಕಾಗಿದೆ. ಈಗಿರುವ ಮೂರು ವಿಶ್ವವಿದ್ಯಾನಿಲಯಗಳಲ್ಲೂ ಒಂದೊಂದು ವಿಶ್ವವಿದ್ಯಾನಿಲಯದ ವ್ಯವಸ್ಥೆಯೂ ಕೂಡ ಅದರ ಕಾರ್ಯಕ್ರಮಗಳು ಬೇರೆ ಬೇರೆಯಾಗಿವೆ. ಒಂದೊಂದರ ಕಾನ್‌ಸ್ಟಿಟ್ಯೂಷನ್ನೇ ಬೇರೆ ಬೇರೆಯಾಗಿವೆ. ಕರ್ಣಾಟಕ ವಿಶ್ವವಿದ್ಯಾನಿಲಯದ ಕಾನ್‌ಸ್ಟಿಟ್ಯೂಷನ್ನೇ ಬೇರೆ, ಮೈಸೂರು ವಿಶ್ವವಿದ್ಯಾನಿಲಯದ ಕಾನ್‌ಸ್ಟಿಟ್ಯೂಷನ್ನೇ ಬೇರೆ, ಬೆಂಗಳೂರು ಯೂನಿವರ್ಸಿಟಿಯ ಕಾನ್‌ಸ್ಟಿಟ್ಯೂಷನ್ನೇ ಬೇರೆಯಾಗಿದೆ. ಹೀಗೆ ನಮ್ಮಲ್ಲಿರುವ ಮೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಮೂರು ವಿಧವಾದ ಮುಖಗಳಿವೆ. ಎಲ್ಲದರಲ್ಲಿಯೂ ಏಕಮುಖವಾದ ನೀತಿ ಇಲ್ಲದೇ ಇರುವುದರಿಂದ ನಮ್ಮ ವಿಶ್ವವಿದ್ಯಾನಿಲಯಗಳ ಪ್ರಗತಿಗೆ ಅಡಚಣೆಗಳುಂಟಾಗುತ್ತಿವೆ. ಇದರಿಂದಾಗಿ ವಿಶ್ವವಿದ್ಯಾನಿಲಯಗಳ ಮಟ್ಟ ಇಳಿಮುಖ

(ಶ್ರೀ ಎಸ್. ಶಿವಪ್ಪ)

ವಾಗುತ್ತ ಇದೆ. ಮೈಸೂರು ವಿಶ್ವವಿದ್ಯಾನಿಲಯದ ಸಿಲೆಬಸೇ ಒಂದು ರೀತಿ, ಕರ್ಣಾಟಕ ವಿಶ್ವವಿದ್ಯಾನಿಲಯದ ಸಿಲೆಬಸೇ ಒಂದು ರೀತಿ ಮತ್ತು ಬೆಂಗಳೂರು ಯೂನಿವರ್ಸಿಟಿಯಲ್ಲಿರುವ ಸಿಲೆಬಸ್ ಒಂದು ರೀತಿಯದಾಗಿದೆ. ಇದೇ ರೀತಿಯಾಗಿ ಈಗಲೂ ಮುಂದುವರಿಯುತ್ತಿದೆ. ಒಂದು ಯೂನಿವರ್ಸಿಟಿಗೂ ಇನ್ನೊಂದು ಯೂನಿವರ್ಸಿಟಿಗೂ ರಿಲೇಷನ್‌ಷಿಪ್ಪು ಎನ್ನುವುದನ್ನು ಸುಗಮವಾಗಿ ಮಾಡುವುದೊಳ್ಳೆಯದು. ಬೇರೆ ಪ್ರಾಂತಗಳಲ್ಲಿ ಇದರಂತೆ ಮಾಡಿದ್ದಾರೆ. ಇದುವರೆಗೂ ನಮ್ಮ ಸರಕಾರದವರು ಏತಕ್ಕಾಗಿ ಇದನ್ನು ಕಾರ್ಯಗತ ಮಾಡಲಿಲ್ಲ ಎಂದು ನಾನು ಇಲ್ಲಿ ಕೇಳಬೇಕಾಗಿದೆ.

ವಿಶ್ವವಿದ್ಯಾನಿಲಯಗಳಿಗೆ ತಾವು ಹಣ ಕೊಟ್ಟಿರುವ ರೀತಿ ನೋಡಿದರೆ ಅದು ಸಾಲದು. ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಕೊಟ್ಟು ಅದರ ಆಡಳಿತ ಚೆನ್ನಾಗಿ ನಡೆಯುವಂತೆ ಸಹಾಯ ಮಾಡಬೇಕು. ಒಂದು ವಿಷಯದಲ್ಲಿ ನಾನು ಈ ಸರಕಾರವನ್ನು ಅಭಿನಂದನೆ ಮಾಡಬೇಕಾಗಿ ಬಂದಿದೆ. ಅದು ನಮ್ಮ ಮೈಸೂರು ವಿಶ್ವವಿದ್ಯಾನಿಲಯದವರು ಗೋಲ್ಡನ್ ಜೂಬಿಲಿ ನಡೆಸುವುದಕ್ಕಾಗಿ ಸುಮಾರು 25 ಲಕ್ಷದಷ್ಟು ಹಣವನ್ನು ಇದರಲ್ಲಿ ಒದಗಿಸಿರುವುದು ಬಹಳ ಸ್ತುತ್ಯವಾದ ಕಾರ್ಯ. ಆದರೆ ಇದಕ್ಕೆ ಇನ್ನೂ ಹೆಚ್ಚು ಹಣ ಕೊಟ್ಟಿದ್ದರೂ ಸರಿಯಾಗಿರುತ್ತಿತ್ತು. ಏಕೆಂದರೆ, ಮೈಸೂರು ವಿಶ್ವವಿದ್ಯಾನಿಲಯದವರು ಸುಮಾರು 4-5 ಕೋಟಿಯಷ್ಟು ಹಣವನ್ನು ರಿಸರ್ವ್ ಫಂಡಿನಲ್ಲಿಟ್ಟು ಅವರ ಕೆಲಸಗಳನ್ನು ಇನ್ನೂ ಚೆನ್ನಾಗಿ ಮಾಡಬೇಕೆಂದಿದ್ದಾರೆ. ಈಗ ಇದಕ್ಕಾಗಿ ತಾವಿಲ್ಲಿ 25 ಲಕ್ಷದಷ್ಟು ಹಣವನ್ನು ಕೊಟ್ಟಿರುವುದು ಸರಿಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯ ಹಿಂದಿನಿಂದ ಯಾವ ರೀತಿಯಾದ ಗೌರವವನ್ನು ಕಾಪಾಡಿಕೊಂಡು ಬರುತ್ತಿದೆಯೋ ಅದಕ್ಕೆ ಗೌರವ ತರುವಂತಹ ಕೆಲಸ ಇದು. ಇದನ್ನು ಮಾಡಬೇಕಾದುದು ಅವಶ್ಯಕ. ಇದೇ ರೀತಿಯಲ್ಲಿ ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳಿಗೆ ಬ್ಲಾಕ್ ಗ್ರ್ಯಾಂಟುಗಳನ್ನು ಕೊಡುವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬ್ಲಾಕ್ ಗ್ರ್ಯಾಂಟನ್ನು ಕೊಡುವಾಗ ಒಂದು ದೊಡ್ಡ ಕೊರತೆಯನ್ನು ತಾವು ಮಾಡಿದ್ದೀರಿ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಈ ಸಾರಿ 29 ಲಕ್ಷ ರೂಪಾಯಿಗಳಷ್ಟು ಬ್ಲಾಕ್ ಗ್ರ್ಯಾಂಟು ಎಂದು ತಮ್ಮ ಬಡ್ಜೆಟ್ಟಿನಲ್ಲಿ ತೋರಿಸಿದ್ದೀರಿ. ನಮ್ಮ ಹಣಕಾಸಿನ ಸಚಿವರು ಇನ್ನೂ ಮುಂದೆ ಹೋಗಿ ಅವರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ ಯೂನಿವರ್ಸಿಟಿಗಳವರೂ ನಾವೂ ಕೂಡಿ ಪ್ರಯತ್ನಮಾಡಿ ಯೂನಿವರ್ಸಿಟಿ ಗ್ರ್ಯಾಂಟು ಕಮಿಷನ್ನಿನವರು ಕೊಡುವ ಗ್ರ್ಯಾಂಟು ನಿಲ್ಲುವ ಸಂಭವವಿದೆ. ಮುಂದೆ ಇದನ್ನು ಪರಿವರ್ತನೆಮಾಡುತ್ತೇನೆ ಎಂದು ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಡ್ಜೆಟ್ಟಿಗಾಗಿ ನಮ್ಮ ಹಣಕಾಸಿನ ಮಂತ್ರಿಗಳು ಸುಮಾರು 46 ಲಕ್ಷದಷ್ಟು ಬ್ಲಾಕು ಗ್ರ್ಯಾಂಟು ಎಂದು ಅದಕ್ಕೆ ತಕ್ಕ ಅಂದಾಜುಗಳನ್ನು ತಯಾರು ಮಾಡಿದ್ದಾರೆ. ಇಲ್ಲಿ ಅಂದಾಜಾಗಿ ಇರತಕ್ಕದ್ದು ಸುಮಾರು 29 ಲಕ್ಷ ಬ್ಲಾಕು ಗ್ರ್ಯಾಂಟು ಎಂದು ಮಾತ್ರ ಇದೆ. ಇದನ್ನು ಪುನರ್ವಿಮರ್ಶೆ ಮಾಡದೆ ಹೋದರೆ ಮೈಸೂರು ವಿಶ್ವವಿದ್ಯಾನಿಲಯದವರು ಅವರು ಮಾಡುವ ಖರ್ಚುಗಳನ್ನು ಕುಂಠಿತಗೊಳಿಸಬೇಕಾಗಿ ಬರುತ್ತದೆ. ಆದುದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಇಲ್ಲಿ ಏನು ಬ್ಲಾಕು ಗ್ರ್ಯಾಂಟು ಎಂದು ಸೇರಿಸಿದ್ದಾರೋ ಅದರಂತೆ ಮಾಡಲು ಈಗ ಸಾಧ್ಯವಿಲ್ಲ. ಈಗ ಅವರ ಕೆಲಸಕಾರ್ಯಗಳು ಬಹಳ ಜಾಸ್ತಿಯಾಗಿವೆ. ಅನೇಕ ಹೊಸ ಕಾಲೇಜುಗಳು ಇವರ ಆಡಳಿತಕ್ಕೆ ಬಂದಿವೆ. ಯೂನಿವರ್ಸಿಟಿ ಗ್ರ್ಯಾಂಟು ಕಮಿಷನ್ನಿನವರು ಏನು ಗ್ರ್ಯಾಂಟುಗಳನ್ನು ಕೊಟ್ಟಿದ್ದಾರೋ ಅವರ ಆಡಿಟೆಡ್ ಅಕೌಂಟ್ಸು ಹಾಗೂ ಎಕ್ಸ್‌ಪೆಂಡಿಚರುಗಳು ಏನು ಎನ್ನುವುದನ್ನು ಸರಕಾರದವರು ನೋಡಿಕೊಂಡು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೊಡುವುದು ಮುಖ್ಯ. ಇದನ್ನೆಲ್ಲಾ ಸರಿಮಾಡಿಕೊಂಡು ಹೋದರೆ ಆಗ ಯೂನಿವರ್ಸಿಟಿಗಳವರು ಅವರ ಸಂಬಳ ಸಾರಿಗೆಗಳನ್ನು ಮತ್ತು ಇತರ ಖರ್ಚುಗಳನ್ನು ಯೋಗ್ಯ ರೀತಿಯಿಂದ ಮಾಡಿಕೊಂಡು ಕೆಲಸ ಮಾಡಿಕೊಂಡು ಹೋಗುವುದು ಸಾಧ್ಯ. ನಮ್ಮ ಮೈಸೂರು ವಿದ್ಯಾ ಇಲಾಖೆಯವರು ಇಲ್ಲಿರುವ ಬಡ್ಜೆಟ್ಟಿನಲ್ಲಿರುವಂತೆ ವಿಶ್ವವಿದ್ಯಾನಿಲಯಗಳಿಗಾಗಿ 46 ಲಕ್ಷದಷ್ಟು ಬ್ಲಾಕು ಗ್ರ್ಯಾಂಟು ಎಂದು ಹೇಳಿರುವುದನ್ನು ಪುನರ್ವಿಮರ್ಶೆ ಮಾಡಿ ಯೂನಿವರ್ಸಿಟಿಗಳಿಗೆ ಸರಿಯಾದ ರೀತಿಯಲ್ಲಿ ಸಹಾಯ ಮಾಡುವುದು ಬಹಳ ಮುಖ್ಯ ಎಂದು ಇಲ್ಲಿ ಹೇಳಬಯಸುತ್ತೇನೆ.

ಯೂನಿವರ್ಸಿಟಿಗಳ ಬಗ್ಗೆ ಮಾತನಾಡತಕ್ಕ ಸಮಯದಲ್ಲಿ ವಿಶ್ವವಿದ್ಯಾನಿಲಯಗಳ ವಿದ್ಯಾಭ್ಯಾಸ ಕ್ರಮ ಮತ್ತು ಅಲ್ಲಿರತಕ್ಕ ಆಡಳಿತ ವರ್ಗದಲ್ಲಿ ಆಗಬೇಕಾದ ಬದಲಾವಣೆಗಳ ವಿಚಾರವಾಗಿ ಕೆಲವು ವಿಷಯಗಳನ್ನು ಈ ಸಭೆಯಲ್ಲಿ ಹೇಳಬೇಕಾಗಿದೆ. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ ಈ ಕಾಲೇಜು ವಿದ್ಯಾಭ್ಯಾಸದ ಫೀಸಿನ ಭಾರ ಬಹಳ ಹೆಚ್ಚಾಗಿದೆ. ಒಂದೇರೀತಿಯ ಫೀಜು ದೇಶದಲ್ಲಿ ಇಲ್ಲ. ಜನರಲ್ ಎಜ್ಯುಕೇಷನ್ ಆರ್ಟ್ಸ್ ಕಾಲೇಜಿನಲ್ಲಿ ಫೀಸಿನ ವ್ಯತ್ಯಾಸ ಇದೆ. ಅದಕ್ಕಿಂತ

ಹೆಚ್ಚಾಗಿ ಮೆಡಿಕಲ್ ಮತ್ತು ಇಂಜನಿಯರಿಂಗ್ ಎಜ್ಯುಕೇಷನ್‌ನಲ್ಲಿ ಬಹಳ ದೊಡ್ಡ ವ್ಯತ್ಯಾಸ ಇದೆ. ಇಂಜನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾಭ್ಯಾಸ ಕೊಡತಕ್ಕ ಸರ್ಕಾರಿ ಕಾಲೇಜುಗಳಲ್ಲಿ ವರ್ಷಕ್ಕೆ 400 ರೂಪಾಯಿ ಫೀಸು ಇದೆ, ಪ್ರೈವೇಟ್ ಕಾಲೇಜುಗಳಲ್ಲಿ ಸಾವಿರದ ಐನೂರು ರೂಪಾಯಿ ಇದೆ. ಪ್ರೈವೇಟ್ ಕಾಲೇಜುಗಳಲ್ಲಿ ಲಾಭ ನಷ್ಟ ಇಲ್ಲದ ರೀತಿಯಲ್ಲಿ ಮಕ್ಕಳಿಂದ ವಿದ್ಯಾ ಶುಲ್ಕ ವಸೂಲು ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಅರ್ಥ ಇದೆ. ಇಂಜನಿಯರಿಂಗ್ ಕಾಲೇಜು ಆಗಲಿ ಅಥವಾ ಮೆಡಿಕಲ್ ಕಾಲೇಜು ಆಗಲಿ ಇವತ್ತಿನ ದಿವಸ ಕಾಲೇಜನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿರತಕ್ಕ ಖಾಸಗಿ ಸಂಸ್ಥೆ ಲಾಭ ನಷ್ಟದ ಮಿತಿಯನ್ನು ಇಟ್ಟುಕೊಂಡು ಕಾಲೇಜಿನ ಖರ್ಚು ಏನಿದೆ ಅದನ್ನು ಸರ್ಕಾರದವರು ಕೊಡುವುದರಲ್ಲಿ ಕಳೆದು ಉಳಿದಿದ್ದದ್ದು ವಿದ್ಯಾರ್ಥಿಗಳಿಂದ ವಸೂಲು ಮಾಡುವಾಗ ಆ ರೀತಿ ಯಾರು ಮಾಡಿದ್ದಾರೆ ಎಂದು ಕೇಳುತ್ತಾ ಇದ್ದೇನೆ ! ಯಾರೂ ಕೂಡ ಆ ರೀತಿ ಮಾಡುತ್ತಾ ಇಲ್ಲ ಒಂದಕ್ಕೆ ಎರಡು ಪಟ್ಟು ಮೂರು ಪಟ್ಟು ವಸೂಲು ಮಾಡುತ್ತಾರೆ. ಇದು ದೇಶದಲ್ಲಿ ಇರತಕ್ಕ ದೊಡ್ಡ ಕೊರತೆ. ಹುಡುಗರನ್ನು ಮೆಡಿಕಲ್ ಕಾಲೇಜಿಗೆ ಆಗಲಿ, ಇಂಜಿನಿಯರಿಂಗ್ ಕಾಲೇಜಿಗೆ ಆಗಲಿ ಸೇರಿಸಬೇಕಾದರೆ ಕ್ಯಾಪಿಟೇಷನ್ ಫೀಜನ್ನು ತೆಗೆದುಕೊಳ್ಳುತ್ತಾರೆ. ಕೆಲವು ಕಡೆ ಮೂರು ಸಾವಿರದಿಂದ ಐದು ಸಾವಿರದವರೆಗೊ ಇಂಜನಿಯರಿಂಗ್ ಕಾಲೇಜಿಗೆ ತೆಗೆದುಕೊಳ್ಳುತ್ತಾರೆ, ಮೆಡಿಕಲ್ ಕಾಲೇಜಿನಲ್ಲಿ ಐದು ಸಾವಿರದಿಂದ 7—8 ಸಾವಿರದವರೆಗೂ ವಸೂಲು ಮಾಡುತ್ತಾ ಇದ್ದಾರೆ. ಅವರು ಹೇಳತಕ್ಕ ವಾದ ಒಂದೇ. ನಾವು ನಡೆಸತಕ್ಕ ಕಾಲೇಜುಗಳಿಗೆ ಸರ್ಕಾರದವರು ಯಾವ ಸಹಾಯ ದ್ರವ್ಯವನ್ನೂ ಕೊಡುತ್ತಿಲ್ಲ. ಆದ್ದರಿಂದ ಅವರು ಮಾಡಬೇಕಾದ ಕೆಲಸವನ್ನು ನಾವು ಮಾಡುತ್ತಾ ಇದ್ದೇವೆ, ಅದರಿಂದಾಗಿ ಹಣವನ್ನು ಪೋಷಕರಿಂದಾಗಿ, ವಿದ್ಯಾರ್ಥಿಗಳಿಂದಾಗಲಿ ವಸೂಲು ಮಾಡುತ್ತೇವೆ ಎಂದು ಹೇಳುತ್ತಾರೆ. ಅವರ ವಶದ ಏನೇ ಇರಲಿ. ಇವತ್ತಿನ ದಿವಸ ಸರ್ಕಾರದವರು ಮುಂದಾಗಿ ಬಂದು ನಮ್ಮ ದೇಶದಲ್ಲಿ ಅಗತ್ಯವಾಗಿ ಬೇಕಾಗಿರತಕ್ಕ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು ವಿದ್ಯಾಭ್ಯಾಸವನ್ನು ಕೊಡತಕ್ಕ ಜವಾಬ್ದಾರಿಯನ್ನು ಅವರೇ ನೇರವಾಗಿ ತೆಗೆದುಕೊಂಡು ವಿದ್ಯಾರ್ಥಿಗಳಮೇಲೆ ಬೀಳತಕ್ಕ ಭಾರವನ್ನು ಕಡಿಮೆ ಮಾಡುವುದು ಬಹಳ ಅಗತ್ಯ ಎಂದು ಒತ್ತಿ ಹೇಳುತ್ತೇನೆ. ಏಕೆಂದರೆ, ಇಜಿನಿಯರಿಂಗ್ ಮತ್ತು ಮೆಡಿಕಲ್ ಈ ಒಂದು ಉತ್ತಮ ವಿದ್ಯಾಭ್ಯಾಸವನ್ನು ಬಡವನು ಹೊಂದುವುದಕ್ಕೆ ಶಕ್ತಿ ಸಾಲದು. ಮನೆ, ಮಠ, ಹೊಲ, ಗದ್ದೆ ಮಾರಿದರೂ ಕೂಡ ಈ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರೈವೇಟ್ ಕಾಲೇಜುಗಳಲ್ಲಿ ಇರತಕ್ಕ ಈ ಕ್ಯಾಪಿಟೇಷನ್ ಫೀಸನ್ನು ತಪ್ಪಿಸುವುದಕ್ಕೆ ಟೆಕ್ನಿಕಲ್ ಎಜ್ಯುಕೇಷನ್ ಎಲ್ಲವನ್ನೂ ಪೂರ್ಣವಾಗಿ ಸರ್ಕಾರದವರೇ ತೆಗೆದುಕೊಂಡರೆ ನಮ್ಮ ಬಡ ವಿದ್ಯಾರ್ಥಿಗಳಿಗೆ ಬಹಳ ಉಪಕಾರವಾಗುತ್ತದೆ ಇಲ್ಲದೇ ಹೋದರೆ ಖಾಸಗಿ ಸಂಸ್ಥೆಗಳವರು ವ್ಯಾಪಾರಿ ಉದ್ಯಮದ ರೀತಿಯಲ್ಲಿ ಲಾಭ ನಷ್ಟ ಲೆಕ್ಕ. ಹಾಕಿ ವಿದ್ಯಾರ್ಥಿಗಳಮೇಲೆ ಹೊರಲಾರದ ಫೀಸನ್ನು ಹಾಕಿ ಅವರನ್ನು ಬಹಳ ಕಷ್ಟಕ್ಕೆ ಗುರಿ ಮಾಡಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಅಂತಹ ಪರಿಸ್ಥಿತಿ ಈಗಲೂ ಇದೆ ಮುಂದೆಯೂ ಕೂಡ ಉಂಟಾಗುತ್ತದೆ. ಇದನ್ನು ನಿವಾರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಚಿವರಿಗೆ ಈ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಯೂನಿವರ್ಸಿಟಿ ಅಟಾನಮಿ ವಿಚಾರದಲ್ಲೂ ಕೂಡ ಮೊದಲೇ ಹೇಳಿದ. ವೈಸ್ ಚಾನ್ಸಲರ್‌ನ್ನು ನೇಮಕ ಮಾಡತಕ್ಕ ವಿಚಾರದಲ್ಲಿ ಒಂದು ವಿಶ್ವವಿದ್ಯಾನಿಲಯಕ್ಕೂ ಇನ್ನೊಂದು ವಿಶ್ವವಿದ್ಯಾನಿಲಯಕ್ಕೂ ವ್ಯತ್ಯಾಸವನ್ನು ಇಟ್ಟುಕೊಂಡು ಬರುತ್ತಾ ಇದ್ದೀರಿ. ಇವತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರದವರೇ ವೈಸ್ ಚಾನ್ಸಲರ್‌ನ್ನು ಚಾನ್ಸಲರ್ ಅವರ ಮುಖಾಂತರ ಯಾರನ್ನು ಬೇಕಾದರೂ ನೇರವಾಗಿ ನೇಮಕ ಮಾಡತಕ್ಕ ಪದ್ಧತಿ ಇದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬೇರೆ ಒಂದು ಪದ್ಧತಿ ಇದೆ. ಸಿಂಡಿಕೇಟ್ ಅವರು ಪ್ಯಾನಲ್ ಮಾಡಿಕೊಂಡು ಅದರಿಂದ ಆರಿಸತಕ್ಕ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಪದ್ಧತಿ ಇದೆ. ಸಿಂಡಿಕೇಟ್ ಅವರು ಒಂದು ಕಮಿಟಿ ಮಾಡುತ್ತಾರೆ. ಕಮಿಟಿಯವರು ಒಂದು ಪ್ಯಾನಲ್ ಆಫ್ ನೇಮ್ಸ್ ಕಳುಹಿಸುತ್ತಾರೆ. ಅದರಿಂದ ಯಾರನ್ನು ಬೇಕಾದರೂ ಆರಿಸಿಕೊಳ್ಳಬಹುದು ಇಂತಹ ಒಂದು ಪದ್ಧತಿ ಇದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇವತ್ತು ತಾವು ನೇರವಾಗಿ ವೈಸ್ ಚಾನ್ಸಲರ್‌ನ್ನು ನೇಮಕ ಮಾಡತಕ್ಕ ಕಾಲದಲ್ಲಿ ಹೊರಗಿನವರನ್ನು ಅಮದು ಮಾಡತಕ್ಕ ಪದ್ಧತಿಯನ್ನು ಬಹಳ ಸಲೀಸಾಗಿ ಮಾಡಿಕೊಂಡು ಬರುತ್ತಾ ಇದ್ದೀರಿ. ಇದರಿಂದಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಲ್ಲಿರತಕ್ಕ ವಿದ್ಯಾ ಪರಿಣತರಿಗೆ ಅಪಮಾನ ಮಾಡಿದಂತಾಗಿದೆ. ಇಂತಹ ಅವಮಾನ ಮಾಡತಕ್ಕ ಕೆಲಸವನ್ನು ಬಹಳ ಸಲೀಸಾಗಿ ನಡೆಸುತ್ತಾ ಇದ್ದೀರಿ. ಇದು ಬಹಳ ಕೆಟ್ಟ ಪದ್ಧತಿ ಇದನ್ನು ನಿಲ್ಲಿಸಬೇಕು. ಕರ್ನಾಟಕ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್ ಶ್ರೀಮಾನ್ ಪಾವಟೆಯವರು ಆ ವಿಶ್ವವಿದ್ಯಾನಿಲಯದ ಅಭ್ಯುದಯಕ್ಕೆ ಬಹಳವಾಗಿ ಕೆಲಸ

(ಶ್ರೀ ಎಸ್. ಶಿವಪ್ಪ)

ಮಾಡಿದ್ದಾರೆ, ಅದೇ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಕೂಡ ಅನೇಕ ಜನ ಉಪಕುಲಪತಿಗಳು ತಮ್ಮದೇ ರೀತಿಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವನ್ನು ಕಟ್ಟುವುದಕ್ಕೆ ಮೈಸೂರಿನ ವಿದ್ಯಾ ಪರಿಣತರು, ತಜ್ಞರನ್ನು ಆರಿಸಿಕೊಂಡು ಬಂದಿದ್ದಾರೆ, ಅವರು ತಮ್ಮ ಸೇವೆಯನ್ನು ಹಿಂದಿನಿಂದ ಮಾಡುತ್ತಾ ಬಂದಿದ್ದಾರೆ. ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರ್ ಕೆ. ವಿ. ಪುಟ್ಟಪ್ಪನವರು ಇದ್ದಾಗ ಸಿಂಡಿಕೇಟ್ ಸದಸ್ಯನಾಗಿದ್ದೆ. ಅವರಲ್ಲಿ ಎಂತಹ ಅವಿಚ್ಛಿನ್ನವಾದ ಭಕ್ತಿ, ವಿಶ್ವಾಸ ಆ ವಿಶ್ವವಿದ್ಯಾನಿಲಯದ ಮೇಲೆ ಇತ್ತು ಎಂಬುದನ್ನು ನೋಡಿದ್ದೇನೆ. ಪುಟ್ಟಪ್ಪನವರಾಗಲಿ, ಯಾವ ವ್ಯಕ್ತಿಯೇ ಆಗಲಿ, ಅವರಿಗೆ ಮೈಸೂರು ದೇಶದ ವಿಶ್ವವಿದ್ಯಾನಿಲಯದಲ್ಲಿ ಅಮಿತವಾಗಿ ಭಕ್ತಿ, ವಿಶ್ವಾಸ, ಪ್ರೇಮ, ಇದ್ದು ನಮ್ಮ ದೇಶ, ನಮ್ಮ ವಿಶ್ವವಿದ್ಯಾನಿಲಯ ಇದನ್ನು ಚೆನ್ನಾಗಿ ಮಾಡಬೇಕು, ಇಲ್ಲವೇ ಹೋದರೆ ನನ್ನ ದೇಶದ ಜನತೆ ಏನಂದಾರು ಎಂಬ ಭಯ, ಭಕ್ತಿ ಮೂಡಿ ಹಿಂದಿನಿಂದ ಅನೇಕ ಜನ ಬಹಳ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅಂತಹ ವ್ಯಕ್ತಿಗಳು ನಮ್ಮ ದೇಶದಲ್ಲಿ ಇದ್ದಾರೆ. ಹೀಗಿದ್ದರೂ ಕೂಡ ಹೊರಗಿನವರನ್ನು ಆಮದು ಮಾಡಿದರೆ ಅವರಿಂದ ಖಂಡಿತವಾಗಿಯೂ ಕೂಡ ಅವರಲ್ಲಿ ಆ ಒಂದು ಭಕ್ತಿ, ಪ್ರೇಮ ಬರುವುದಿಲ್ಲ ಎಂದು ನನಗಾದರೂ ಅನಿಸುತ್ತದೆ. ಏಕೆಂದರೆ ನಾನು ಮೈಸೂರು ದೇಶದವರೇ ಆದಂತಹ ತಜ್ಞರನ್ನು ನೋಡಿದ್ದೇನೆ, ಹೊರಗಿನಿಂದ ಬಂದವರನ್ನೂ ಕೂಡ ನೋಡಿದ್ದೇನೆ. ಮೈಸೂರು ದೇಶದಲ್ಲಿ ಬುದ್ಧಿವಂತರು ಮೇಧಾವಂತರಾದ ಜನ ಇರಬೇಕಾದರೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನು ನೇಮಕ ಮಾಡತಕ್ಕ ಕಾಲದಲ್ಲಾದರೂ ಕೂಡ ನಮ್ಮವರನ್ನೇ ನೇಮಕ ಮಾಡಿ, ಹೊರಗಿನವರನ್ನು ತರಬೇಕೆಂಬ ಧೋರಣೆ ಏನಾದರೂ ಇದ್ದರೆ ಅದನ್ನು ದಯವಿಟ್ಟು ಈ ಘಳಿಗೆಯಲ್ಲೇ ಬಿಟ್ಟು ಬಿಡಿ, ಮೈಸೂರು ದೇಶದಲ್ಲಿರತಕ್ಕ ಒಬ್ಬ ವ್ಯಕ್ತಿಯನ್ನು ಆರಿಸಿ ಅವರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಕ್ಕ ಬುದ್ಧಿ, ಮನಸ್ಸು ತಮಗೆ ಬರಲಿ ಎಂದು ಮತ್ತೊಮ್ಮೆ ಹೇಳುತ್ತೇನೆ. ಏಕೆಂದರೆ ಇವತ್ತು ನಮ್ಮ ದೇಶದಲ್ಲಿ ರೀಜನಲ್ ಲ್ಯಾಂಗ್ವೇಜ್ ಬೆಳೆಯಬೇಕು. ದೇಶ ಭಾಷೆಗೆ ಪ್ರೋತ್ಸಾಹ ಸಿಕ್ಕಬೇಕು. ಅದರ ಮುಖಾಂತರ ವಿದ್ಯಾಭ್ಯಾಸ ಕ್ರಮ ಪರಿವರ್ತನೆಯಾಗಬೇಕಾದರೆ ಕಾಲ ಬಂದಿದೆ. ಎಲ್ಲ ವಿಶ್ವವಿದ್ಯಾನಿಲಯಗಳವರೂ ಕೂಡ ಅವರವರ ಪ್ರಾದೇಶಿಕ ಭಾಷೆಗಳನ್ನು ಬೆಳೆಸಿಕೊಂಡು ಕ್ರಮೇಣ ಮುನ್ನುಗ್ಗುತ್ತಿರುವಾಗ ನಾವು ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ದೇಶ ಭಾಷೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಕನ್ನಡವೇ ದೇಶ ಭಾಷೆಯಾಗಬೇಕೆಂದು ಕಾನೂನು ಮಾಡಿದ್ದೇವೆ. ಕಾನೂನಿನ ರಕ್ಷಣೆ, ಅದಕ್ಕೆ ಪ್ರಾಮುಖ್ಯತೆ ಬರಬೇಕಾದರೆ, ಮರ್ಯಾದೆ ಬರಬೇಕಾಗಿದ್ದರೆ ಆ ಭಾಷೆಯ ಮೇಲೆ ಪ್ರೇಮ ಇರತಕ್ಕ ವ್ಯಕ್ತಿ ಅಲ್ಲಿದ್ದರೆ ಮಾತ್ರ ಸಾಧ್ಯವೇ ಹೊರತು ಹೊರಗಿನವರಿಂದ ಇದು ಸಾಧ್ಯವಾಗುವುದಿಲ್ಲ. ಭಾಷೆಯ ಪ್ರೇಮ ಉದ್ಬುದ್ಧ ಭಾಷಣಗಳನ್ನು ಮಾಡುವುದರಿಂದ ಆಗಲಿ, ಕೇವಲ ಮೆಚ್ಚಿಗೆ ಮಾತಿನಿಂದ ಆಗಲಿ ಬರತಕ್ಕದಲ್ಲ. ಹೃದಯಾಂತರಾಳದಿಂದ ಆ ಪ್ರೇಮ ಉದ್ಭವಿಸಬೇಕು. ಅದು ಮೈಸೂರಿನ ವ್ಯಕಿಗಳಿಂದಲೇ ಸಾಧ್ಯ ಎಂಬುದನ್ನು ಇವತ್ತು ಹೇಳಬೇಕಾಗಿದೆ.

5-00 P.M.

ಇವತ್ತು ನಮ್ಮ ದೇಶದಲ್ಲಿ ಪಿ. ಯು. ಸಿ. ವಿಚಾರ ಬಹಳ ಪ್ರಾಮುಖ್ಯವಾದುದು. ಈ ಕೋರ್ಸನ್ನು ಯಾವ ರೀತಿ ಮಾರ್ಪಾಡು ಮಾಡಬೇಕೆಂಬುದು ದರ್ಜೆಯಾಗುತ್ತಿದೆ. ಈ ದಿವಸ ಸೆಕೆಂಡರಿ ಶಿಕ್ಷಣ ಪಡೆದ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯಕ್ಕೆ ಹೋಗುವಾಗ ಒಂದು ವರ್ಷ ಪಿ. ಯು. ಸಿ. ಶಿಕ್ಷಣ ಎಲ್ಲಾ ಕಡೆಯೂ ಇದೆ. ಪಿ. ಯು. ಸಿ. ಒಂದು ವರ್ಷ ಇರಬೇಕೇ, ಎರಡು ವರ್ಷ ಇರಬೇಕೇ ಎಂಬ ದರ್ಜೆ ಇದೆ. ಬಹುಶಃ ಇಷ್ಟರಲ್ಲೇ ಅದು ತೀರ್ಮಾನವಾಗಬಹುದು, ಪಿ. ಯು. ಸಿ. ಕೋರ್ಸನ್ನು ಎರಡು ವರ್ಷಕ್ಕೆ ಬದಲಾವಣೆ ಮಾಡಲೇಬೇಕು ಎಂದು ವಿಶ್ವವಿದ್ಯಾನಿಲಯದ ಕುಲಪತಿಗಳು, ಉಪಕುಲಪತಿಗಳು ಕಲೆತು ಒಂದು ಸಮ್ಮೇಳನದಲ್ಲಿ ತೀರ್ಮಾನ ಮಾಡಿದ್ದಾರೆ. ಹೀಗೆ ಎರಡು ವರ್ಷ ಮಾಡಿದಾಗ ಒಂದು ವರ್ಷ ಹೈಸ್ಕೂಲಿನಲ್ಲಿ ಹನ್ನೊಂದನೆಯ ಸ್ಟ್ಯಾಂಡರ್ಡಿನಲ್ಲಿ ವಿದ್ಯಾಭ್ಯಾಸ ಮಾಡಿ ಮತ್ತೊಂದು ವರ್ಷ ಪಿ. ಯು. ಸಿ. ಎಂದು ಕಾಲೇಜಿನಲ್ಲಿ ಕಲಿಯಬೇಕು ಎಂದು ಹೇಳುತ್ತಿದ್ದಾರೆ. ಒಂದು ವರ್ಷ ಹೈಸ್ಕೂಲಿನಲ್ಲಿ, ಒಂದು ವರ್ಷ ಕಾಲೇಜಿನಲ್ಲಿ ಹೀಗೆ ದ್ವಂದ್ವನೀತಿ ಅನುಸರಿಸುವುದಕ್ಕೆ ಬದಲಾಗಿ ಪಿ. ಯು. ಸಿ. ಕೋರ್ಸನ್ನೇ ಎರಡು ವರ್ಷ ಮಾಡಿ ಅದಕ್ಕೆ ಜೂನಿಯರ್ ಕಾಲೇಜ್ ಎಂದು ಕರೆದು ಹಿಂದಿದ್ದ ಇಂಟರ್ ಕಾಲೇಜಿನಂತೆ ಮಾಡಿದರೆ

ಒಂದು ಒಳ್ಳೆಯ ವಾತಾವರಣ ಕಲ್ಪಿಸಿದಂತಾಗುತ್ತದೆ. ಕನ್ನಡ ಮಾಧ್ಯಮ ಹೈಸ್ಕೂಲಿನಲ್ಲಿರುವುದರಿಂದ ಕಾಲೇಜಿಗೆ ಬಂದಕೂಡಲೆ ಇಂಗ್ಲಿಷ್ ಮಾಧ್ಯಮ ಬರುವುದರಿಂದ ಕನ್ನಡ ಮಾಧ್ಯಮದಿಂದ ಬಂದವರು ಇಂಗ್ಲಿಷ್ ಮಾಧ್ಯಮಕ್ಕೆ ಹೊಂದಿಕೊಳ್ಳಬೇಕಾದರೆ ಎರಡು ವರ್ಷಬೇಕು. ಇದಕ್ಕಾಗಿ ಜೂನಿಯರ್ ಕಾಲೇಜುಗಳನ್ನು ಸೃಷ್ಟಿಮಾಡಿ ವಿದ್ಯಾ ಸಚಿವರು ಹೊಸ ಮಾರ್ಗ ನಾನು ಹೇಳಿದಂತೆ ಅನುಸರಿಸಲೇಬೇಕು. ಇಂಡಿಯಾದೇಶದಲ್ಲಿ ಒಂದು ಹೊಸ ಪರಿವರ್ತನೆಯಾಗುತ್ತಿದೆ, ಅದಕ್ಕೆ ನಾವು ಅಂಟಿಕೊಳ್ಳದಿದ್ದರೆ ಹಿಂದೆ ಬೀಳುತ್ತೇವೆ. ಅಲ್ಲದೆ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ದೊಡ್ಡ ಲೋಪವಾಗಬಹುದು. ಆದುದರಿಂದ ಈಗಲೇ ಪಿ. ಯು. ಸಿ. ಯನ್ನು ಎರಡು ವರ್ಷಕ್ಕೆ ಮಾರ್ಪಾಡು ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಇನ್ನೂ ಗೊಂದಲವುಂಟಾಗುತ್ತದೆಯೆಂದು ಇದನ್ನು ಹೇಳುತ್ತಿದ್ದೀರೋ ?

ಶ್ರೀ ಎಸ್. ಶಿವಪ್ಪ.—ಪಿ. ಯು. ಸಿ. ಯನ್ನು ಎರಡು ಭಾಗಮಾಡಿ 11ನೆಯ ಸ್ಟ್ಯಾಂಡರ್ಡ್ ಒಂದು ಕಡೆ ಕಾಲೇಜಿನಲ್ಲಿ ಒಂದು ವರ್ಷ ಬೇರೊಂದು ಕಡೆ ಹೀಗೆ ಇದ್ದರೆ ಗೊಂದಲವಾಗುತ್ತದೆ. ಆದುದರಿಂದ ಜೂನಿಯರ್ ಕಾಲೇಜ್ ಮಾಡಿ ಪಿ. ಯು. ಸಿ. ಎರಡು ವರ್ಷ ಮಾಡಿದರೆ ಗೊಂದಲಕ್ಕೆ ಅವಕಾಶವಿರುವುದಿಲ್ಲ. ಈ ದಿವಸ ಕೆಲವರು ಪಿ. ಯು. ಸಿ. ಒಂದು ವರ್ಷ ಓದಿದರೆ ಮತ್ತೆ ಕೆಲವರು 11ನೆಯ ಸ್ಟ್ಯಾಂಡರ್ಡಿನಲ್ಲಿ ಹೈಸ್ಕೂಲಿನಲ್ಲಿ ಓದುತ್ತಿರುತ್ತಾರೆ. ಅವರೆಲ್ಲರೂ ಆದಾದನಂತರ ಕಾಲೇಜಿಗೆ ಒಂದೇ ತರಗತಿಗೆ ಹೋಗುತ್ತಾರೆ. 11ನೆಯ ಸ್ಟ್ಯಾಂಡರ್ಡಿನಲ್ಲಿ ಓದುವವರಲ್ಲೂ ಮತ್ತು ಪಿ. ಯು. ಸಿ. ಯಲ್ಲಿ ಓದುವವರಲ್ಲೂ ಪಾಸಾಗುವವರ ಸಂಖ್ಯೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ. ಕಾಲೇಜುಗಳಲ್ಲಿ ಲೆಕ್ಚರ್ ಕೊಡುವ ಕ್ರಮಕ್ಕೂ ಹೈಸ್ಕೂಲಿನಲ್ಲಿ ಟ್ಯೂಷನ್ ಕೊಡುವುದಕ್ಕೂ ವ್ಯತ್ಯಾಸವಿದೆ. ಸುಮ್ಮನೆ ಪ್ರಶ್ನೆಗಳಿಗೆ ಉತ್ತರ ಬರೆಸುವುದು ಸರಿಯಾದ ಪರೀಕ್ಷೆಯಲ್ಲ. ಮಾನವನ ತಿಳಿವಳಿಕೆ ಮಟ್ಟ ಎಷ್ಟುಮಟ್ಟಿಗೆ ಏರಿದೆ ಎಂಬುದು ಪ್ರಾಮುಖ್ಯವಾದುದು. ಹೈಸ್ಕೂಲಿನಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುತ್ತಾರೆ. ಮುಂದೆ ಎಂಜನಿಯರಿಂಗ್, ಮೆಡಿಕಲ್, ಲಾ ಮುಂತಾದವುಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕೆಂಬುದು ಇತ್ಯರ್ಥವಾಗಬೇಕು. ಪಿ. ಯು. ಸಿ. ಯಲ್ಲಿ ಬಂದ ನಂಬರುಗಳನ್ನು ನೋಡಿ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಆದುದರಿಂದ ಭವಿಷ್ಯವನ್ನು ನಿರ್ಧಾರ ಮಾಡುವ ಪಿ. ಯು. ಸಿ. ಪರೀಕ್ಷೆ ಬಹಳ ಮುಖ್ಯವಾದುದು. ಒಂದು ವರ್ಷ ಪಿ. ಯು. ಸಿ. ಇರುವುದು ಬಹಳ ಅಪಾಯಕರ, ಎರಡು ವರ್ಷಕ್ಕೆ ಅದನ್ನು ಹಚ್ಚಿಸಿದರೆ ವಿದ್ಯಾರ್ಥಿಗಳಿಗೆ ಮುಂದೆ ಯಾವುದನ್ನು ಆರಿಸಿಕೊಂಡು ಮುಂದು ವರೆಯಬೇಕು ಎಂಬುದನ್ನು ನಿರ್ಧರಿಸಲು ಅವಕಾಶವಾಗುತ್ತದೆ. ಒಂದು ವರ್ಷ ಹೆಚ್ಚು ವಿದ್ಯಾಭ್ಯಾಸ ಮಾಡುವುದರಿಂದ ಹೆಚ್ಚಿನ ಜ್ಞಾನ ಸಂಪಾದನೆಯಾಗುತ್ತದೆ, ಇದನ್ನು ನಮ್ಮ ವಿದ್ಯಾ ಸಚಿವರು ಯೋಚನೆ ಮಾಡಬೇಕು ವಿಶ್ವವಿದ್ಯಾನಿಲಯಗಳೊಡನೆ ಚರ್ಚೆಮಾಡಿ ಒಂದು ಸರಿಯಾದ ತೀರ್ಮಾನಕ್ಕೆ ಅವರು ಬಂದರೆ ಒಂದು ದೊಡ್ಡ ಹೆಜ್ಜೆ ಇಟ್ಟಂತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎರಡು ವರ್ಷ ಪಿ. ಯು. ಸಿ. ಮಾಡುವುದಿಲ್ಲ ಎಂದು ವಿದ್ಯಾ ಮಂತ್ರಿಗಳು ಮೊನ್ನೆ ಹೇಳಿಕೆ ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಸ್. ಆರ್. ಕಂಠಿ.—ಶ್ರೀ ಮುಕ್ಕಣ್ಣಪ್ಪನವರು ಹೇಳುವುದು ನಿಜ, ಈ ವಿಚಾರ ಶ್ರೀ ಶಿವಪ್ಪನವರಿಗೂ ಗೊತ್ತಿದೆ, ಇದು ನಾನು ಮಾಡುವ ಕೆಲಸವಲ್ಲ, ಯೂನಿವರ್ಸಿಟಿ ಮಾಡಬೇಕಾದ್ದು, ಅದು ನಿರ್ಧಾರ ಮಾಡಿದಮೇಲೆ ಸರಕಾರ ವಿಚಾರ ಮಾಡಬೇಕಾಗುತ್ತದೆ. ಯೂನಿವರ್ಸಿಟಿಯವರು ಒಪ್ಪುವುದಿಲ್ಲ. ಆದುದರಿಂದ ಹಾಗೆ ಎರಡು ವರ್ಷ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಹೇಳಿದ್ದೇನೆ. ನನ್ನ ಛೇಂಬರಿನಲ್ಲಿ ಯೂನಿವರ್ಸಿಟಿಗಳ ವೈಸ್‌ಛಾನ್ಸಲರುಗಳನ್ನು ಕರೆಸಿ ಕೇಳಿದಾಗ ಒಂದು ರೀತಿಯಲ್ಲಿ ಮಾತನಾಡಿದರು, ಆಗ ಒಪ್ಪಿದಂತೆ ತೋರಿತು, ನಂತರ ಅವರು ಬೇರೆ ಬೇರೆ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ ಸೂಚಿಸಿದ್ದಾರೆ. ಎಜುಕೇಷನ್ ಕಮಿಷನ್ ವರದಿ ಬಂದಮೇಲೆ ಇದನ್ನು ಪರಿಶೀಲಿಸೋಣ.

ಶ್ರೀ ಎಸ್. ಶಿವಪ್ಪ.—ಆಮೇಲೆ ಕಾಲೇಜುಗಳ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಈ ದಿವಸ ಮೈಸೂರು ದೇಶದಲ್ಲಿ ಮೂರು ಬಗೆಯ ಕಾಲೇಜುಗಳಿವೆ, ಕೆಲವು ಕಾಲೇಜುಗಳು ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟಿವೆ, ಇನ್ನು ಕೆಲವು ಸರಕಾರಿ ಆಡಳಿತದಲ್ಲಿವೆ, ಮೂರನೆಯವು ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿವೆ. ಹೀಗೆ ಮೂರು ವಿಧವಾದ ಆಡಳಿತಕ್ಕೊಳಪಟ್ಟಿರುವ ಕಾಲೇಜುಗಳಿವೆ. ಈ ಮೂರರಲ್ಲಿ ಇರುವ ವಿದ್ಯಾಭ್ಯಾಸ ಕ್ರಮ ಯೋಚನೆಮಾಡುವುದಾದರೆ ವಿಶ್ವವಿದ್ಯಾಲಯದ ಆಡಳಿತದಲ್ಲಿರುವ ಕೆಲವು ಕಾಲೇಜುಗಳಲ್ಲಿ ಚೆನ್ನಾಗಿ ನಡೆಯುತ್ತಿದೆ, ಕೆಲವು ಪ್ರೈವೇಟ್ ಕಾಲೇಜುಗಳಲ್ಲಿ ಚೆನ್ನಾಗಿ ಪಾಠ ನಡೆಯುತ್ತಿದೆ, ಕೆಲವಕ್ಕೆ ಹಣಕಾಸಿನ ಕೊರತೆಯಿದ್ದು ಅವು ಕನಿಷ್ಠ ವರ್ಗಕ್ಕೆ

(ಶ್ರೀ ಎಸ್. ಶಿವಪ್ಪ)

ಸೇರಿವೆ. ಸರಕಾರಿ ಕಾಲೇಜುಗಳ ವಿಚಾರ ಹೇಳುವುದಾದರೆ ಅಲ್ಲಿ ರಿಸಲ್ಟಿನ ಸೇಕಡಾವರು ಸಂಖ್ಯೆ ಎಲ್ಲಕ್ಕಿಂತ ಬಹಳ ಕಡಮೆಯಿದೆ. ನಮ್ಮ ಸರಕಾರಿ ಕಾಲೇಜುಗಳ ಕ್ರಮ ಸರಿಯಾಗಿಲ್ಲ, ಆದುದರಿಂದ ಅದನ್ನು ಪ್ರೈವೇಟ್ ಸಂಸ್ಥೆಗಳಿಗೆ ಬೇಕಾದರೆ ವಹಿಸಬಹುದು ಎಂದು ನಮ್ಮ ಸಚಿವರೇ ಹೇಳಿದ್ದಾರೆ. ಸರಕಾರ ನಡೆಸುವ ಕಾಲೇಜುಗಳನ್ನು ಖಾಸಗಿಯವರಿಗೆ ವಹಿಸಬಾರದು, ಈ ದಿವಸ ಖಾಸಗಿ ಕಾಲೇಜುಗಳಲ್ಲಿ ಫೀಜು ಜಾಸ್ತಿ, ವಿದ್ಯಾಭ್ಯಾಸದ ಖರ್ಚು ಹೆಚ್ಚು ಎಂಬ ಕೂಗಿದೆ. ಆದುದರಿಂದ ಸರಕಾರ ಕಾಲೇಜುಗಳನ್ನು ನಡೆಸುವುದು ಕಷ್ಟವಾಗಿರುವಾಗ ಮೈಸೂರು ಯೂನಿವರ್ಸಿಟಿ ಆ ಪ್ರದೇಶದಲ್ಲಿರುವ ಕಾಲೇಜುಗಳನ್ನು, ಬೆಂಗಳೂರು ಯೂನಿವರ್ಸಿಟಿಗೆ ಆ ಪ್ರದೇಶದಲ್ಲಿರುವ ಕಾಲೇಜುಗಳನ್ನು ಮತ್ತು ಕರ್ಣಾಟಕ ಯೂನಿವರ್ಸಿಟಿಗೆ ಆ ಏರಿಯಾದಲ್ಲಿರುವ ಕಾಲೇಜುಗಳನ್ನು ವಹಿಸಿಕೊಡಿ. ಹಾಗೆ ಮಾಡಿ ಆಯಾ ಯೂನಿವರ್ಸಿಟಿಗಳಿಗೆ ಅವುಗಳ ಮೇಲ್ವಿಚಾರಣೆಯನ್ನು ವಹಿಸಿದರೆ ಅದರಿಂದ ಬಹಳ ಒಳ್ಳೆಯ ವಾತಾವರಣ ಉಂಟಾಗಿ ಚೆನ್ನಾಗಿ ನಡೆಯುತ್ತದೆ ಎಂದು ಸಚಿವರಿಗೆ ಸಲಹೆ ಮಾಡುತ್ತೇನೆ. ಡೈರೆಕ್ಟರ್ ಆಫ್ ಕೊಲಜಿಯೇಟ್ ಎಜುಕೇಷನ್ ಬೇಕಾಗಿಲ್ಲ. ಆಯಾ ಏರಿಯಾದಲ್ಲಿರುವ ಕಾಲೇಜುಗಳನ್ನು ಅಲ್ಲಿನ ಯೂನಿವರ್ಸಿಟಿಗಳಿಗೆ ವಹಿಸಿದರೆ ಆಡಳಿತ ಸುಗಮವಾಗಿ ನಡೆಯುತ್ತದೆ ಮತ್ತು ನಿಮಗೆ ಒಂದು ಪ್ರತ್ಯೇಕ ಇಲಾಖೆ ಇಟ್ಟು ನೋಡಿಕೊಳ್ಳುವ ಜವಾಬ್ದಾರಿಯೂ ತಪ್ಪಿ ಅದರಿಂದ ಎಷ್ಟೋ ಕ್ಷೇಮವಾಗುತ್ತದೆ ಎಂದು ತಮಗೆ ಬಹಳ ಒಳ್ಳೆಯ ಸೂಚನೆ ಮಾಡುತ್ತಿದ್ದೇನೆ. ಈ ರೀತಿ ಮಾಡಿದರೆ ಕಾಲೇಜುಗಳಿಗೂ ಒಳ್ಳೆಯದಾಗಿ ಕೆಲಸ ಚೆನ್ನಾಗಿ ನಡೆಯುತ್ತದೆ.

ಇನ್ನು ಸೆಕೆಂಡರಿ ಶಿಕ್ಷಣದ ವಿಚಾರ ತೆಗೆದುಕೊಂಡರೆ ವರ್ಷೇವರ್ಷೆ ಹೈಸ್ಕೂಲುಗಳನ್ನು ಜಾಸ್ತಿ ಮಾಡುತ್ತಿದ್ದೀರಿ, ಸಚಿವರೇ ಹೇಳಿದಹಾಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹೈಸ್ಕೂಲುಗಳನ್ನು ಮಂಜೂರು ಮಾಡಬೇಕೆಂದಿದ್ದೆವೋ ಅದಕ್ಕಿಂತ ನೂರು ಪಟ್ಟು ಜಾಸ್ತಿ ಮಂಜೂರುಮಾಡಲಾಗಿದೆ. ಹಾಗೆಯೇ ವಿದ್ಯಾರ್ಥಿಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಹಳ್ಳಿಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಖರ್ಚನ್ನು ಜಾಸ್ತಿಯಾಗದಂತೆ ನೋಡಿಕೊಳ್ಳಲು ಹಳ್ಳಿಗಳ ಮಧ್ಯೆ ಒಂದೊಂದು ಹೈಸ್ಕೂಲನ್ನು ತೆರೆದಿದ್ದಾರೆ. ಹೈಸ್ಕೂಲುಗಳ ಸಂಖ್ಯೆ ಜಾಸ್ತಿಯಾಗಿದ್ದರೂ ಕೂಡ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಕೆಲವು ತಾಲ್ಲೂಕುಗಳಲ್ಲಿ ಹತ್ತು ಹನ್ನೆರಡು ಹೈಸ್ಕೂಲುಗಳಾಗಿವೆ. ಆದರೆ ಅಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ, ಬೆಂಗಳೂರು ಮೈಸೂರುಗಳಲ್ಲಿಯ ಪ್ರತಿಯೊಂದು ಹೈಸ್ಕೂಲುಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ ಎಂಬುದನ್ನು ನೋಡಬೇಕು, ಬರೀ ಹೈಸ್ಕೂಲುಗಳ ಸಂಖ್ಯೆ ಪ್ರಯೋಜನವಿಲ್ಲ. ವಿದ್ಯಾಭ್ಯಾಸದ ಮಟ್ಟ ನೋಡಬೇಕು. ಕೆಲವು ಕಡೆ ಉಪಾಧ್ಯಾಯರು ಇರುವುದಿಲ್ಲ, ಅವರು ಇದ್ದರೆ ಎಕ್ವಿಪ್‌ಮೆಂಟ್ ಇರುವುದಿಲ್ಲ, ಎಲ್ಲ ಕಡೆ ಟ್ರೇಂಡ್ ಟೀಚರ್ಸ್ ಇದ್ದಾರೆಯೇ ಇಲ್ಲವೇ ಯೋಚನೆ ಮಾಡಬೇಕು. ಕೆಲವು ಹೈಸ್ಕೂಲುಗಳಲ್ಲಿ ಹಿಂದೀ ಟೀಚರ್ ಇಲ್ಲ, ಲೈಬ್ರರಿ ಇರುವುದಿಲ್ಲ. ಬರೀ ಹೆಸರಿಗೆ ಮಾತ್ರ ನೂರಾರು ಹೈಸ್ಕೂಲುಗಳು ಇವೆ. ಆದುದರಿಂದ ವಿದ್ಯಾಭ್ಯಾಸದ ವಿಚಾರದಲ್ಲಿ ಸೆಕೆಂಡರಿ ಎಜುಕೇಷನ್ ಸ್ಟೇಜಿನಲ್ಲಿ ಪ್ರೈಮರಿ ಸ್ಟೇಜಿನಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು. ಮಕ್ಕಳು ಮನೆಯಲ್ಲಿ ಗಲಾಟೆ ಮಾಡುತ್ತಾರೆಂದು ಕೆಲವರು ಮಕ್ಕಳನ್ನು ಸ್ಕೂಲಗೆ ಕಳಿಸುತ್ತಾರೆ. ಈ ರೀತಿ ಸ್ಕೂಲಗೆ ಬರತಕ್ಕ ಮಕ್ಕಳ ಸಂಖ್ಯೆ ಮಾತ್ರ ಜಾಸ್ತಿಯಾಗಿದೆ. ಕೆಲವು ಉಪಾಧ್ಯಾಯರು ಪ್ರೈಮರಿ ಸ್ಕೂಲುಗಳನ್ನು ತಮ್ಮ ಮನಸ್ಸಿಗೆ ಬಂದಾಗ ಸ್ಕೂಲು ಬಾಗಿಲು ತೆರೆಯುತ್ತಾರೆ. ಉಪಾಧ್ಯಾಯರು ಸ್ಕೂಲನಲ್ಲಿ ಇರುವುದಿಲ್ಲ. ಈ ರೀತಿ ಪರಿಸ್ಥಿತಿ ಇರುವ ಕಾರಣ ವಿದ್ಯಾಭ್ಯಾಸ ಕೆಟ್ಟು ಹೋಗಿದೆ. ನನಗೆ ಉಪಾಧ್ಯಾಯರ ಬಗ್ಗೆ ಗೌರವ ಇದೆ. ಆದರೆ ಅವರು ತಮ್ಮ ಕರ್ತವ್ಯ ಸರಿಯಾಗಿ ಮಾಡುತ್ತಾ ಇಲ್ಲ. ಅನೇಕ ಸಾರಿ ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇಂದಿನ ಮಕ್ಕಳು ನಾಳಿನ ಭಾವೀ ಜನಾಂಗದ ಪ್ರಜೆಗಳಾಗುತ್ತಾರೆ. ಆದುದರಿಂದ ಅವರ ವಿದ್ಯಾಭ್ಯಾಸದ ಕಡೆಗೆ ಜಾಗ್ರತೆ ಗಮನ ಕೊಡಬೇಕಾದುದು ಅಗತ್ಯ. ಜ್ಞಾನ ಜ್ಯೋತಿ ಬೆಳಗಬೇಕಾದರೆ ಮೊದಲು ಪ್ರೈಮರಿ ಸ್ಕೂಲು ವಿದ್ಯಾಭ್ಯಾಸದ ಬಗ್ಗೆ ವಿಮರ್ಶೆ ಮಾಡಿ ನೋಡಬೇಕಾಗಿದೆ. ಇನ್ನು ಸ್ಕೂಲು ಕಟ್ಟಡದ ವಿಚಾರ ಹೇಳುವುದಾದರೆ, ಸ್ಕೂಲನ್ನು ದೇವಸ್ಥಾನದಲ್ಲಯೋ ಚಾವಡಿಯಲ್ಲಿಯೋ ನಡೆಸುತ್ತಾರೆ. ಕೆಲವು ಕಡೆ ಗೋಡೆ ಬೀಳುವ ಭಯ ಕೂಡ ಇರುತ್ತದೆ. ಮಳೆ ಬಂದರೆ ಒಳಗೆಲ್ಲಾ ನೀರು ಆಗುತ್ತದೆ. ಆದುದರಿಂದ ಮಕ್ಕಳಮೇಲೆ ಪ್ರಭಾವ ಬೀಳುತ್ತಾ ಇಲ. ಆದರೆ ಕಾನ್ವೆಂಟ್ ಸ್ಕೂಲುಗಳು ಬಹಳ ಪಾಪ್ಯುಲರ್ ಆಗುವುದಕ್ಕೆ ಕಾರಣವೇನೆಂದರೆ ಅವರು ಶ್ರದ್ಧೆಯಿಂದ ಭಕ್ತಿಯಿಂದ ಪಾಠ ಹೇಳುತ್ತಾರೆ. ಇದಲ್ಲದೆ ಆ ಸ್ಕೂಲುಗಳಲ್ಲಿ ಶಿಸ್ತು ಇರುತ್ತದೆ. ಕಾನ್ವೆಂಟ್ ಸ್ಕೂಲುಗಳ ಉಪಾಧ್ಯಾಯರು ಋಷಿಯಂತೆ ಇರುತ್ತಾರೆ. ಅವರು ಈ ವೃತ್ತಿ ಮೂಲಕ ತಪಸ್ಸು ಮಾಡುತ್ತಾರೆ. ಅದೇ ರೀತಿಯಾಗಿ

ನಮ್ಮ ಪ್ರೈಮರಿ ಸ್ಕೂಲು ಮಿಡಲ್ ಸ್ಕೂಲುಗಳ ವಿದ್ಯಾಭ್ಯಾಸದ ಕ್ರಮದಲ್ಲಿ ಇರತಕ್ಕ ಲೋಪ ನಿವಾರಣೆ ಮಾಡಿ ಸುಧಾರಣೆ ಮಾಡಬೇಕು. ಇನ್ನೊಂದು ವಿಚಾರ. ಸ್ಕೂಲುಗಳಲ್ಲಿ ಟ್ರೇಂಡ್ ಟೀಚರ್ಸ್ ಕಡಿಮೆ ಇದ್ದಾರೆ. ಇತ್ತೀಚೆಗೆ ಈ ಕೊರತೆ ನಿವಾರಣೆ ಮಾಡುವುದಕ್ಕಾಗಿ ಅನೇಕ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಪ್ರಾರಂಭ ಮಾಡಿದ್ದೀರಿ. ಇಂದು ಇಪ್ಪತ್ತು ಸಾವಿರ ಉಪಾಧ್ಯಾಯರ ನೇಮಕ ಮಾಡಿದ್ದೀರಿ. ಇದರಲ್ಲಿ ನಾಲ್ಕೈದು ಸಾವಿರ ಉಪಾಧ್ಯಾಯರುಗಳು ಟ್ರೇಂಡ್ ಇದ್ದಾರೋ ಇಲ್ಲವೋ ಅನುಮಾನವಿದೆ. ಈ ಸಂದರ್ಭದಲ್ಲಿ ನಾನು ಒಂದು ಸೂಚನೆ ಮಾಡುತ್ತೇನೆ. ಹತ್ತಾರು ವರ್ಷ ಉಪಾಧ್ಯಾಯರು ಆಗಿರತಕ್ಕವರಿಗೆ ಒಂದು ಕಂಡೆನ್‌ಸ್ಡ್ ಕೋರ್ಸ್ ಮಾಡಿ ಒಂದು ವರ್ಷ ಟ್ರೈನಿಂಗ್ ಕೊಡಿಸಬೇಕು. ಅಂಥವರಿಗೆ ಒಂದು ವರ್ಷದ ಟ್ರೇನಿಂಗ್ ಸಾಕು. ಹೊಸದಾಗಿ ಬರತಕ್ಕವರಿಗೆ ಎರಡು ವರ್ಷದ ಟ್ರೇನಿಂಗ್ ಇರಬೇಕು. ಅಂದರೆ ಶೀಘ್ರವಾಗಿ ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರು ಟ್ರೇಂಡ್ ಆಗುತ್ತಾರೆ. ಈ ಕ್ರಮ ಕೈಗೊಳ್ಳಬೇಕು ಅಂದರೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ವಿದ್ಯಾ ಸಚಿವರಿಗೆ ಹೇಳುತ್ತೇನೆ.

ಇನ್ನೊಂದು ಪ್ರಶ್ನೆ ಇದೆ. ಏಳೆಂಟು ನೂರು ಬಡ ಉಪಾಧ್ಯಾಯರುಗಳು ರಿಟೈರ್ ಆಗಿ ಬಿಟ್ಟಿದ್ದಾರೆ. ಅವರು ರಿಟೈರ್ ಆದಮೇಲೆ 58 ವರ್ಷ ವಯಸ್ಸಿನ ಸರ್ಕಾರದ ಆರ್ಡರ್ ಬಂದಿದೆ. ಏತನ್ಮಧ್ಯೆ ಮೂರು ನಾಲ್ಕು ತಿಂಗಳು ಕಾಲ ಈ ಆರ್ಡರ್ ಜಾರಿಯಲ್ಲಿರಲಿಲ್ಲ. ಆ ಮಧ್ಯ ಕಾಲದಲ್ಲಿ ನಿವೃತ್ತಿ ಮಾಡಿರುವುದು ಸರಿಯಲ್ಲ. ಈ ಸಂಬಂಧದಲ್ಲಿ ಈ ಕೇಸು ಹೈಕೋರ್ಟು, ಸುಪ್ರೀಂ ಕೋರ್ಟು ಗಳಿಗೆ ಹೋಗಿದೆ. ಅವರಿಗೆ ಸೌಲಭ್ಯ ದೊರೆಯಬೇಕು ಇದು ಅಗತ್ಯ. ಅಂಥವರು ಆರೇಳು ನೂರು ಜನ ಇರಬಹುದು. ಕೇವಲ ಹೈಕೋರ್ಟು ಸುಪ್ರೀಂ ಕೋರ್ಟಿಗೆ ಹೋದವರಿಗೆ ಮಾತ್ರ ರಿಯಾಯತಿ ಕೊಡುತ್ತೇವೆ ಸೌಲಭ್ಯ ಕೊಡುತ್ತೇವೆ ಎಂಬ ವಾದ ಸರಿಯಲ್ಲ. ಹೈಕೋರ್ಟು ಸುಪ್ರೀಂ ಕೋರ್ಟಿಗೆ ಹೋಗದೆ ಇದ್ದಂಥ ಎಲ್ಲರಿಗೂ ರಿಯಾಯತಿ ದೊರಕುವ ಏರ್ಪಾಡು ಮಾಡಬೇಕು ಎಂದು ಈ ಮೂಲಕ ಹೇಳುತ್ತೇನೆ.

ಕೊನೆಯದಾಗಿ ವಿದ್ಯಾಭ್ಯಾಸ ಇಲಾಖೆಯ ಮೇಲ್ವಿಚಾರಣೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಸೆಕೆಂಡರಿ ಎಜ್ಯುಕೇಷನ್ನಿನಲ್ಲಿ ಅನೇಕ ಡೈರೆಕ್ಟರ್ಸ್ ಇದ್ದಾರೆ. ಟೆಕ್ನಿಕಲ್, ಎಂಜನಿಯರಿಂಗ್ ಮೆಡಿಕಲ್, ಅಗ್ರಿಕಲ್ಚರಲ್, ಹೀಗೆ ಪ್ರತಿಯೊಂದಕ್ಕೂ ಪ್ರತ್ಯೇಕ ಪ್ರತ್ಯೇಕ ಡೈರೆಕ್ಟರ್ಸ್ ಇದ್ದಾರೆ. ಇದರಲ್ಲಿ ಕಂಪಾರ್ಟ್‌ಮೆಂಟಾಲಿಸಂ ಬೆಳೆದುಕೊಂಡು ಬಂದಿದೆ. ಇಷ್ಟು ಜನ ಹೆಡ್ಸ್ ಏತಕ್ಕೆ ಬೇಕು? ವಿಶ್ವವಿದ್ಯಾನಿಲಯವು ವಿದ್ಯಾಭ್ಯಾಸ ಕ್ರಮವನ್ನು ಯಾವ ರೀತಿ ನೋಡಿಕೊಳ್ಳುತ್ತದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಪ್ರತಿಯೊಂದಕ್ಕೂ ಪ್ರತ್ಯೇಕ ಡೈರೆಕ್ಟರೇಟು ಏತಕ್ಕೆ ಬೇಕು? ಇದರಿಂದ ಗೊಂದಲವಾಗುತ್ತದೆ. ಅಕಾಡಮಿಕ್ ಎಜುಕೇಷನ್ ನೋಡಿಕೊಳ್ಳುವುದು ವಿಶ್ವವಿದ್ಯಾನಿಲಯದ ಕೆಲಸವಾದರೆ ಅಡ್ಮಿನಿಸ್ಟ್ರೇಷನ್ ಮಾತ್ರ ಸರಕಾರ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಗೊಂದಲವಾಗುತ್ತದೆ. ಇದಕ್ಕೋಸ್ಕರವಾಗಿ ಒಂದು ಕೋ-ಆರ್ಡಿನೇಷನ್ ಸ್ಕೀಂ ಮಾಡಬೇಕು. ಇದು ಮುಖ್ಯ ವಿಚಾರ. ಇದು ತಮಗೆ ಗೊತ್ತಿದೆ. ಆದುದರಿಂದ ಆಡಳಿತ ಕ್ರಮವನ್ನು ಕಡ್ಡಾಯವಾಗಿ ಕಾರ್ಯಾಚರಣೆಯಲ್ಲಿ ತರಬೇಕು. ಒಬ್ಬೊಬ್ಬರು ಒಂದೊಂದು ದಾರಿಯಲ್ಲಿ ಹೋದರೆ ಗೊಂದಲವಾಗಿ ವಿದ್ಯಾಭ್ಯಾಸದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಒಂದು ಎಚ್ಚರಿಕೆಯನ್ನು ವಿದ್ಯಾ ಸಚಿವರಿಗೆ ಕೊಡಲು ಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಷಯ ಹೇಳುತ್ತೇನೆ. ಮೈಸೂರು ದೇಶದಲ್ಲಿ ವಿದ್ಯಾಭ್ಯಾಸದ ಪ್ರಗತಿಗಾಗಿ ಹೇರಳವಾಗಿ, ಸುಮಾರು 29 ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಮೈಸೂರು ದೇಶದ ಆದಾಯದಲ್ಲಿ ಐದನೇ ಒಂದು ಭಾಗದಷ್ಟು ವಿದ್ಯಾಭಾಸದ ಇಲಾಖೆಗೆ ಖರ್ಚು ಮಾಡಲಾಗುತ್ತಿದೆ. ಇನ್ನೂ ಹೆಚ್ಚು ಹಣ ಖರ್ಚು ಮಾಡತಕ್ಕ ರೀತಿಯನ್ನು ಈ ಹೊತ್ತು ತಾವು ಮುಂದೆ ಇಟ್ಟುಕೊಂಡಿರುವುದರಿಂದ ವಿದ್ಯಾಭ್ಯಾಸದ ಕ್ರಮದಲ್ಲಿ ವಿಶೇಷ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಇರತಕ್ಕಂಥ ಯಾವುದೇ ಆಡಳಿತ ವರ್ಗಗಳು ಆಗಲೀ ಶಾಲೆಗಳು ಆಗಲೀ, ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಮಟ್ಟದಲ್ಲಿ, ಬೋರ್ಡ್ ಎಂಬುದನ್ನು ನಿರ್ಮಾಣ ಮಾಡುತ್ತಿದ್ದೀರಿ. ಈ ಬೋರ್ಡನ್ನು ನಿರ್ಮಾಣ ಮಾಡುವ ಕಾಲದಲ್ಲಿ ಹಾಲಿ ಬೆಂಗಳೂರಿನಲ್ಲಾಗಲಿ, ಇತರ ನಗರಗಳಲ್ಲಾಗಲೀ, ಈ ಪ್ರೈವೇಟ್ ಎಜುಕೇಷನ್ ಬೋರ್ಡ್ಸ್ ಏನು ಕೆಲಸ ಮಾಡುತ್ತಿದೆ ಅದನ್ನು ಅನುಸರಿಸಿಕೊಂಡು ಮಾಡಬೇಕು. ಇದರ ಬಗ್ಗೆ ಪರಿಶೀಲನೆ ಮಾಡಬೇಕು. ವಿದ್ಯಾಭ್ಯಾಸದ ಕ್ರಮವನ್ನು ಮಾರ್ಪಾಟು ಮಾಡಬೇಕೆನ್ನುವ ಕಾಲದಲ್ಲಿ ಹೆಚ್ಚಿನ ಗೊಂದಲ ಇಲ್ಲದ ಹಾಗೆ ಮಾಡಬೇಕು. ಏಕೆಂದರೆ ಇದು ಇಡೀ ದೇಶದ ಭವಿಷ್ಯವನ್ನು ರೂಪಿಸತಕ್ಕಂಥದ್ದು. ಈ ಬೋರ್ಡಿನ ರಚನೆ ಸುಗಮವಾಗುವಂತೆ ಆಗಬೇಕು. ಶ್ರೀಮಾನ್ ಡೀಮಲ್ಲೋ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಸುಧಾರಣೆಗಳನ್ನು ಮಾಡಬೇಕು. ಪ್ರೈವೇಟ್ ಇನ್‌ಸ್ಟಿಟ್ಯೂಟ್‌ಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ.

(ಶ್ರೀ ಎಸ್. ಶಿವಪ್ಪ)

ಪ್ರತಿಯೊಂದು ವಿಷಯದಲ್ಲೂ ಅವರನ್ನು ಅನುಸರಿಸಿಕೊಂಡು ಹೋಗುವುದು ಬಹಳ ಪ್ರಾಮುಖ್ಯ ವಾದುದು. ಈ ಬಗ್ಗೆ ಗೊಂದಲಕ್ಕೆ ಎಡೆ ಕೊಡಬಾರದು. ಗೊಂದಲಕ್ಕೆ ಎಡೆ ಕೊಟ್ಟರೆ ನಮ್ಮ ವಿದ್ಯಾರ್ಥಿಗಳು ಗಿನಿಪಿಗ್ಸ್ ಆಗುತ್ತಾರೆ. ಈಗ ಯಾವ ರೀತಿ ಪರೀಕ್ಷೆಯನ್ನು ಮಾಡುತ್ತೀರೋ ಅದರಿಂದ ವಿದ್ಯಾರ್ಥಿಗಳು ಯಜ್ಞಪಶುಗಳಾಗುತ್ತಿದ್ದಾರೆ. ಹಗಲೆಲ್ಲಾ ಬದಲಾವಣೆ ಮಾಡುತ್ತಿರು ವುದನ್ನು ನೋಡಿದರೆ ಭಯವಾಗುತ್ತಿದೆ. ಆಗಿಂದಾಗ್ಗೆ ಬದಲಾವಣೆ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಮುಂದುವರಿಯಬೇಕೆಂದು ವಿದ್ಯಾಸಚಿವರಿಗೆ ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಅಧ್ಯಕ್ಷರೇ ನಮ್ಮ ಮುಂದೆ ಇರುವ ಎಲ್ಲಾ ಬೇಡಿಕೆಗಳನ್ನು ಅನುಮೋದಿಸುತ್ತಾ, ವಿದ್ಯಾಭ್ಯಾಸದ ಬಗ್ಗೆ ಕೆಲವು ಮಾತುಗಳನ್ನು ಆಡ ಬೇಕೆಂದು ಇದ್ದೇನೆ.

ಸೆಕೆಂಡರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿದ್ದೀರಿ. ಇದು ಸ್ವಾಗತಾರ್ಹವಾದ ವಿಷಯ. ಅದರ ಜೊತೆಗೆ ನೀವು ಸ್ಕಾಲರ್‌ಷಿಪ್ ಜಾಸ್ತಿ ಮಾಡಬೇಕು. ಮೆರಿಟ್ ವಿದ್ಯಾರ್ಥಿಗಳಿಗೆ ಜಾಗ್ರತೆ ಸಿಗುವಂತಹ ಅವಕಾಶ ಮಾಡಿಕೊಡಬೇಕು, ಎಂದು ಸಲಹೆ ಮಾಡುತ್ತೇನೆ.

ಎಸ್.ಎಸ್.ಎಲ್.ಸಿ. 4 ಭಾಗವಾಗಿದೆ. ಅಂದರೆ 4 ಪಾರ್ಟುಗಳನ್ನಾಗಿ ಮಾಡಿರುವುದು ಸರಿಯಲ್ಲವೆಂದು ನನಗನ್ನಿಸುತ್ತದೆ. ಇದರಿಂದ ವಿದ್ಯಾರ್ಥಿಗಳ ಸ್ಟಾಂಡರ್ಡ್ ಕಡಿಮೆಯಾಗುತ್ತದೆ. ಆದ್ದರಿಂದ ಹಳೆಯ ಪದ್ಧತಿಯನ್ನೇ ಮತ್ತೆ ಜಾರಿಗೆ ತರುವುದು ಒಳ್ಳೆಯದು ಎಂದು ಸಲಹೆ ಮಾಡು ತ್ತೇನೆ.

ವಿದ್ಯಾ ಇಲಾಖೆಯಲ್ಲೂ ಕೂಡ ಅನೇಕ ಬದಲಾವಣೆಗಳು ಆಗಿವೆ ಎಂದು ತಿಳಿದು ಬಂತು. ಈ ಬದಲಾವಣೆಗಳಿಂದ ವಿದ್ಯಾಪ್ರಗತಿ ಜಾಸ್ತಿಯಾಗುವುದಾದರೆ ಬದಲಾವಣೆಯಾಗಿರುವುದು ಸ್ವಾಗ ತಾರ್ಹವೆಂದು ತಿಳಿಯುತ್ತೇನೆ. ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸುಮಾರಾಗಿ 2.33 ಲಕ್ಷ ವಿದ್ಯಾರ್ಥಿಗಳು ಕುಳಿತಿದ್ದಾರೆ ಎಂದು ಅಂದಾಜಾಗಿ ಹೇಳಿದ್ದೀರಿ. ಇದರಲ್ಲಿ ಅಂದಾಜಾಗಿ ಸುಮಾರು 80 ಸಾವಿರ ಜನ ಪಾಸಾಗಬಹುದು. ಈ ಪಾಸಾದ ವಿದ್ಯಾರ್ಥಿಗಳಿಗೆ ಮುಂದಕ್ಕೆ ಓದಲು ಕಾಲೇಜುಗಳಲ್ಲಿ ಸ್ಥಳಾವಕಾಶವಿದೆಯೇ ಎಂಬುದನ್ನು ನೋಡಿ ಅದಕ್ಕಾಗಿ ಮುಂದಿನ ಏರ್ಪಾಡನ್ನು ಈಗಲೇ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಇತ್ತೀಚೆಗೆ ಹೈಸ್ಕೂಲುಗಳಿಗೆ ಲೆವೆಂತ್ ಸ್ಟಾಂಡರ್ಡನ್ನು ಅಟ್ಯಾಚ್ ಮಾಡುವುದು ಬಂದಿದೆ. ಅದು ಸರಿಯಲ್ಲ. ಸ್ಟಾಂಡರ್ಡ್ ಕಡಿಮೆಯಾಗುತ್ತದೆಯೆಂದು ಹೇಳಬಯಸುತ್ತೇನೆ. 30 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾ ಯನು ಇರಬೇಕು. ಈಗ ಇರುವ ವಿದ್ಯಾರ್ಥಿಗಳ ಸಂಖ್ಯೆಗೂ, ಉಪಾಧ್ಯಾಯರ ಸಂಖ್ಯೆಗೂ ಯಾವ ರೀತಿಯ ಹೋಲಿಕೆ ಇಲ್ಲದೆ, ಉಪಾಧ್ಯಾಯರುಗಳ ಸಂಖ್ಯೆ ಕಡಿಮೆಯಾಗಿ ವಿದ್ಯಾರ್ಥಿಗಳ ಸ್ಟಾಂಡರ್ಡ್ ಕಡಿಮೆಯಾಗುತ್ತಿದೆ. ಇದು ಸರಿಯಲ್ಲವೆಂದು ಹೇಳುತ್ತೇನೆ.

ಪಠ್ಯಪುಸ್ತಕಗಳ ಬಗ್ಗೆ ಈಗಾಗಲೇ ಟೀಕೆ ಟಿಪ್ಪಣಿಗಳು ಬೇಕಾದಷ್ಟು ಬಂದಿವೆ. ಇದರ ವಿಚಾರವಾಗಿ ಎಲ್ಲರೂ ಮಾತನಾಡುತ್ತಾರೆ. ಅದು ಸರಿಯಲ್ಲ. ಪಠ್ಯಪುಸ್ತಕಗಳಿಗಾಗಿ ಒಂದು ಸಮಿತಿಯನ್ನು ನೇಮಿಸಿದ್ದೀರಿ. ಅದು ಸ್ವಾಗತಾರ್ಹ. ಈ ಪಠ್ಯಪುಸ್ತಕಗಳನ್ನು ತಜ್ಞರು ಗಳಿಂದ ಪರಿಶೀಲನೆ ಮಾಡಿಸಿ ನಂತರ ಅವನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಈ ಪಠ್ಯ ಪುಸ್ತಕಗಳನ್ನು ವರ್ಷೇ ವರ್ಷೆ ಬದಲಾವಣೆ ಮಾಡುವುದು ಸರಿಯಲ್ಲ. ಇದರಿಂದ ತಂದೆ ತಾಯಿಗಳಿಗೆ ಹೊರೆಯಾಗುತ್ತದೆ. ಉಪಾಧ್ಯಾಯರುಗಳಿಗೆ ಕಷ್ಟವಾಗುತ್ತದೆ. ಅಣ್ಣ ಓದಿದ ಪುಸ್ತಕವನ್ನು ತಮ್ಮ ಓದುವ ಹಾಗೆ ಇರಬೇಕು. 5 ವರ್ಷವಾದರೂ ಪುಸ್ತಕಗಳನ್ನು ಬದಲಾಯಿಸಬಾರದು ಎಂದು ಹೇಳುತ್ತೇನೆ. ಉಪಾಧ್ಯಾಯರುಗಳನ್ನು ವರ್ಷದ ಮಧ್ಯದಲ್ಲಿ, ಕೊನೆಯಲ್ಲಿ ವರ್ಗ ಮಾಡಿದರೆ, ಅವರ ಮಕ್ಕಳು ಮತ್ತೆ ಬೇರೆ ಪುಸ್ತಕಗಳನ್ನು ಓದಬೇಕಾಗುತ್ತದೆ. ಆದ್ದರಿಂದ ದೇಶಕ್ಕೆಲ್ಲಾ ಒಂದೇ ರೀತಿಯ ಪಠ್ಯ ಪುಸ್ತಕಗಳನ್ನು ಗೊತ್ತುಮಾಡಬೇಕೆಂದು ಹೇಳುತ್ತೇನೆ.

ಇನ್ನು ಪ್ರೈಮರಿ ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ವಿ.ಟಿ.ಸಿ. ಟ್ರೈನಿಂಗ್ ಮಾಡಿಕೊಳ್ಳ ಬೇಕಾಗಿದೆ. ಇವರಿಗೆ ಇಂಗ್ಲೀಷ್ ಒಂದನ್ನು ಮಾತ್ರ ಮಾಡಿಕೊಳ್ಳುವಂತೆ ಅವಕಾಶ ಮಾಡಿಕೊಡ ಬೇಕು. ಎಸ್.ಎಸ್.ಎಲ್.ಸಿ.ಯನ್ನು ಕೆಲವರು ಪಾಸ್ ಮಾಡಿಕೊಂಡಿರುತ್ತಾರೆ, ಅಂಥವರಿಗೆ ಈ ಟ್ರೈನಿಂಗ್‌ನ್ನು ಮನ್ನಾ ಮಾಡಬೇಕೆಂದು ಹೇಳುತ್ತೇನೆ. ವಿಮೆನ್ ಎಜುಕೇಷನ್ ಕೌನ್ಸಿಲ್ ಎಂದು ಮಾಡಿದ್ದೀರಿ. ಅದರ ರಚನೆ ಏನು, ಅದರ ಚೇರ್‌ಮನ್ ಯಾರು, ಅದರ ಬಗ್ಗೆ ಏನು ಏನು ಮಾಡಿದ್ದೀರಿ ಎನ್ನುವುದನ್ನು ತಿಳಿಯಬಯಸುತ್ತೇನೆ.

ಹಿಂದಿ ಉಪಾಧ್ಯಾಯರುಗಳಿಗೆ ಎಸ್.ಎಸ್.ಎಲ್.ಸಿ. ಆಗಿರಲೇಬೇಕು ಎಂದು ಕಡ್ಡಾಯ ಮಾಡಿದ್ದೀರಿ, ಇದಕ್ಕೆ ವಿನಾಯಿತಿ ತೋರಿಸಿದರೆ ಮಾತ್ರ ಹಿಂದಿ ಉಪಾಧ್ಯಾಯರುಗಳು ಜಾಸ್ತಿ ಸಿಗುತ್ತಾರೆ. ಆದ್ದರಿಂದ ವಿನಾಯಿತಿ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಪ್ರೈಮರಿ, ಮಿಡಲ್, ಹೈಸ್ಕೂಲ್‌ಗಳವರೆಗೆ ನೀವು ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಬೇಕು. ಇದನ್ನು ಕೊಡ ಬೇಕಾದರೆ 50 ಪರ್‌ಸೆಂಟ್ ಬರಬೇಕೆಂದು ಮಾಡಿದ್ದೀರಿ. ಆದರೆ 48-49 ಪರ್‌ಸೆಂಟ್ ಬಂದರೂ ಸಹ ಕೊಡುವುದಿಲ್ಲ. ಈ ರೂಲ್ಸನ್ನು ತೆಗೆದು, ತೇರ್ಗಡೆಯಾದವರಿಗೆ ಒಂದು ರಿಯಾಯಿತಿ ತೋರಿಸ ಬೇಕು ಎಂದು ಹೇಳಬಯಸುತ್ತೇನೆ.

ಇನ್ನು ತಾವು ಹೆಣ್ಣುಮಕ್ಕಳಿಗೆ ಡಿ.ಇ.ಓ. ಆಗಿ ತೆಗೆದುಕೊಳ್ಳುತ್ತಿದ್ದೀರಿ. ಇದಕ್ಕಾಗಿ ಅಭಿನಂದಿಸುತ್ತೇನೆ. ಇವರು ಜಿಲ್ಲೆ ಎಲ್ಲಾ ಸುತ್ತಾಡಬೇಕು. ಕೆಲವರಿಗೆ ಜೀಪುಗಳನ್ನು ಕೊಟ್ಟಿದ್ದೀರಿ. ಶಿವಮೊಗ್ಗಾ, ಹಾಸನ ಮತ್ತು ಮೈಸೂರಿನವರಿಗೆ ಮಾತ್ರ ಕೊಟ್ಟಿದ್ದೀರಿ. ಉಳಿದ ಜಿಲ್ಲೆಯವರಿಗೂ ಕೊಡಬೇಕು. ಇವರಿಗೆ ಎಲ್ಲಾ ಸೌಕರ್ಯವನ್ನೂ ಮಾಡಿಕೊಡಬೇಕು. ಈ ಜೀಪು ಗಳನ್ನು ರಿಪೇರಿಗೆ ಕಳಿಸಿದರೆ ಜಾಗ್ರತೆ ರಿಪೇರಿಯಾಗಿ ಬರುವುದಿಲ್ಲ. ಈ ವಿಚಾರದಲ್ಲಿ ಸರಿಯಾಗಿ ನೋಡಿಕೊಳ್ಳಬೇಕು. 4ನೇ ಯೋಜನೆಯಲ್ಲಿ ಈಗ ಇರುವುದಕ್ಕಿಂತ ಹೆಚ್ಚಾಗಿ ಡಿ.ಡಿ.ಪಿ.ಐ. ಗಳನ್ನು ಮತ್ತು ಸ್ಕೂಲ್ ಇನ್‌ಸ್ಪೆಕ್ಟರುಗಳನ್ನು ಜಾಸ್ತಿ ಮಾಡುತ್ತಾರೆಂದು ತಿಳಿದುಬಂತು. ತುಂಬಾ ಒಳ್ಳೆಯ ಯೋಚನೆ. ಇದು ಸ್ವಾಗತಾರ್ಹ. ಈ ಡಿ.ಡಿ.ಪಿ.ಐ.ಗಳನ್ನು ನೇಮಕ ಮಾಡುವಾಗ ಸೀನಿಯಾರಿಟಿ ವಿಚಾರದಲ್ಲಿ ತೊಂದರೆ ಬರದ ಹಾಗೆ ನೋಡಿ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಈ ಸಭೆಗೆ ಬಂದಾಗಿನಿಂದಲೂ ಹೇಳುತ್ತಿದ್ದೇನೆ. ಈ ಬಡ ಉಪಾಧ್ಯಾಯರುಗಳ ಕೇಡರ್ ಅಂಡ್ ರೆಕ್ರೂಟ್ ಮೆಂಟ್ ರೂಲ್ಸನ್ನು ಜಾಗ್ರತೆ ಮಾಡಬೇಕೆಂದು ಹೇಳುತ್ತಲೇ ಬಂದಿದ್ದೇನೆ. ತಾವು ಪಿ.ಎಸ್.ಸಿ.ಗೆ ಹೋಗಿದೆ ಎಂದು ಮೊನ್ನೆತಾನೆ ಹೇಳಿದಿರಿ. ಅದು ಪಿ.ಎಸ್.ಸಿ.ಯಿಂದ ವಾಪಸ್ ಬಂದಿದೆಯೆಂದು ಕೇಳಿದೆ. ಈಗ ಅದು ನಿಮ್ಮ ಇಲಾಖೆಯಲ್ಲಿ ಇರಬಹುದು. ಅದನ್ನು ಜಾಗ್ರತೆ ಮಾಡಿದರೆ ಬಡ ಉಪಾಧ್ಯಾಯರುಗಳಿಗೆ ಸಿಗುವ ಅನುಕೂಲಗಳನ್ನು ಅವರು ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಇನ್ನು ಕಾಲೇಜುಗಳಲ್ಲಿ ಸ್ಕಾಲರ್‌ಶಿಪ್ ಮತ್ತು ಫ್ರೀಶಿಪ್ ವಿಚಾರ ವಾಗಿ ಅನೇಕರು ಹೇಳುತ್ತಲೇ ಇದ್ದಾರೆ. 2,400 ರೂಪಾಯಿಗಳಿಗಿಂತಲೂ ಹೆಚ್ಚು ಸಂಬಳ ಬರುವವರ ಮಕ್ಕಳಿಗೆ ಇದು ಅನ್ವಯಿಸುವುದಿಲ್ಲವೆಂದು ಆಜ್ಞೆ ಮಾಡಿದ್ದೀರಿ. ಇದನ್ನು 3,000 ರೂಪಾಯಿಗಳಿಗೆ ಲಿಮಿಟ್ ಮಾಡಬೇಕು. ಮಕ್ಕಳು ಜಾಸ್ತಿ ಇದ್ದವರಿಗೆ ವಿದ್ಯಾಭ್ಯಾಸ ಮಾಡಿಸ ವುದು ಕಷ್ಟವಾಗುತ್ತದೆ. ಕೆಲವು ಮಕ್ಕಳಿಗೆ ಸ್ಕಾಲರ್‌ಶಿಪ್‌ಗಳು ಮಂಜೂರಾದರೂ ಸಹ ಅದನ್ನು ಅವರಿಗೆ ಕಾಲಕ್ಕೆ ಸರಿಯಾಗಿ ಕೊಡುವುದಿಲ್ಲ. ಸ್ಕಾಲರ್‌ಶಿಪ್ ಕಮಿಟಿಗಳೆಲ್ಲಾ ಮುಗಿದು, ಪರೀಕ್ಷೆ ಹತ್ತಿರ ಬಂದಾಗಲೂ ಸಹ ಕೊಡುವುದಿಲ್ಲ. ಇದರಿಂದ ಬಡವರಿಗೆ ತುಂಬಾ ತೊಂದರೆಯಾಗುತ್ತದೆ ಯೆಂದು ಹೇಳುತ್ತೇನೆ. ಪರೀಕ್ಷೆಗೆ ಹಣ ಕಟ್ಟಲು ಕೆಲವರಿಗೆ ತೊಂದರೆಯಾಗಿ, ಇವರ ಪರವಾಗಿ ಮತ್ತೊಬ್ಬರು ಹೇಳಿಕೆ ಕೊಟ್ಟರೂ ಸಹ ಮುಂದೆ ಹಾಲ್ ಟಿಕೆಟ್ ಕೊಡುವಾಗ ತೊಂದರೆಯಾಗುತ್ತದೆ. ಆದ್ದರಿಂದ ಕಾಲಕ್ಕೆ ಸರಿಯಾಗಿ ಹಣ ದೊರಕುವ ಹಾಗೆ ಮಾಡಬೇಕೆಂದು ಹೇಳಬಯಸುತ್ತೇನೆ. ಪಠ್ಯ ಪುಸ್ತಕಗಳು ಶಾಲೆ ಆರಂಭವಾದ ಕೂಡಲೇ ಸಿಗುವ ಹಾಗೆ ಏರ್ಪಾಡು ಮಾಡಬೇಕು. ಕೆಲವು ಸಾರಿ ಫಸ್ಟ್ ಟರ್ಮ್ ಪರೀಕ್ಷೆ ಮುಗಿದಮೇಲೆ ಪಠ್ಯ ಪುಸ್ತಕಗಳು ಸಿಗುತ್ತವೆ. ಶಾಲೆಗಳು ಆರಂಭ ವಾಗುವ ಮೊದಲೇ ಸಿಗಬೇಕು ಎಂದು ಹೇಳುತ್ತೇನೆ.

5-30 P.M.

ಇನ್ನು ಉಪಕುಲಪತಿಗಳ ಬಗ್ಗೆ ತಾತ್ಕಾಲಿಕವಾಗಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಇಲ್ಲಿಯವರೊಬ್ಬರನ್ನು ನೇಮಿಸಿದ್ದಾರೆ. ಉಪಕುಲಪತಿಗಳು ಆಗುವುದಕ್ಕೆ ಅರ್ಹತೆ ಇರುವ ಜನರು ಮೈಸೂರಿನಲ್ಲಿ ಬೇಕಾದಷ್ಟು ಇದ್ದಾರೆ. ಇಲ್ಲಿಯವರನ್ನೇ ಉಪಕುಲಪತಿಗಳಾಗಿ ಮಾಡುವ ಪದ್ಧತಿ ಯನ್ನು ಜಾರಿಗೆ ತನ್ನಿ ಎಂದು ಹೇಳುತ್ತೇನೆ. ವಿರೋಧಪಕ್ಷದ ನಾಯಕರು ಹೇಳಿದರು, ವಿದ್ಯಾಭ್ಯಾಸ ಇಲಾಖೆಯಲ್ಲಿ ಜಾಯಿಂಟ್ ಡೈರೆಕ್ಟರ್ ತುಂಬಾ ಜನ ಇದ್ದಾರೆ, ಅವರಲ್ಲಿ ಹೊಂದಾಣಿಕೆ ಇಲ್ಲ ಎಂದು. ನಾನು ಅನೇಕ ಕೆಲಸಕಾರ್ಯಗಳಿಗೆ ಅಲ್ಲಿಗೆ ಹೋಗುತ್ತಾ ಇದ್ದೇನೆ. ಆ ತರಹ ಏನೂ ಕಾಣುವುದಿಲ್ಲ, ಎಲ್ಲರೂ ಹೊಂದಾಣಿಕೆಯಿಂದ ಹೋಗುವ ಹಾಗೆ ಕಾಣುತ್ತದೆ. ಇನ್ನೊಂದು ಹೇಳಿದ್ದಾರೆ. ತಾಯಿಗೆ ಮಕ್ಕಳ ಕಾಟ ಜಾಸ್ತಿ, ಅದಕ್ಕೋಸ್ಕರ ಸ್ಕೂಲಿಗೆ ಕಳುಹಿಸುತ್ತಾರೆ ಎಂದು. ಅದು ನಿಜವಲ್ಲ. ತಾಯಿಗೆ ಮಕ್ಕಳ ಕಾಟ ಎಂದಿಗೂ ಆಗುವುದಿಲ್ಲ. ಆದರೂ ತಂದೆ ತಾಯಿಗಳು ಮಕ್ಕಳ ಬಗ್ಗೆ ನಿಗಾ ಕೊಡಬೇಕು. ಆಗ ಎಲ್ಲಾ ಸರಿಹೋಗುತ್ತದೆ.

ಶ್ರೀ ಎಸ್. ಶಿವಪ್ಪ.—ಹಳ್ಳಿ ಸ್ಕೂಲ್ ನೋಡಿದ್ದೀರಾ ?

ಶ್ರೀಮತಿ ರತ್ನಮ್ಮ ಮಾಧವರಾವ್.—ಬೆಂಗಳೂರಿನಲ್ಲಿ ನಾನು ಇರುವುದಿಲ್ಲ. ತಾವು ತಪ್ಪು ತಿಳಿದುಕೊಂಡಿದ್ದೀರಿ. ಶಿವಮೊಗ್ಗದಲ್ಲಿಯೇ ಇರುತ್ತೇನೆ. ಹಳ್ಳಿಗಳಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗೆ ವಾಸದ ಮನೆಗೆ ಅವಕಾಶ ಕಲ್ಪಿಸಿಕೊಡಬೇಕು, ಇಲ್ಲದಿದ್ದರೆ ಅಂಥ ಉಪಾಧ್ಯಾಯರಿಗೆ ತೊಂದರೆಯಾಗುತ್ತದೆ. ಊರಿನಿಂದ ಆಚೆ ಮನೆ ಕಟ್ಟಿ ಕೊಡುವುದು ಬೇಡ. ಹೆಣ್ಣು ಮಕ್ಕಳು ಉಪಾಧ್ಯಾಯರುಗಳಿಗೆ ಊರಿನ ಮಧ್ಯೆ ವಾಸಕ್ಕೆ ಅನುಕೂಲ ಮಾಡಿಕೊಡಬೇಕು. ಕೊನೆಯದಾಗಿ, ಸ್ವಾತಂತ್ರ್ಯಬಂದನಂತರ ಇಂಡಿಯನ್ ಕಲ್ಚರ್, ಎಂದರೆ, ಭಾರತೀಯ ಸಂಸ್ಕೃತಿ ಮತ್ತು ಕಲೆಗಳಲ್ಲಿ ಶಿಕ್ಷಣ ಕೊಟ್ಟು ಸ್ವಾತಂತ್ರ್ಯಾನಂತರ ಆಗಿರತಕ್ಕ ಘಟನೆಗಳ ಬಗ್ಗೆ ಮುಖ್ಯ ಗಮನ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ಈ ಬೇಡಿಕೆಗಳಿಗೆ ನನ್ನ ಅನುಮೋದನೆಯನ್ನು ಸೂಚಿಸುತ್ತೇನೆ.

†ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಅನುಮೊದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ.

"The primary purpose of Education is not to teach to earn their bread but to make every mouth sweeter."

ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದು ಮಾತ್ರ ಗುರಿಯಾಗಿರದೇ ಎಲ್ಲರಿಗೂ ಹಿತವಾಗುವಂತಹದೇ ವಿದ್ಯಾಭ್ಯಾಸಪ್ರಾಥಮಿಕ ಗುರಿಯಾಗಬೇಕೆಂದು ಬಲ್ಲವರು ಹೇಳಿದ್ದಾರೆ. ಆದರೆ ವಿದ್ಯಾ ಇಲಾಖೆ ಗೊತ್ತು ಗುರಿಗಳಿಲ್ಲದೇ ಎತ್ತಲೋ ಸಾಗುತಿದೆ. ವಿದ್ಯಾಇಲಾಖೆಯೇನೋ ಮುತ್ತುಗದ ಹೂವಿನಂತೆ ಮನೋಹರವಾಗಿದೆ, ಆದರೆ ವಾಸನೆಯೇ ಇಲ್ಲ. ವಿಧ್ಯಾಭ್ಯಾಸ ಇಂದು ವ್ಯಾಪಾರಕ್ಕಿಟ್ಟಿರುವ ಸರಕಾಗಿದೆ. ಹಣವಿದ್ದವರಿಗೆ ಉಂಟು, ಹಣವಿಲ್ಲದವರಿಗೆ ಇಲ್ಲ, ಕೆಲವರು ಹಣಗಳಿಸಲಿಕ್ಕಾಗಿ ಎಲ್ಲಿ ನೋಡಿದರಲ್ಲಿ ಶಿಶುವಿಹಾರ ಪ್ರಾಥಮಿಕ ಮಾಧ್ಯಮಿಕ ಹೈಸ್ಕೂಲ್ ಮತ್ತು ಕಾಲೇಜುಗಳು ಹುಟ್ಟಿಕೊಂಡಿವೆ. ಇವುಗಳ ಸಂಸ್ಥಾಪಕರಂತೂ ಸಿರಿವಂತಿಕೆಯ ಶಿಖರಕ್ಕೇರುತ್ತಿದ್ದಾರೆ. ವಿದ್ಯಾರ್ಥಿಗಳ ಹಣದಿಂದ ಸಿರಿವಂತಿಕೆ ಬೆಳೆಸುತ್ತಾ ಪ್ರಭಾವಶಾಲಿಗಳಾಗಿ ಸ್ಥಾನಮಾನಗಳನ್ನು ಗಳಿಸಿಕೊಂಡಿದ್ದಾರೆ. ಇದು ಬಹಿರಂಗ ಸತ್ಯ. ಆದರೂ ಸರ್ಕಾರ ಮತ್ತು ಸಾರ್ವಜನಿಕರು ಇದನ್ನು ಬೆರಗಣ್ಣುಗಳಿಂದ ನೋಡುತ್ತಿದ್ದಾರೆ. ಆಕಾಶವಾಣಿಯ ಸುದ್ದಿ ಕೇಳಿದಂತೆ ಕೇಳುತಿದ್ದಾರೆ. ಸರ್ಕಾರದ ಸಹಾಯ ಪಡೆದು ನಡೆಯುತ್ತಿರುವ ಅನಂತ ವಿದ್ಯಾ ಸಂಸ್ಥೆಗಳಲ್ಲಿ ಅಕ್ರಮ, ಅನ್ಯಾಯ, ಹಣ, ದುರುಪಯೋಗ ನಡೆದಿರುವುದು ವಿದ್ಯಾ ಇಲಾಖೆಯ ಗಮನಕ್ಕೆ ಬಂದಿದ್ದರೂ ಅಂತಹ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಂಡಿರುವುದು ತುಬಾ ಅಪರೂಪ. ಇಲ್ಲಿಯೂ ಭ್ರಷ್ಟಾಚಾರ ಕೃತ್ಯಗಳು ಪ್ರಭಾವದ ನೃತ್ಯದಲ್ಲಿ ಮರೆತುಹೋಗುತ್ತಿವೆ. ಈ ಸ್ಥಿತಿಯನ್ನು ಹೀಗೆಯೇ ನಿರ್ಲಕ್ಷಿಸಿದಲ್ಲಿ, ನಿಮ್ಮ ಇಲಾಖೆಯ ಖರೀದಿ ಎಷ್ಟು?

ಎಷ್ಟಕ್ಕೆ ಕೊಡುತ್ತೀರಿ ಎಂದು ಇಂದಲ್ಲ ನಾಳೆ ಕೇಳುವಂತಹ ವಿದ್ಯಾ ವ್ಯಾಪಾರಿ ಕುಬೇರರು ಬೆಳೆಯಲು ಅವಕಾಶವಾದೀತೆಂದು ಹೇಳಬಯಸುತ್ತೇನೆ, ವಿದ್ಯಾ ಕ್ಷೇತ್ರದಲ್ಲಿ "ಜೇಬುಗಳ್ಳರಿದ್ದಾರೆ" ಎಚ್ಚರಿಕೆಯಿಂದಿರಿ ಎಂದು ಸೂಚಿಸಬಯಸುತ್ತೇನೆ. ಶಿಕ್ಷಕರು ರಾಷ್ಟ್ರದ ಬೆನ್ನು ಮೂಳೆ, ದೇಶದ ವಿದ್ಯಾ ನಾಡಿ, ಇಂತಹವರಿಗೆ ನಾವು ಕೊಟ್ಟಿರುವ ಪ್ರಶಸ್ತಿ ಏನು ಗೊತ್ತೇ? "ಬಡಮೇಸ್ತ್ರು" ಈ ಬಡ ಮೇಸ್ತ್ರುಗಳ ಪ್ರಭಾವವನ್ನು ಸರ್ಕಾರ ಅರಿತುಕೊಳ್ಳಬೇಕು. ಇವರು ಮನಸ್ಸು ಮಾಡಿದರೆ ದೇಶವನ್ನು ಶಾಂತಿ ಮಾರ್ಗಕ್ಕೂ ಒಯ್ಯಬಲ್ಲರು. ಕ್ರಾಂತಿ ಮಾರ್ಗಕ್ಕೂ ಒಯ್ಯಬಲ್ಲರು. ಪ್ರಾಥಮಿಕ ಶಿಕ್ಷಕರ ಜೀವನ ಸ್ಥಿತಿ ಒಬ್ಬ ಗುಮಾಸ್ತನಿಗಿಂತಲೂ ಕಡೆಯೇನು? ಸ್ಕೂಲ್ ಮೇಸ್ಟ್ರಾಗಿದ್ದೀರಾ "ಪಾಪ" ಜೀವನ ತುಂಬಾ ಕಷ್ಟ ಎಂದು ಹೇಳುವುದು ವಾಡಿಕೆಯಾಗಿಬಿಟ್ಟಿದೆ. ಕುಚೇಲರಾದರೂ ಸಂಸಾರ ಮಾತ್ರ ಕೌರವರಗಂತೆ, ಒಬ್ಬ ಉಪಾಧ್ಯಾಯ ಊರನ್ನು ನಂದನವನವನ್ನಾಗಿಯೂ ಮಾಡಬಲ್ಲ. ಇಂತಹ ಒಂದು ಆತ್ಮಶಕ್ತಿ ಅವರಲ್ಲಿದೆ. ಆದಕಾರಣ ಶಿಕ್ಷಕರ ಸ್ಥಿತಿಯನ್ನು ಸರಿಪಡಿಸಲು ಪ್ರಯತ್ನಿಸಿರಿ. ಅವರಿಗೆ ತೃಪ್ತಿಕರವಾದ ವೇತನ, ನಿವೃತ್ತರಾಗುವ ವಯೋಮಿತಿ ಹೆಚ್ಚಿಸುವ ವಿಚಾರ ಈ ಬಗ್ಗೆ ಒಂದು ನಿರ್ದಿಷ್ಟ ಕ್ರಮವನ್ನು ಜಾರಿಗೆ ತರಲು ಪ್ರಯತ್ನಿಸಿರೆಂದು ವಿನಂತಿಸುತ್ತೇನೆ.

ಇನ್ನು ಕೆಲವು ಸಲಹೆಗಳನ್ನು ಮಾಡಬೇಕೆಂದಿದ್ದೇನೆ. ವಿದ್ಯಾಭ್ಯಾಸದ ಕ್ರಮವು ಕಡೆಯ ಪಕ್ಷ ಇಂತಿಷ್ಟು ವರ್ಷಗಳವರೆಗಾದರೂ ಒಂದೇ ಕ್ರಮ ಇರಬೇಕು. ಇದಿಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ತೊಂದರೆಯಾಗುತ್ತದೆ. 1961 ರಲ್ಲಿ ಜಾರಿಗೆ ಬಂದ ಹೊಸ ಕ್ರಮದಲ್ಲಿ, ಹಿಂದಿನ ಕ್ರಮದಲ್ಲಿ ಹೈಸ್ಕೂಲ್ 8ನೇ ತರಗತಿಯಲ್ಲಿದ್ದ ವಿದ್ಯಾರ್ಥಿಗಳು ಈಗಲೂ ಎಸ್.ಎಸ್.ಎಲ್.ಸಿ.ಯಲ್ಲಿ ಥರ್ಡ್ ಫಾರ್ಮಿಗೆ ಕೂತುಕೊಳ್ಳುತ್ತಿದ್ದಾರೆ. ಕಾರಣವಿಷ್ಟೇ ಗಣಿತ ಮತ್ತು ಸಮಾಜಶಾಸ್ತ್ರಕ್ಕೆ

ಪ್ರಾಥಮಿಕ ಮಟ್ಟದಿಂದಲೂ ತಳಹದಿ ಇಲ್ಲದೇ ಇರುವ ಕಾರಣ ಅನೇಕ ಹಳೆಸ್ಕೀಂ ವಿದ್ಯಾರ್ಥಿಗಳು ಈಗಲೂ ಪರೀಕ್ಷೆಗೆ ಕೂಡುತ್ತಿದ್ದಾರೆ. ಇದರಲ್ಲಿರುವ ನ್ಯೂನತೆಯನ್ನು ಸರಿಪಡಿಸಲು ತಜ್ಞರು ಪ್ರಯತ್ನಿಸಬೇಕು.

ದೇಶಾದ್ಯಂತ ಶಿಕ್ಷಣ ಕ್ರಮ—ಪಠ್ಯಪುಸ್ತಕಗಳು ಒಂದೇ ರೀತಿಯಾಗಿರಬೇಕು. ಆಯಾ ತರಗತಿಯ ಮಟ್ಟಕ್ಕೆ ತಕ್ಕಂತಹ ಪಠ್ಯ ಪುಸ್ತಕಗಳಿರಬೇಕು. ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ನೀತಿ, ಬುದ್ಧಿ, ವಿಕಾಸವಾಗುವಂತಿರಬೇಕು.

ಪ್ರಶ್ನೆಪತ್ರಿಕೆಗಳು ನೇರವಾಗಿ ಅರ್ಥವಾಗುವಂತಿರಬೇಕು. ಉಕ್ಕಿನ ಕಡಲೆಯಂತಹ ಕಠಿಣ ಶಬ್ದಗಳನ್ನು ಉಪಯೋಗಿಸಬಾರದು.

ಶಿಕ್ಷಕರು ತರಬೇತಿ ಹೊಂದಿದವರಾಗಿರಬೇಕು. ಸ್ವಂತ ಖರ್ಚಿನಿಂದ ತರಬೇತಿ ಪಡೆದ ಶಿಕ್ಷಕರಿಗೆ ಬಡ್ತಿ ಕೊಟ್ಟು ಪ್ರೋತ್ಸಾಹಿಸಬೇಕು. ಈಗ ಯು. ಜಿ. ಟಿ. ಮತ್ತು ಬಿ. ಇಡಿ. ಗಳಿಗೆ ಮಾತ್ರ ಪ್ರೋತ್ಸಾಹವಿರುವುದು ಎಲ್ಲ ಟ್ರೈನಿಂಗ್‌ಗಳಿಗೂ ಅನ್ವಯಿಸಬೇಕು. ಶಿಕ್ಷಕರನ್ನು 5 ವರ್ಷವಾದರೂ ಒಂದೇ ಕಡೆ ಇಡಬೇಕು. ವಿಶೇಷ ಪರಿಸ್ಥಿತಿ ಇದ್ದರೆ ಮಾತ್ರ ವರ್ಗಾಯಿಸಬೇಕು. ಅದರಲ್ಲೂ ಪರೀಕ್ಷೆಗಳಿರುವ ಕಾಲದಲ್ಲಂತೂ ಶಿಕ್ಷಕರ ವರ್ಗಾವರ್ಗಿಗಳು ಆಗಲೇಬಾರದು. ವಸತಿ ಸೌಕರ್ಯ ವನ್ನೊದಗಿಸಲು ಸರ್ಕಾರ ಪ್ರಯತ್ನಿಸಬೇಕು.

ಶಾಲೆಗಳಲ್ಲಿ ಒಂದು ತರಗತಿಯಲ್ಲಿ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರದಂತೆ ವ್ಯವಸ್ಥೆಯಾಗ ಬೇಕು. ವಿದ್ಯಾರ್ಥಿಗಳಲ್ಲಿ ಶಿಸ್ತು ಜ್ಞಾನಾಭಿವೃದ್ಧಿ ಆಗುವಂತಹ ರೀತಿ ನೀತಿಗಳನ್ನು ಕೈಕೊಳ್ಳಬೇಕು. ಹೀಗೆ ಕೆಲವು ಅಗತ್ಯ ಬದಲಾವಣೆಗಳನ್ನು ಕೈಕೊಂಡಲ್ಲಿ ವಿದ್ಯಾ ಮಟ್ಟ ಒಂದು ಕ್ರಮದಲ್ಲಿ ಹೋಗಲು ನೆರವಾಗುತ್ತದೆ. ಇದನ್ನು ಸಂಬಂಧಪಟ್ಟ ತಜ್ಞರು ಯೋಚಿಸುತ್ತಾರೆಂದು ನಂಬಿದ್ದೇನೆ.

ವೇದಗಳಲ್ಲೇ ಪ್ರಾಶಸ್ತ್ಯ ಪಡೆದಿರುವ ಸಂಗೀತ-ನೃತ್ಯ ಚಿತ್ರಕಲೆಗಳಿಗೆ ಹೆಚ್ಚು ಪ್ರೋತ್ಸಾಹ ಅತ್ಯಾವಶ್ಯ ಕೊಡಬೇಕು. ಸರ್ಕಾರದವರು ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಕೊಂಡಿರುವುದು ನಿಜ. ಆದರೆ ಕ್ರಮಬದ್ಧವಾಗಿ ಕೈಕೊಂಡು ಮುಂದುವರಿಸಿಕೊಂಡು ಹೋಗಬೇಕು. ಸಂಗೀತ ಬೋಧಕರ ಅರ್ಹತೆಗೆ ಸರ್ಕಾರ ಉನ್ನತಮಟ್ಟದ ''ವಿದ್ವತ್'' ಪರೀಕ್ಷೆಯಲ್ಲಿ ಡಿಗ್ರಿಯನ್ನು ಕೊಟ್ಟು ಅಂತಹವರನ್ನು ಆಯ್ಕೆ ಮಾಡುತ್ತಾರೆ. ಬರೀ ಪರೀಕ್ಷೆಯಲ್ಲಿ ಪಾಸು ಮಾಡುವುದರಿಂದಲೇ ಸಂಗೀತ ವನ್ನು ಹೇಳಲು ಸಾಧ್ಯವಾಗದು. ಹತ್ತಾರು ವರ್ಷಗಳ ಅಭ್ಯಾಸ, ಸಾಧನೆ ಮುಂತಾದ ಪರಿಶ್ರಮ ಗಳಿಂದ ಮಾತ್ರ ಉಪಾಧ್ಯಾಯರಾಗಲು ಸಾಧ್ಯ. ಹಾಗೆ ಪರೀಕ್ಷೆಗಳೇ ಮಾಡದೆ ಸಂಗೀತದಲ್ಲೇ ನಿಷ್ಣಾತರಾದ ಅನೇಕ ದೊಡ್ಡ ದೊಡ್ಡ ವಿದ್ವಾಂಸರುಗಳಿದ್ದಾರೆ. ಅಂತಹವರಿಗೆ ಹೈಸ್ಕೂಲ್, ಕಾಲೇಜುಗಳ ಇಂತಹ ಪರೀಕ್ಷೆಗಳೇ ಆಗಿರಬೇಕೆಂಬ ಕಡ್ಡಾಯವಿರಬಾರದು. ಅವರು ಬೋಧಕ ರಾಗಲು ಅವಕಾಶವಿರಬೇಕು. ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲ್‌ಗಳಲ್ಲಿ ಸಂಗೀತ ಬೋಧಕ ರಿಗೆ ನೀಡುತ್ತಿರುವ ವೇತನ ಅಷ್ಟು ಸಮರ್ಪಕವಾಗಿಲ್ಲ. ಇತರ ಅಧ್ಯಾಪಕರಿಗೆ ಕೊಡುವ ಸೌಲಭ್ಯ ಗಳನ್ನು ಇವರಿಗೂ ಕೊಡಬೇಕು. ಎಲ್ಲ ಪಠ್ಯ ಪಾಠಗಳಿಗೂ ಒಬ್ಬ ಪ್ರೊಫೆಸರ್, ರೀಡರ್ ಹುದ್ದೆ ಇರುವಂತೆ ಸಂಗೀತಕ್ಕೂ ಈ ಹುದ್ದೆಗಳನ್ನು ಕಲ್ಪಿಸಿಕೊಡಬೇಕು. ಇದರಿಂದ ಅನೇಕ ಸಂಗೀತ ವಿದ್ವಾಂಸರಿಗೆ ಸೌಲಭ್ಯ ನೀಡಿದಂತಾಗುತ್ತದೆ. ಸಂಗೀತ ವಿದ್ವಾಂಸರಿಗೆ ವಯೋಮಿತಿ ಇರಬಾರದು. 35ನೇ ವರ್ಷದಿಂದ 60 ವರ್ಷಗಳ ವರೆಗೆ ಸಂಗೀತಗಾರರು ಪಾಠ ಹೇಳಲಿಕ್ಕೆ ಅರ್ಹರಾಗಿರುತ್ತಾರೆ. ಸಂಗೀತ ಶಾಲೆಗಳಿಗೆ ಮತ್ತು ಸ್ಟೇಟ್ ಸಂಗೀತ ನೃತ್ಯ ಕಲೆಗಳ ಅಕಾಡೆಮಿಗಳಿಗೆ ಹೆಚ್ಚು ಹೆಚ್ಚು ಧನಸಹಾಯ ಪ್ರೋತ್ಸಾಹ ಕೊಟ್ಟು ಬೆರಳೆಣಿಕೆಗೂ ಬಾರದಷ್ಟು ಕಲಾವಿದರಿರುವ ಈ ಕ್ಷೇತ್ರ ಕಲಾವಿದರಿಂದ ಬೆಳಗುವಂತೆ ವಿದ್ಯಾ ಇಲಾಖೆ ಪ್ರಯತ್ನಿಸಲೆಂದು ಹಾರೈಸುತ್ತೇನೆ. ಅಕಾಡೆಮಿ ಕೆಲಸ ಕಾರ್ಯಗಳು ಯಾರೊ ಒಬ್ಬಿಬ್ಬರು ವ್ಯಕ್ತಿಗಳ ಅಭಿಪ್ರಾಯದಂತೆ ನಡೆದರೆ ಸಾಲದು. ಅಕಾಡೆಮಿಯ ಚಟುವಟಿಕೆಗಳು ಸಂಗೀತ ವಿದ್ವಾಂಸರ ಏಳಿಗೆಗೆ ಅಷ್ಟು ಸಮರ್ಪಕವಾಗಿ ನಡೆದಂತೆ ಕಾಣಲಿಲ್ಲ. ವಿದ್ವಾಂಸರುಗಳಿಗೆ ಪ್ರತಿ ವರ್ಷ ಪ್ರಶಸ್ತಿದಾನ ಹಣ ನೀಡುತ್ತಿದ್ದಾರೆ. ಅಷ್ಟೇ ಸಾಲದು. ದೈಹಿಕವಾಗಿ ಮಾನಸಿಕವಾಗಿ ತೊಂದರೆಗೊಳಗಾಗಿ ವಯೋವೃದ್ಧರಾಗಿರುವ ಕಲಾವಿದರುಗಳಿಗೆ ಅವರು ಜೀವಿಸಿರುವ ಪರ್ಯಂತ ದ್ರವ್ಯ ಸಹಾಯ ನೀಡಬೇಕು.

ವಿದ್ಯಾ ಇಲಾಖೆಯಲ್ಲಿ ನೀತಿಗೆ ತುಂಬಾ ಪ್ರಾಧಾನ್ಯತೆಯಿದೆ. ಅರಿತು, ನುರಿತ, ಅಧ್ಯಾಪಕರು ಗಳು ವಿದ್ಯಾರ್ಥಿಗಳಿಗೆ ಆದರ್ಶ ನಡೆಯುಳ್ಳ ಶಿಕ್ಷಕರು ಶಾಲೆ ಕಾಲೇಜುಗಳಲ್ಲಿದ್ದರೆ, ''ಯಥಾ ರಾಜ ತಥಾ ಪ್ರಜಾ'' ಎಂಬಂತೆ ವಿದ್ಯಾರ್ಥಿಗಳ ನೈತಿಕ ಮಟ್ಟವೂ ಬೆಳೆಯುತ್ತದೆ. ವಿದ್ಯಾ ಸಂಸ್ಥೆಗಳ ಪ್ರಧಾನ ಸ್ಥಾನದಲ್ಲಿರುವವರಂತೂ ತುಂಬಾ ಆದರ್ಶತೆಯುಳ್ಳವರಾಗಿರಬೇಕು. ಇಲ್ಲಿ ಜಾತಿ ಭೇದಗಳ ಸೋಂಕಿರಬಾರದು. ಆಕ್ಷೇಪಣೆ ಬಂದಕಡೆ ದಯಾ-ದಾಕ್ಷಿಣ್ಯವಿಲ್ಲದೆ ಬದಲಾವಣೆಗಳಾಗಬೇಕು. ಇಂತಹ ಒಂದು ಆಡಳಿತ ನೀತಿಯನ್ನು ವಿದ್ಯಾ ಇಲಾಖೆ ಜಾರಿಗೆ ತರಲೆಂದು ಸೂಚಿಸುತ್ತೇನೆ. ನನ್ನ ಸಲಹೆ ಕಿವುಡನ ಮುಂದೆ ಹಾಡಿದಂತೆ ವ್ಯರ್ಥವಾಗಬಾರದೆಂದು ಅಪೇಕ್ಷಿಸುತ್ತೇನೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಕೆಸಬಿಯಾಂಕ ಸುಟ್ಟುಹೋದರೂ ಪಿತೃವಾಕ್ಯ ಪರಿಪಾಲನೆ ಮಾಡಿದಂತೆ, ಕಷ್ಟ ನಿಷ್ಠೂರಗಳು ಬಂದರೂ ಒಂದೇ ನಿಷ್ಠೆಯಿಂದ ಬಂದ ವಿದ್ಯಾ ಸಚಿವರನ್ನು ಅಭಿನವ ಕೆಸಬಿಯಾಂಕ ಎಂದು ಕರೆಯಲು ಅಡ್ಡಿಯಿಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, A few days ago when replying to certain questions of mine concerning the delay in payment of the Government contribution to the Provident Fund of Teachers employed in Anglo Indian Schools, the Hon'ble Education Minister spoke of the complexity of the problems when dealing with these Schools after the lapse of the Constitutional Grants-in-aid to which they were entitled to previous to 1960.

Sir, The publicity given to certain observations and statements made in this House concerning these schools, appears to have led to some misunderstanding, and even some misgiving among certain sections of the public, and parents and well wishers of these schools have demanded of me to know what exactly are the facts concerning the status which these Anglo-Indian schools are entitled to enjoy today.

To begin with, what are Anglo-Indian Schools? Allow me to quote the definition officially adopted by The All India Association of Heads of Anglo Indian Schools, a body representative of some 400 and more schools so designated. I quote "Anglo-Indian Schools are those teaching through the medium of English—the mother tongue of the Anglo-Indian community, which were formally governed by separate Codes, and which follow the syllabus and the curriculum with their sections, primary, Middle, and Secondary as one unit, leading primarily to the Indian School Certificate Examination, New Delhi, in corporation with the Cambridge Syndicate, and are under an obligation ordinarily to admit Anglo-Indian pupils who are willing to pay full fees upto fifty percent of the annual admission, and to provide freeships and part freeships to all eligible Anglo-Indian pupils numbering not less than 5 percent of the total enrolment of the school".—unquote.

Sir, This definition has been accepted by certain State Governments and I shall be grateful if the Mysore Government did the same. It would help to remove much of the misunderstanding and difficulties that now arise.

When I have had occasion to meet and discuss matters concerning these schools with even Senior Officials, I have been left with the impression that they are not quite clear in their minds as to what I understand by the Anglo-Indian School. While the greater majority are most anxious to try and help they appear to be anxious to avoid giving any impression that their decisions may be misinterpreted as discriminating in favour of the Anglo-Indian community now that the Constitutional provision in Article 337 is no longer operative.

I hope that the Hon'ble Minister will not misunderstand my saying this for it is by no means intended as a reflection on any of the officials themselves. Sir, I have never questioned the fact that Article 337 of

the Constitution which provided special educational grants for the sole benefit of the Anglo-Indian community, has ceased to be operative since the 25th January 1960.

It has never been my case that despite the fact that Article 337 is not operative, Government must nevertheless contrive to continue the benefits indefinitely even though all State Governments in India did in fact continue acting generously by way of *ad-hoc* grants even after 1960.

In all my representations on behalf of Anglo-Indian Schools, I have invariably taken my stand, not on Article 337, but on Article 30 of the Constitution which gives a fundamental right to minorities based on language or religion to establish and administer educational institutions of their choice. There can be no question but that the Schools now designated "Anglo-Indian" some with histories dating back for more than a hundred years where established for children of the Anglo-Indian community and of the ertswhile European community. Over this long period it was the Anglo-Indian community which contributed by and large and helped to build and maintain these schools. Sir, Article 30 confers an absolute Right, unlike the Rights set out in Article 19, which are subject to reasonable restrictions. The fundamental right granted in Article 30 must be given content and meaning, and these have been clearly expressed in the Supreme Court opinion on the Kerala Education Bill, when referred by the President of India. Sir, I ask Government to invite the attention of all its officers in the Education to the Supreme Court's opinion in the Kerala Education Bill Reference, between minority run schools and other schools, and above all between minority run, aided and un-aided, but recognised schools.

It will be found reported at 1959 S.C.R. A.I.R. 1958. S.C. 956.

Certain clear propositions will be found to emerge from the Supreme Court Opinion in that case.

As I said a little earlier, Anglo-Indian schools even when in receipt of the special grants made under article 337 were required to be treated in law as unaided schools.

Other equally clear propostions also emerge from the Supreme Court opinion. For instance, where such schools receive no aid, any regulation which interferes with their choice was not permissible. Even where such schools did receive aid, and certain regulations became permissible, should these schools at any time elect to exercise their choice, then all that Government could do was to withdraw its aid.

It has also been held by the Supreme Court that neither Government nor any Agency of Government can appoint or direct the appointment of teachers, nor could it prescribe the conditions of service of teachers, nor could it interfere with their dismissal, removal or suspension by the school management.

(SRI P. F. D'MELLOW)

I mention it, Sir, because it has been brought to my notice that there has recently been an attempt on the part of the Director of Public Instruction of this State to undertake certain action which in my opinion will contravene this clear direction of the Supreme Court.

Sir, when speaking on the Mysore Secondary Education Examination Board Bill, a short while ago, I relied on Article 30 of the Constitution, when I pleaded with Government not to interfere in any way the choice that Anglo-Indian schools in the State had made in the matter of their affiliation to the Council for the Indian School certificate examination.

I explained then that the right enjoyed by Anglo-Indian schools in this respect was that clearly conceded and provided for in the Memorandum of the Government of India, Ministry of Home Affairs, issued with the Fifth Report of the Commissioner for Linguistic Minorities, where in para 5 of Appendix II, it is clearly stated that schools and colleges using minority languages should be permitted to affiliate to appropriate bodies outside the State if necessary and that this must be regarded in fact as a necessary corollary to article 30 of the Constitution which gives minorities the right to establish and administer educational institutions of their choice.

SRI S. R. KANTHI.—Afterall, we have not interfered with Anglo-Indian or European Schools to send their children for examination by the Indian Certificate Examination. What we have said is that, if they want to appear, they must appear for the Mysore S. S. L. C. The choice is there. They must take this choice. They can as well appear for the Indian Schools Certificate Examination. We have not interfered with that right.

SRI P. F. D'MELLOW.—Sir, my only motive in saying this is that seeing that all Anglo-Indian schools in the State do take the Indian School Certificate Examination whose syllabus is of a very high order and observing that this Examination and syllabus have been approved by almost every University in the country, these schools, I fear, would find themselves in some difficulty to accept any dictation from Government about text books and other reading material which might well lead to a lowering of their present high standards. This is not to say Anglo-Indian schools would not consider advice from Government, but Sir, the Council for the Indian school Certificate Examination to which these schools are already affiliated and which prescribes the text books and other reading material, is for these schools the competent authority.

I hope that the Hon'ble Minister will not misunderstand my saying so, for it is only what is the correct and legal position.

Sir, ever since I have had the honour to represent the Anglo-Indian community in the state in this Honourable House, I have been studiously

careful, never, never to seek any special position or privilege for it. But on the other hand, I should be failing in my duty, were I to permit it to forego any of the rights more particularly any Fundamental Right that it has been provided under the Constitution of our Country.

Mr. DEPUTY SPEAKER.—The House will now adjourn to meet tomorrow at 1 P.M.

The House adjourned at Six of the Clock to meet again at One of the Clock on Thursday, the 17th March 1966.

WD 6584—GP—500—14-6-66